ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

## ಸೆಪ್ಟೆಂಬರ್

2013

ಸಂಪರ್ಕಿಸಿ:KARUNADUEXAMS.COM

## ರಾಜ್ಯ

### ರಾಜ್ಯದಲ್ಲಿ ಶೀಘ್ರವೇ ಹೊಸ ಜವಳಿ ನೀತಿ ಜಾರಿ

ಮುಂದಿನ ಐದು ವರ್ಷಗಳಲ್ಲಿ ಹತ್ತು ಸಾವಿರ ಕೋಟಿ ನಿರೀಕ್ಷೆ ಹೊಂದಿರುವ 2013-18 ಜವಳಿ ನೀತಿ ಶೀಘ್ರವೇ ಪ್ರಕಟವಾಗಲಿದೆ. ಜವಳಿ ನೀತಿಯ ಕರಡು ಪ್ರತಿ ಈಗಾಗಲೇ ಸಿದ್ಧಗೊಂಡಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆಯಲಿದೆ. ಇದರಿಂದ ಜವಳಿ ಕ್ಷೇತ್ರದಲ್ಲಿ ಸಾಕಷ್ಟು ಹೂಡಿಕೆ ಕಾಣಲಿದ್ದು, ಸುಮಾರು ಐದು ಸಾವಿರ ಉದ್ಯೋಗ ದೊರೆಯಲಿದೆ.

**ನೀತಿಯಲ್ಲಿ ಏನಿದೆ?**

- ಹೊಸ ಜವಳಿ ಪಾರ್ಕ್ ಗಳ ಸ್ಥಾಪನೆ, ನೇಕಾರಿರಗೆ ವಿದ್ಯುತ್ ಸಬ್ಸಿಡಿ, ಸಿದ್ಧ ಉಡುಪು ಕಾರ್ಖಾನೆಗಳಿಗೆ ಪ್ರೋತ್ಸಾಹ ಮುಂತಾದ ಅಂಶಗಳನ್ನು ನೀತಿ ಒಳಗೊಂಡಿರಲಿದೆ.
- ಈ ಹೊಸ ನೀತಿಯಿಂದ ಮುಂದಿನ ಐದು ವರ್ಷದಲ್ಲಿ ಜವಳಿ ಕ್ಷೇತ್ರದಲ್ಲಿ 10 ಸಾವಿರ ಕೋಟಿ ಹೂಡಿಕೆ ಆಗಲಿದೆ.

**ಜವಳಿ ಪಾರ್ಕ್**

- **ಯಾದಗಿರಿ** ಯಲ್ಲಿ ಸುಮಾರು 1 ಸಾವಿರ ಎಕರೆ ಪ್ರದೇಶದಲ್ಲಿ ಜವಳಿ ಪಾರ್ಕ್ ನಿರ್ಮಿಸಲಾಗುವುದು. ಈ ಜವಳಿ ಪಾರ್ಕ್ ನಿಂದ 12 ಸಾವಿರ ಮಂದಿಗೆ ಉದ್ಯೋಗ ಲಭಿಸಲಿದೆ.
- **ಹಾಸನದಲ್ಲೂ** ಸಹ ಖಾಸಗಿ ಸಂಸ್ಥೆಯೊಂದು ಜವಳಿ ಪಾರ್ಕ್ ನಿರ್ಮಿಸಲು ಮುಂದೆ ಬಂದಿದ್ದು, ಈಗಾಗಲೇ ಭೂಮಿ ಖರೀದಿ ಸೇರಿದಂತೆ ಸಿದ್ಧತೆ ನಡೆದಿದೆ. ಈ ಜವಳಿ ಪಾರ್ಕ್ ನಲ್ಲಿ 300 ರೂ ಕೋಟಿ ಬಂಡವಾಳ ಹೂಡಲು ಚಿಂತಿಸಲಾಗಿದೆ.

### ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಕರಾಟೆ ಕಲಿಸುವ ಕಾರ್ಯಕ್ರಮಕ್ಕೆ ಅನುಮೋದನೆ

ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿನಿಯರಿಗೆ ಕರಾಟೆ ಕೌಶಲ ಕಲಿಸುವ ಮೂಲಕ ಸ್ವಯಂ ರಕ್ಷಣಾ ಸಾಮರ್ಥ್ಯ ಬೆಳೆಸುವ ಕಾರ್ಯಕ್ರಮಕ್ಕೆ ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಯೋಜನೆ ಅನುಮೋದನೆ ನೀಡಿದ್ದು, ಸೆ.30ರಿಂದ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ತರಬೇತಿ ಆರಂಭವಾಗಲಿದೆ. 2013-14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 4,442 ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ತರಬೇತಿಯನ್ನು ಕರಾಟೆ ಮೂಲಕ ಕಲಿಸುವ ಮೂಲಕ ನೀಡಲು 66.63 ಲಕ್ಷ ರುಪಾಯಿ ಅನುದಾನ ಮಂಜೂರಾಗಿದೆ. ಅನುಮೋದಿತ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

**ತುರ್ತು ಅಗತ್ಯ:**

ಹೆಣ್ಣು ಮಕ್ಕಳು ಪ್ರತಿಕೂಲ ಸನ್ನಿವೇಶಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವಷ್ಟು ಸಮರ್ಥರನ್ನಾಗಿಸಿ ಮಾಡುವುದು ಇಂದಿನ ತುರ್ತು ಅಗತ್ಯ. ಈ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಕರಾಟೆ ಕಲಿಸುವ ಚಟುವಟಿಕೆಯನ್ನು ಆಯೋಜಿಸಲಾಗಿದೆ ಎಂಬುದು ಶಿಕ್ಷಣ ಇಲಾಖೆ ವಿವರಣೆ.

**ದೈಹಿಕ ಶಿಕ್ಷಣ:**

ಪ್ರತಿ ಶಾಲೆಗೆ ಹೋಗಿ ಕರಾಟೆ ಕಲಿಸುವಷ್ಟು ತರಬೇತುದಾರರು ಲಭ್ಯವಾಗದ ಹಿನ್ನೆಲೆಯಲ್ಲಿ ಹಾಗೂ ಕರಾಟೆಯನ್ನು ನಿಯಮಿತವಾಗಿ ಶಾಲಾ ಅವಧಿಯಲ್ಲಿ ಕಲಿಸುವ ಮೂಲಕ ಕರಾಟೆಯನ್ನು ದೈಹಿಕ ಶಿಕ್ಷಣದ ಒಂದು ಭಾಗವನ್ನಾಗಿ ಮಾಡಲು ಪ್ರತಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಿಗೆ ಕರಾಟೆ ಮೂಲಕ ತರಬೇತಿ ನೀಡಿ ಅವರ ಮೂಲಕ ವಿದ್ಯಾರ್ಥಿನಿಯರಿಗೆ ಈ ಕೌಶಲ ಕಲಿಸಲು ನಿರ್ಧರಿಸಲಾಗಿದೆ. ಈ ಸಂಬಂಧ 30 ಅವಧಿಗಳ ಕೋರ್ಸ್‌ನ್ನು ಗುರುತಿಸಲ್ಪಟ್ಟ ಕರಾಟೆ ಸಂಘಟನೆಗಳಿಂದ ತಯಾರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**ಕನ್ನಡ ಶಾಸ್ತ್ರೀಯ ಭಾಷಾ ವಿಭಾಗ ಬೆಂಗಳೂರಿನಲ್ಲಿ**

ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನದಿಂದ ಕನ್ನಡ ಶಾಸ್ತ್ರೀಯ ಭಾಷೆಯ ವಿಭಾಗ ಪ್ರತ್ಯೇಕಗೊಂಡು ಬೆಂಗಳೂರಿನಲ್ಲಿ ಶೀಘ್ರ ಆರಂಭವಾಗಲಿದೆ. ಈ ಮೂಲಕ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರಕಿದ ಹಿನ್ನೆಲೆಯಲ್ಲಿ ಭಾಷಾಭಿವೃದ್ಧಿಯ ಸಣ್ಣ ಆಶಾಕಿರಣ ಮೂಡಿದೆ. ಈಗಾಗಲೇ ಮೌಖಿಕವಾಗಿ ಸಮ್ಮತಿ ಸೂಚಿಸಿರುವ ಭಾರತೀಯ ಭಾಷಾ ಸಂಸ್ಥಾನ ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆದು ಒಪ್ಪಿಗೆ ಸೂಚಿಸಿದರೆ ಶಾಸ್ತ್ರೀಯ ಭಾಷೆಯ ವಿಭಾಗ ಪ್ರತ್ಯೇಕವಾಗಿ ಸ್ವಾಯತ್ತ ಸಂಸ್ಥೆಯ ರೂಪದಲ್ಲಿ ರಾಜಧಾನಿಯಲ್ಲಿಯೇ ಆರಂಭವಾಗಲಿದೆ.

**ಕನ್ನಡ ಶಾಸ್ತ್ರೀಯ ಭಾಷಾ ವಿಭಾಗ:**

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದಂದಿನಿಂದ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲೇ ಕನ್ನಡ ಭಾಷೆಯ ಶಾಸ್ತ್ರೀಯ ಭಾಷಾ ವಿಭಾಗವಿತ್ತು. ಶಾಸ್ತ್ರೀಯ ಭಾಷೆಗಳ ಅನುದಾನ, ಅಭಿವೃದ್ಧಿ ವಿಚಾರವಾಗಿ ಇಲ್ಲಿಂದಲೇ ಕೇಂದ್ರಕ್ಕೆ ಮನವಿ ಮಡಿಕೊಳ್ಳಬೇಕಿತ್ತು. ಇಲ್ಲಿ ರಾಜ್ಯ ಸರ್ಕಾರ ಯಾವುದೇ ರೀತಿಯ ಮಧ್ಯ ಪ್ರವೇಶ ಮಾಡುವಂತಿರಲಿಲ್ಲ. ಮಾತ್ರವಲ್ಲದೆ ವಿಶೇಷವಾಗಿ ಭಾಷಾಭಿವೃದ್ಧಿಯತ್ತ ಗಮನ ಹರಿಸಲೂ ಸಾಧ್ಯವಾಗುತ್ತಿರಲಿಲ್ಲ. ಸಂಶೋಧನೆಗೆ, ಅಧ್ಯಯನಕ್ಕೆ ಬೇಕಾದ ಪ್ರಶಸ್ತ ಜಾಗವೂ ಇಲ್ಲಿರಲಿಲ್ಲ.

**ಜಾಗ ಎಲ್ಲಿ?**

ಬೆಂಗಳೂರು ವಿಶ್ವ ವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸರ್ಕಾರ ಕಲಾಗ್ರಾಮಕ್ಕೆಂದು ಜಮೀನು ನೀಡಿತ್ತು. ಮೂಲತಃ ಇದು ಬೆಂಗಳೂರು ವಿವಿ ಜಮೀನು. ಕಲಾಗ್ರಾಮದ ನಿವೇಶನದ ಒಳಗಡೆಯೇ ಇಂದಿರಾಗಾಂಧಿ ಆರ್ಟ್ ಫೌಂಡೇಷನ್ ವಿಭಾಗವಿದೆ. ಈ ಆರ್ಟ್ ಫೌಂಡೇಷನ್ 6 ಎಕರೆ ಜಾಗದಲ್ಲಿದೆ. ಆದರೆ ಅಷ್ಟೂ ಜಾಗ ಬಳಕೆಯಾಗುತ್ತಿಲ್ಲ. ಹಾಗಾಗಿ ಅದರಲ್ಲಿ ಮೂರು ಎಕರೆ ಜಾಗವನ್ನು ವಾಪಸ್ ಕೊಡಲು ಫೌಂಡೇಷನ್ ತಯಾರಿದೆ. ಪ್ರಮುಖವಾಗಿ ಶಾಸ್ತ್ರೀಯ ಭಾಷಾ ವಿಭಾಗ ಸ್ಥಾಪನೆಯಾಗಬೇಕೆಂಬ ಕಾರಣಕ್ಕಾಗಿ ಸ್ಥಳ ನೀಡುತ್ತಿದೆ.

**ವರ್ಗಾವಣೆಯಿಂದಾಗುವ ಪ್ರಯೋಜನಗಳು:**

- ಕನ್ನಡ ಶಾಸ್ತ್ರೀಯ ಭಾಷಾ ವಿಭಾಗ ಸ್ವತಂತ್ರ ಸಂಸ್ಥೆಯಾಗುತ್ತದೆ.
- ಕರ್ನಾಟಕ ಸರ್ಕಾರದ ನೇರ ಅಧೀನ ಸಂಸ್ಥೆಯಾಗುತ್ತದೆ.
- ಇದುವರೆಗೆ ಭಾಷಾ ಸಂಸ್ಥಾನ ಮತ್ತು ಕೇಂದ್ರ ಸರ್ಕಾರದ ನಡುವೆ ವ್ಯವಹಾರ ನಡೆಯುತ್ತಿತ್ತು. ಇನ್ನು ರಾಜ್ಯ ಸರ್ಕಾರ ನೇರವಾಗಿ ಭಾಷಾಭಿವೃದ್ಧಿ ಕುರಿತು ಕೇಂದ್ರವನ್ನು ಸಂಪರ್ಕಿಸಬಹುದು.
- ಕನ್ನಡದ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ರಚಿಸಬಹುದು.
- ಕೇಂದ್ರ ಸರ್ಕಾರದಿಂದ ಭಾಷಾಭಿವೃದ್ಧಿಗೆ ಬೇಕಾದ ಅನುದಾನ ಪಡೆದುಕೊಳ್ಳಬಹುದು.
- ಭಾರತೀಯ ಭಾಷಾಸಂಸ್ಥಾನದ ಶಾಸ್ತ್ರೀಯ ಭಾಷಾ ವಿಭಾಗದಲ್ಲಿ ಪ್ರಾಚೀನ ಕನ್ನಡದ ಬಗ್ಗೆ ಮಾತ್ರ ಗಮನಹರಿಸಲಾಗುತ್ತಿತ್ತು. ಪ್ರತ್ಯೇಕ ವಿಭಾಗ ಸ್ಥಾಪನೆಯಿಂದ ಕನ್ನಡದ ಸಂಶೋಧನೆಯ ವಿಚಾರಗಳನ್ನು ವಿಸ್ತರಿಸಿಕೊಳ್ಳಬಹುದು.
- ರಾಜ್ಯದ ಎಲ್ಲಾ ವಿವಿಗಳ ಕನ್ನಡ ವಿಭಾಗಗಳು ಭಾಷೆಗೆ ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆಗಳನ್ನು ಮಾಡುತ್ತಿವೆ. ಕನ್ನಡ ವಿಶ್ವವಿದ್ಯಾಲಯವೂ ಇದರಲ್ಲಿ ಸೇರಿದೆ.
- ಪ್ರತ್ಯೇಕವಾದ ಕನ್ನಡ ಶಾಸ್ತ್ರೀಯ ಭಾಷಾ ವಿಭಾಗದಿಂದ ಕನ್ನಡ ವಿಚಾರದಲ್ಲಿ ಭಿನ್ನವಾದ ಸಂಶೋಧನೆಗಳನ್ನು ಮಾಡಬಹುದು.
- ಪ್ರಾಚ್ಯ ಭಾಷಾ ಸಂಶೋಧನೆಯಲ್ಲದೆ ಕನ್ನಡದ ಎಲ್ಲಾ ಆಧುನಿಕ ಚಿಂತನೆಗಳನ್ನೂ ಸಂಶೋಧನೆಯೊಳಗೆ ಸೇರಿಸಿಕೊಳ್ಳಬಹುದು. ಪ್ರಾಚೀನ ಚಿತ್ರಕಲೆ, ಶಿಲ್ಪಕಲೆ ಹೀಗೆ ಕನ್ನಡದ ನಾನಾ ಪ್ರಕಾರಗಳಿಗೂ ಒತ್ತು ನೀಡಬಹುದು.

**2013 ಕ್ಕೆ ಅನ್ವಯವಾಗುವಂತೆ ಕರ್ನಾಟಕದ ಸಾಕ್ಷರತೆ: ಒಂದು ಪಕ್ಷಿನೋಟ**

ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ವಿಷಯದಲ್ಲಿ ರಾಜ್ಯ ಸರ್ಕಾರದ ಸಾಧನೆ ಅಷ್ಟೇನೂ ಗಮನಾರ್ಹವಾಗಿಲ್ಲ. ಆರು ಕೋಟಿ ಜನಸಂಖ್ಯೆಯ ಕರ್ನಾಟಕದಲ್ಲಿ ಇನ್ನೂ ಎರಡು ಕೋಟಿ ಜನರಿಗೆ ಓದು-ಬರಹ ಗೊತ್ತಿಲ್ಲ. ಸಾಕ್ಷರತಾ ಆಂದೋಲನದ ಹೆಸರಿನಲ್ಲಿ

ಸರ್ಕಾರ ಪ್ರತಿವರ್ಷ ಅಂದಾಜು 8 ರಿಂದ 9 ಕೋಟಿ ರೂ. ಖರ್ಚು ಮಾಡುತ್ತಿದೆ. ಇಷ್ಟೊಂದು ದೊಡ್ಡ ಮೊತ್ತದ ಹಣ ಖರ್ಚು ಮಾಡಿಯೂ ಕಳೆದ ಒಂದು ದಶಕದ ರಾಜ್ಯದ ಸಾಕ್ಷರತಾ ಸಾಧನೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯೇ ಇದೆ.

**ಬೆಳವಣಿಗೆ ನಿರಾಶಾದಾಯಕ:**

- ಕಳೆದ ದಶಕದಲ್ಲಿ ದೇಶದ ಸಾಕ್ಷರತೆಯಲ್ಲಿ ಸರಾಸರಿ ಶೇ.9.2ರಷ್ಟು ಬೆಳವಣಿಗೆಯಾಗಿದೆ. ಆದರೆ, ನಮ್ಮ ರಾಜ್ಯದಲ್ಲಿ ಶೇ. 8.86 ಮಾತ್ರ. ಅಂದರೆ ವಾರ್ಷಿಕ ಪ್ರಗತಿ ಶೇ.0.9 ಮಾತ್ರ.
- 2001 ರಲ್ಲಿ ಶೇ.66.64 ರಷ್ಟಿದ್ದ ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ.75.50ಕ್ಕೆ ಏರಿಕೆಯಾಗಿದೆ.
- ಶಾಲಾ ಶಿಕ್ಷಣ ಮತ್ತು ಔಪಚಾರಿಕ ಶಿಕ್ಷಣ ಪದ್ಧತಿಯ ವ್ಯಾಪ್ತಿಯಿಂದ ಹೊರಗುಳಿಯುವ 15 ವರ್ಷ ಮೇಲ್ಪಟ್ಟವರಿಗೆ ಓದು-ಬರಹ ಹಾಗೂ ಸರಳ ಗಣಿತ ಕಲಿಸುವುದು ಸಾಕ್ಷರತೆ ಕಾರ್ಯಕ್ರಮದ ವ್ಯಾಪ್ತಿಗೆ ಬರುತ್ತದೆ. ಇದಕ್ಕಾಗಿ ಕೇಂದ್ರ ಸರ್ಕಾರ ಪ್ರಾಯೋಜಿತ ಮತ್ತು ರಾಜ್ಯಸರ್ಕಾರದ ವಿವಿಧ ಯೋಜನೆಗಳನ್ನು ಪ್ರತಿ ವರ್ಷ ಅನುಷ್ಠಾನಗೊಳಿಸಲಾಗುತ್ತದೆ.
- 2001ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 1.76 ಕೋಟಿ ಪುರುಷರು ಹಾಗೂ 1.27 ಕೋಟಿ ಮಹಿಳೆಯರು ಸೇರಿದಂತೆ ಒಟ್ಟಾರೆ 3.04 ಕೋಟಿ ಜನ ಸಾಕ್ಷರರಿರುವ ಬಗ್ಗೆ ವರದಿ ಮಾಡಿತ್ತು.
- 2011ರ ಜನಗಣತಿಯ ಪ್ರಕಾರ 2.28 ಕೋಟಿ ಪುರುಷರು ಹಾಗೂ 1.82 ಕೋಟಿ ಮಹಿಳೆಯರು ಸೇರಿದಂತೆ 4.10 ಕೋಟಿ ಜನ ಅಕ್ಷರ ಕಲಿತವರಿದ್ದರೂ ರಾಜ್ಯದಲ್ಲಿ ಇನ್ನೂ 2.01 ಕೋಟಿ ಜನ ಅನಕ್ಷರಸ್ಥರಿದ್ದಾರೆ.

**ಮೈಸೂರು ರಾಜ್ಯದಲ್ಲೇ ಆರಂಭ:**

ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಸಾಕ್ಷರತಾ ಕಾರ್ಯಕ್ರಮವನ್ನು ದೇಶದಲ್ಲೇ ಮೊದಲು ಆರಂಭಿಸಿದ ಹೆಗ್ಗಳಿಕೆ ಕರ್ನಾಟಕಕ್ಕೆ ಸಲ್ಲುತ್ತದೆ. ಪ್ರಜಾ ಸರ್ಕಾರ ಬರುವ ಮುನ್ನ ಅಂದಿನ ಮೈಸೂರು ಮಹಾರಾಜರು ತಮ್ಮ ಆಡಳಿತದಲ್ಲಿ ರಾಜ್ಯ ವಯಸ್ಕರ ಶಿಕ್ಷಣ ಪರಿಷತ್ ಮೂಲಕ ಸಾಕ್ಷರತಾ ಚಟುವಟಿಕೆಗೆ ಉತ್ತೇಜನ ನೀಡಿದ್ದರು. ಅಲ್ಲದೇ, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ ಎರಡನೇ ರಾಜ್ಯ ಎಂಬ ಖ್ಯಾತಿ ಸಹ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಇಷ್ಟಿದ್ದರೂ ಸ್ವಾತಂತ್ರ್ಯಾನಂತರ ರಾಜ್ಯದ ಸಾಕ್ಷರತೆ ಪ್ರಮಾಣ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿಲ್ಲ. 1947ರಲ್ಲಿ ಶೇ.14ರಷ್ಟಿದ್ದ ಸಾಕ್ಷರತೆ ಪ್ರಮಾಣ 60 ವರ್ಷಗಳ ನಂತರ ಶೇ.75ರಷ್ಟಾಗಿದೆ. 1961ರಿಂದ 2011ರವರೆಗೆ ಪ್ರತಿ ಹತ್ತು ವರ್ಷಗಳ ಸರಾಸರಿ ಸಾಕ್ಷರತಾ ಪ್ರಮಾಣ ಶೇ.10 ಮೀರಿಲ್ಲ.

**ಸಂಪೂರ್ಣ ಸಾಕ್ಷರ ರಾಜ್ಯ:**

- ಸಂಪೂರ್ಣ ಸಾಕ್ಷರ ರಾಜ್ಯ ಎನಿಸಿಕೊಳ್ಳಬೇಕಾದರೆ ರಾಜ್ಯದ ಒಟ್ಟು ಸಾಕ್ಷರತೆ ಪ್ರಮಾಣ ಶೇ.95ರಷ್ಟಾಗಬೇಕು. ಈ 60 ವರ್ಷಗಳ ನಿಧಾನಗತಿ ಗಮನಿಸಿದರೆ ಕರ್ನಾಟಕ ರಾಜ್ಯ ಸಂಪೂರ್ಣ ಸಾಕ್ಷರ ರಾಜ್ಯ ಎನಿಸಿಕೊಳ್ಳಲು ಇನ್ನೂ ಕನಿಷ್ಠ 20ರಿಂದ 30 ವರ್ಷ ಬೇಕು.
- ಇದೇ ಸಂದರ್ಭದಲ್ಲಿ ಸಾಕ್ಷರತೆಯಲ್ಲಿ ಪ್ರಾದೇಶಿಕ, ಲಿಂಗ ಮತ್ತು ವರ್ಗದ ಅಸಮಾನತೆ ಕೂಡ ಇನ್ನೂ ದೂರವಾಗಿಲ್ಲ.

- 2011ರ ಜನಗಣತಿ ಪ್ರಕಾರ ರಾಜ್ಯದ 12 ಜಿಲ್ಲೆಗಳ ಸಾಕ್ಷರತಾ ಪ್ರಮಾಣ ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ 13 ಜಿಲ್ಲೆಗಳ ಸಾಕ್ಷರತಾ ಪ್ರಮಾಣ ಒಟ್ಟಾರೆಗಿಂತ ಕಡಿಮೆ ಇದೆ.
- ಏಳು ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ಶೇ.60ಕ್ಕೂ ಕಡಿಮೆ ಇದೆ. ದಕ್ಷಿಣ ಕನ್ನಡ ಜಿಲ್ಲೆ ಶೇ.88.62 ಸಾಕ್ಷರತೆ ಹೊಂದುವ ಮೂಲಕ ರಾಜ್ಯದ ಒಟ್ಟಾರೆ ಸಾಕ್ಷರತೆ ಪ್ರಮಾಣಕ್ಕಿಂತ ಮುಂದಿದ್ದರೆ ಯಾದಗಿರಿ ಜಿಲ್ಲೆ 52.36 ಕೊನೆ ಸ್ಥಾನದಲ್ಲಿದೆ.

**ಕುಂಟುತ್ತಾ ಸಾಗಿದ ಸಾಕ್ಷರ ಭಾರತ:**

ಮೂಲ ಸಾಕ್ಷರತೆಯ ಕಲ್ಪನೆಯೊಂದಿಗೆ 2001ರಲ್ಲಿ ಆರಂಭಿಸಿದ ಸಾಕ್ಷರ ಭಾರತ ಕಾರ್ಯಕ್ರಮ ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿದ್ದು 2011ರಲ್ಲಿ. 2012-13ನೇ ಸಾಲಿನಲ್ಲಿ ಮೊದಲ ಹಂತದಲ್ಲಿ 16 ಮತ್ತು 2ನೇ ಹಂತದಲ್ಲಿ 2 ಜಿಲ್ಲೆಗಳಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ 177 ಕೋಟಿ ರೂ. ಮಂಜೂರಾಗಿದೆ. ಮಾರ್ಚ್ 2014ರೊಳಗೆ 40 ಲಕ್ಷ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವ ಗುರಿ ಹೊಂದಲಾಗಿದೆ. ಆದರೆ, ಈ ಯೋಜನೆಯ ಅನುಷ್ಠಾನಕ್ಕೆ ಸಮರ್ಪಕ ಕ್ರಿಯಾ ಯೋಜನೆ ಇನ್ನೂ ರೂಪುಗೊಂಡಿಲ್ಲ.

**ಕರ್ನಾಟಕದಲ್ಲಿ ಹುಲಿ ಗಣತಿಗೆ ಸಕಲ ಸಿದ್ಧತೆ : ವರದಿ**

ದೇಶದಲ್ಲೇ ಅತಿ ಹೆಚ್ಚು ಹುಲಿಗಳಿರುವ ರಾಜ್ಯ ಎಂಬ ಖ್ಯಾತಿಗೆ ಕರ್ನಾಟಕ ಪಾತ್ರವಾಗಿದೆ. 2009ರಲ್ಲಿ ದೇಶದ ನಾನಾ ಅಭಯಾರಣ್ಯಗಳಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ನಡೆಸಿದ ಸಮೀಕ್ಷೆ ಪ್ರಕಾರ, ರಾಜ್ಯದಲ್ಲಿ 300ಕ್ಕೂ ಹೆಚ್ಚು ಹುಲಿಗಳು ಕಂಡು ಬಂದಿದ್ದವು. ಇದೀಗ ನಾಲ್ಕು ವರ್ಷದ ನಂತರ ಮತ್ತೆ ದೇಶದ ಎಲ್ಲ ಕಾಡುಗಳಲ್ಲೂ ಹುಲಿ ಹುಡುಕಾಟಕ್ಕೆ ವೇದಿಕೆ ಸಜ್ಜಾಗಿದೆ. ಅಂತೆಯೇ ಕರ್ನಾಟಕದಲ್ಲಿ ಈ ಹುಲಿ ಗಣತಿ ಅಕ್ಟೋಬರ್ ಎರಡನೇ ವಾರದಿಂದ ಶುರು ಆಗಲಿದ್ದು, ಡಿಸೆಂಬರ್ ಅಂತ್ಯದ ವೇಳೆಗೆ ಈ ಲೆಕ್ಕಾಚಾರ ಮುಗಿಯಲಿದೆ.

ಹುಲಿ ತಜ್ಞರು, ಅರಣ್ಯ ಇಲಾಖೆ ಸಿಬ್ಬಂದಿ, ಎನ್‌ಟಿಸಿಎ ಮಂದಿ, ಎನ್‌ಜಿಒ, ಸ್ವಯಂ ಸೇವಕರು ಸೇರಿದಂತೆ 1,200 ಮಂದಿ ಮೂರು ತಿಂಗಳು ನಡೆಸಲಿರುವ ಈ ಕಸರತ್ತಿಗೆ ಅಂದಾಜು 2.5 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ. ರಾಜ್ಯದ ಐದು ಹುಲಿ ಕಾಡುಗಳು ಮಾತ್ರವಲ್ಲ, ಹುಲಿಗಳು ಕಾಣಸಿಗುವ 16 ವನ್ಯಜೀವಿಧಾಮಗಳಲ್ಲೂ ಈ ಹುಲಿ ಗಣತಿ ನಡೆಯಲಿದೆ.

**ಎಲ್ಲೆಲ್ಲಿ ಹುಲಿ ಗಣತಿ?**

ಹುಲಿ ಕಾಡುಗಳಾದ ಬಂಡೀಪುರ, ನಾಗರಹೊಳೆ, ಭದ್ರಾ, ಅಣಶಿ- ದಾಂಡೇಲಿ ಮತ್ತು ಬಿಳಿಗಿರಿ ರಂಗನ ಬೆಟ್ಟ ಅರಣ್ಯಗಳಲ್ಲಿ ಹುಲಿ ಸಮೀಕ್ಷೆ ನಡೆಯಲಿದೆ. ಜತೆಯಲ್ಲೇ, ಹುಲಿಗಳು ಕಂಡು ಬರುವ ರಾಜ್ಯದ ಅಭಯಾರಣ್ಯಗಳಾದ ಕುದುರೆಮುಖ, ಬೆಳಗಾವಿ ಭಾಗದ ಭೀಮಗಢ, ಕಣಕುಂಬಿ, ಜಾಂಬವತಿ, ನಾಗರಗಾಳಿ (ಹಳಿಯಾಳ) ಸೇರಿದಂತೆ ಶರಾವತಿ ಕಣಿವೆ, ಅಘನಾಸಿಶಿ ಕಣಿವೆ, ಬಾಬಾ

ಬುಡನ್‌ಗಿರಿ, ಬಿಸಿಲೆ, ಕಾಡುಮನೆ, ಕಾಗೇರಿ, ಕರ್ಟಿ- ಉರ್ತಿ, ಕಾವೇರಿ ವನ್ಯಜೀವಿಧಾಮ, ಮಲೈ ಮಹದೇಶ್ವರ ಬೆಟ್ಟ ಮತ್ತು ಪುದಿನಾಲ್ಕು ಕಾಡುಗಳಲ್ಲೂ ಹುಲಿ ಗಣತಿ ನಡೆಸಲು ಅರಣ್ಯ ಇಲಾಖೆ ತೀರ್ಮಾನಿಸಿದೆ.

**ಪೆರಿಯಾರ್‌ನಲ್ಲಿ 3 ದಿನ ತರಬೇತಿ**

ಹುಲಿ ಗಣತಿ ನಡೆಸುವ ವಿಧಾನವನ್ನು ಅರಣ್ಯ ಇಲಾಖೆ ಸಿಬ್ಬಂದಿಗೆ ಮನವರಿಕೆ ಮಾಡಿಕೊಡಲು ಎನ್‌ಟಿಸಿಎ- ಕೇರಳದ ತೇಕಡಿಯಲ್ಲಿರುವ ಪೆರಿಯಾರ್ ಹುಲಿ ಕಾಡಿನಲ್ಲಿ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಿದೆ. ಅಕ್ಟೋಬರ್ 7ರಿಂದ 9ರ ತನಕ ಈ ತರಬೇತಿ ಕಾರ್ಯಕ್ರಮ ನಡೆಯಲಿದೆ. ಇದಕ್ಕೆ ರಾಜ್ಯದ ಎಲ್ಲ ಕಾಡುಗಳಿಂದ ವಲಯ ಅರಣ್ಯ ಸಂರಕ್ಷಣಾಧಿಕಾರಿ (ಆರ್‌ಎಫ್‌ಒ) ದರ್ಜೆಗಿಂತ ಮೇಲಿನ 300ಕ್ಕೂ ಹೆಚ್ಚು ಸಿಬ್ಬಂದಿಯನ್ನು ಕಳುಹಿಸಲು ನಿರ್ಧರಿಸಲಾಗಿದೆ. ಈ ಅಧಿಕಾರಿಗಳು ನಂತರ ತಮ್ಮ ವ್ಯಾಪ್ತಿಯ ವಾಚರ್, ಗಾರ್ಡ್ ಸೇರಿದಂತೆ ಎನ್‌ಜಿಒ ಸಿಬ್ಬಂದಿ ಹಾಗೂ ಸ್ವಯಂ ಸೇವಕರಿಗೆ ಹುಲಿ ಹುಡುಕುವ ಮತ್ತು ಇದನ್ನು ದಾಖಲಿಸುವ ವಿಧಾನವನ್ನು ತಿಳಿಸಿಕೊಡಲಿದ್ದಾರೆ. ಒಟ್ಟಿನಲ್ಲಿ ಈ ಹುಲಿ ಗಣತಿಯಲ್ಲಿ 1,200 ಮಂದಿ ಪಾಲ್ಗೊಳ್ಳಲಿದ್ದಾರೆ ಮತ್ತು 2.5 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ.

**ಮೂರು ಹಂತದಲ್ಲಿ ಗಣತಿ:**

ಮೂರು ಹಂತದಲ್ಲಿ ಹುಲಿ ಗಣತಿ ನಡೆಯಲಿದೆ. ಮೊದಲ ಹಂತದಲ್ಲಿ ಹುಲಿ ವಾಸ ಸ್ಥಾನವನ್ನು ಪತ್ತೆ ಮಾಡಲಾಗುವುದು. ಹುಲಿಗಳ ಹೆಜ್ಜೆ ಗುರುತು, ಅವುಗಳ ವಿಸರ್ಜನೆ ಇತ್ಯಾದಿಗಳನ್ನು ಪತ್ತೆ ಮಾಡಿ, ಆ ಭಾಗದಲ್ಲಿ ಹುಲಿ ಇರುವಿಕೆಯನ್ನು ಮೊದಲು ಖಾತ್ರಿ ಮಾಡಿಕೊಳ್ಳಲಾಗುತ್ತದೆ. ಎರಡನೇ ಹಂತದಲ್ಲಿ ಈ ಪ್ರದೇಶದ ಆಯಕಟ್ಟಿನ ಜಾಗದಲ್ಲಿ ಕ್ಯಾಮೆರಾಗಳನ್ನು ಅಳವಡಿಸಿ (ಕ್ಯಾಮೆರಾ ಟ್ರ್ಯಾಪ್) ಹುಲಿಗಳ ಚಲನವಲನಗಳನ್ನು 40 ದಿನಗಳ ಕಾಲ ದಾಖಲಿಸಲಾಗುವುದು. ಮೂರನೇ ಹಂತದಲ್ಲಿ ಈ ಎಲ್ಲ ಮಾಹಿತಿಯನ್ನು ಭಾರತೀಯ ವನ್ಯಜೀವಿ ಸಂಸ್ಥೆ- ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ, ಅಂತಿಮವಾಗಿ ಹುಲಿಗಳ ಸಂಖ್ಯೆಯನ್ನು ಪ್ರಕಟಿಸುತ್ತದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಜಿ.ಎಸ್.ಪ್ರಭು 'ವಿಜಯ ಕರ್ನಾಟಕ'ಕ್ಕೆ ತಿಳಿಸಿದರು.

**ನಾವೇ ನಂ.1:**

''2005ರ ಹುಲಿ ಗಣತಿಯ ಅಂಕಿ- ಅಂಶದ ಪ್ರಕಾರ, ಮಧ್ಯಪ್ರದೇಶದಲ್ಲಿ 350ಕ್ಕೂ ಹೆಚ್ಚು ಹುಲಿಗಳಿದ್ದವು. ಆದರೆ, 2009ರ ಸಮೀಕ್ಷೆಯಲ್ಲಿ ಮಧ್ಯಪ್ರದೇಶದಲ್ಲಿ ಅಂದಾಜು 260 ಹುಲಿಗಳಷ್ಟೇ ಸಿಕ್ಕಿದವು. ಆದರೆ, ಕರ್ನಾಟಕದ ಕಾಡುಗಳಲ್ಲಿ ಈ ವೇಳೆಗೆ ಹುಲಿಗಳ ಸಂಖ್ಯೆ 300 ದಾಟಿ, ನಾವು ಮೊದಲ ಸ್ಥಾನಕ್ಕೆ ಬಡ್ತಿ ಪಡೆದವು. ಈ ಬಾರಿಯೂ ಅಷ್ಟೇ ನಾವೇ ನಂಬರ್ 1 ಸ್ಥಾನವನ್ನು ಕಾಯ್ದುಕೊಳ್ಳುತ್ತೇವೆ,'' ಎಂದು ಹುಲಿ ಕಾಡಿನ ಅರಣ್ಯಾಧಿಕಾರಿಯೊಬ್ಬರು ವಿಶ್ವಾಸ ವ್ಯಕ್ತಪಡಿಸಿದರು. ''ನಾಲ್ಕು ವರ್ಷದಲ್ಲಿ

ಮಧ್ಯಪ್ರದೇಶದ ಕಾಡುಗಳಲ್ಲಿ ಸುಮಾರು 65ಕ್ಕೂ ಹೆಚ್ಚು ಹುಲಿಗಳು ಮೃತಪಟ್ಟಿವೆ. ಆದರೆ, ರಾಜ್ಯದ ಕಾಡುಗಳಲ್ಲಿ ಈ ಸಾವಿನ ಸಂಖ್ಯೆ 40 ದಾಟಿಲ್ಲ. ಜತೆಗೆ, ಹುಲಿಗಳ ಸಂತಾನೋತ್ಪತ್ತಿಯೂ ನಮ್ಮ ಕಾಡುಗಳಲ್ಲಿ ಹೆಚ್ಚಿದೆ,'' ಎಂದೂ ಅವರು ವಿವರಣೆ ನೀಡಿದರು.

**ಶಿಕ್ಷಣ ಜಾಗೃತಿ ಕುರಿತ ಅಭಿಯಾನಕ್ಕೆ ನಟ ಪುನೀತ್ ಮತ್ತು ರಾಧಿಕಾ ರಾಯಭಾರಿಗಳು**

ಕಿರುತೆರೆಯಲ್ಲಿ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮ ನಡೆಸಿ ಜನರ ಮನಸ್ಸು ಗೆದ್ದಿರುವ ಕನ್ನಡ ಚಿತ್ರರಂಗದ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಇದೀಗ ಶಿಕ್ಷಣ ವಂಚಿತ ಮಕ್ಕಳಿಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳಿ ಹೇಳುವ ಅಭಿಯಾನಕ್ಕೆ ಮುಂದಾಗುತ್ತಿದ್ದಾರೆ, ಮತ್ತು ನಟಿ ರಾಧಿಕಾ ಪಂಡಿತ್ ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಲಿದ್ದಾರೆ. ಶಿಕ್ಷಣದ ಮಹತ್ವ ಹಾಗೂ ಪ್ರಮುಖವಾಗಿ ಶಿಕ್ಷಣ ಹಕ್ಕು ಕಾಯ್ದೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಆ ಮೂಲಕ ವಿದ್ಯಾರ್ಥಿಗಳನ್ನು ಶಾಲೆ ಕಡೆಗೆ ಆಕರ್ಷಿಸುವ ಉದ್ದೇಶದಿಂದ ಸರ್ವ ಶಿಕ್ಷಣ ಅಭಿಯಾನ ಜನಪ್ರಿಯ ಚಲನಚಿತ್ರ ನಟ, ನಟಿಯರನ್ನು ರಾಯಭಾರಿಯಾಗಿ ಮಾಡಿಕೊಂಡು ಕಿರುತೆರೆ ಜಾಹೀರಾತು ನಿರ್ಮಿಸಲು ನಿರ್ಧರಿಸಿದೆ.

**ಏನೀ ಕಾರ್ಯಕ್ರಮ?**

ಈಗಾಗಲೇ ಸರ್ವ ಶಿಕ್ಷಣ ಅಭಿಯಾನ ಪುನೀತ್ ರಾಜ್ ಕುಮಾರ್ ಮತ್ತು ರಾಧಿಕಾ ಪಂಡಿತ್ ಜತೆಗೆ ಮಾತುಕತೆ ನಡೆಸಿದ್ದು, ನಟ-ನಟಿಯರಿಬ್ಬರು ಒಪ್ಪಿ ಕಾಲ್ಶೀಟ್ ಕೊಟ್ಟಿದ್ದಾರೆ. ಸದ್ಯದಲ್ಲೇ ಜಾಹೀರಾತಿನ ಚಿತ್ರೀಕರಣ ಸೆಟ್ಟೇರಲಿದೆ. ವಿಶೇಷ ಏನೆಂದರೆ, ಕನ್ನಡ ಚಿತ್ರರಂಗದ ದಿಗ್ಗಜ ಪುನೀತ್ ರಾಜ್ ಕುಮಾರ್ ಮತ್ತು ನಟಿ ರಾಧಿಕಾ ಪಂಡಿತ್ ಸಂಭಾವನೆ ಸ್ವೀಕರಿಸದೆ ಜಾಹೀರಾತಿನಲ್ಲಿ ಅಭಿನಯಿಸಲಿದ್ದಾರೆ. ಶಿಕ್ಷಣ ಇಲಾಖೆಯ ಯೋಜನೆಗಳನ್ನು ತಿಳಿಸುವಾಗ ಜಾಹೀರಾತಿಗಾಗಿ ಶಾಲೆಗಳಲ್ಲೇ ಚಿತ್ರೀಕಕಣ ನಡೆಸುವುದು ಉತ್ತಮ ಎಂದು ಇಲಾಖೆ ಕೆಲ ಉತ್ತಮ ಶಾಲೆಗಳನ್ನು ಗುರುತಿಸುತ್ತಿದೆ. ಉದಾರಣೆಗೆ ಕಸ್ತೂರಿ ಬಾ ಬಾಲಕಿಯರ ವಸತಿ ಶಾಲೆಯನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

**ಪ್ರಚಾರದ ಕೊರತೆ:**

ಪ್ರತಿ ಬಾರಿಯೂ ಆರ್.ಟಿ.ಈ. ಸಮಗ್ರವಾಗಿ ಜಾರಿ ಮಾಡಲು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಖಾಲಿ ಸೀಟುಗಳನ್ನು ಭರ್ತಿ ಮಾಡಲು ಶಿಕ್ಷಣ ಇಲಾಖೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಮುಖ್ಯವಾಗಿ ಪ್ರಚಾರ ನೀಡುತ್ತಿಲ್ಲ ಎಂದು ಆರೋಪ ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿ ಈ ಜಾಹೀರಾತು ನಿರ್ಮಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಮತ್ತೊಂದೆಡೆ ಶಿಕ್ಷಣ ಇಲಾಖೆಯ ನೂತನ ಯೋಜನೆಗಳ ಬಗ್ಗೆ ಪತ್ರಿಕೆ ಮತ್ತು ಟಿವಿಗಳಲ್ಲಿ ಜಾಹೀರಾತು ನೀಡುವ ಬದಲಾಗಿ ಜನಪ್ರಿಯ ನಟ-ನಟಿಯರಿಂದ ಹೇಳಿಸಿದರೆ ಪೋಷಕರಿಗೆ ಏನೋ ಹಿತವಾಗಿ ಕಾಣಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ ಎನ್ನುವ ವಿಶ್ವಾಸವಿದೆ ಎನ್ನುತಾರೆ.

**ಕಡಿಮೆ ವೆಚ್ಚ:**

ಜತೆಗೆ ಕಡಿಮೆ ವೆಚ್ಚದಲ್ಲಿ ವಾಹಿನಿಗಳಲ್ಲಿ ಜಾಹೀರಾತು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಜಾಹೀರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶಾನಲಯದ (ಡಿಎವಿಪಿ) ಮೂಲಕ ಜಾಹೀರಾತು ನೀಡಲು ತೀರ್ಮಾನಿಸಿದೆ.

**ರಾಜ್ಯದ ಜನಸಂಖ್ಯೆಯಲ್ಲಿ ಯುವಕರ ಪಾಲು ಹೆಚ್ಚು**

ಜನಗಣತಿ ಆಯುಕ್ತ ಮತ್ತು ರಿಜಿಸ್ಟರ್ ಜನರಲ್ ಅವರು ಇತ್ತೀಚೆಗೆ ಬಿಡುಗಡೆ ಮಾಡಿರುವ 'ಪ್ರತಿ ವರ್ಷದ ಮಾಹಿತಿ ದತ್ತಾಂಶ' ಪ್ರಕಾರ ರಾಜ್ಯದಲ್ಲಿ 20 ರಿಂದ 29 ವಯಸ್ಸಿನ ಯುವಕರ ಸಂಖ್ಯೆ 1.18 ಕೋಟಿ. ಇದು ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 19.35 ಭಾಗವಾಗಿದೆ. ದುಡಿಯುವ ವರ್ಗ ಹೆಚ್ಚಿನ ಸಂಖ್ಯೆ ಯಲ್ಲಿರುವುದರಿಂದ ಉತ್ಪಾದನೆ ವಲಯಕ್ಕೆ ಅನುಕೂಲವಾಗಲಿದೆ ಎಂದು ಜನಸಂಖ್ಯಾಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪ್ರಮುಖಾಂಶಗಳು:

- 2011ರ ಜನಗಣತಿ ಪ್ರಕಾರ ರಾಜ್ಯದ ಜನಸಂಖ್ಯೆ 6.1 ಕೋಟಿ. ಅಂಕಿ -ಸಂಖ್ಯೆಗಳ ಲೆಕ್ಕಾಚಾರದ ಪ್ರಕಾರ 3.34 ಕೋಟಿ ಜನರು (ಶೇ 54.64) 20 ರಿಂದ 60 ವರ್ಷದ ಒಳಗಿನವರು ದುಡಿಯುವ ವರ್ಗಕ್ಕೆ ಸೇರಿದ್ದಾರೆ. 60 ವರ್ಷಕ್ಕಿಂತ ಹೆಚ್ಚಿನವರ ಜನಸಂಖ್ಯೆ ಕೇವಲ ಶೇಕಡಾ 9.42 ಮತ್ತು 0-20 ವರ್ಷಗಳ ನಡುವೆ ಇರುವವರ ಜನ ಸಂಖ್ಯೆ ಶೇಕಡಾ 35.75.
- ಪ್ರಸ್ತುತ ಜನಸಂಖ್ಯೆ ಶೇಕಡಾವಾರು ಪ್ರಮಾಣವನ್ನು ಹೋಲಿಸಿದಾಗ ಯುವಕರ ಸಂಖ್ಯೆ ಹೆಚ್ಚಿರುವುದು ಉತ್ತಮ. ಯುವ ಪಡೆಯಿಂದ ಅಭಿವೃದ್ಧಿ ವೇಗ ಹೆಚ್ಚಿಸಲು ಸಾಧ್ಯ. ಹೆಚ್ಚಿನ ಸಂಖ್ಯೆಯಲ್ಲಿ ಯುವಕರಿದ್ದರೆ ಉತ್ಪಾದನೆ ಕ್ಷೇತ್ರಕ್ಕೆ ಅನುಕೂಲವಾಗಲಿದೆ' ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಜನಸಂಖ್ಯೆ ಸಂಶೋಧನಾ ಕೇಂದ್ರದ ಮುಖ್ಯಸ್ಥ ಕೆ.ಎಸ್. ಜೇಮ್ಸ್ ಹೇಳುತ್ತಾರೆ.

**ಅತ್ಯಂತ ಕಡಿಮೆ ನಿರುದ್ಯೋಗಿಗಳನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ನಂ.2**

ಕೇಂದ್ರ ಕಾರ್ಮಿಕ ಸಚಿವಾಲಯವು ದೇಶದಲ್ಲಿನ ನಿರುದ್ಯೋಗಿಗಳ ಕುರಿತ ವರದಿಯೊಂದನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಕರ್ನಾಟಕ ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಿರುದ್ಯೋಗಿಗಳನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ 2ನೇ ಸ್ಥಾನ ಪಡೆದುಕೊಂಡಿದೆ.

**"ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ" :**

- ದೇಶದ ಒಟ್ಟು ಜನಸಂಖ್ಯೆಯ ಶೇ.4.7ರಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ. ಈ ಪೈಕಿ ಅಸ್ಸಾಂನಲ್ಲಿ ಅತಿಹೆಚ್ಚಿನ ಸಂಖ್ಯೆಯ ನಿರುದ್ಯೋಗಿಗಳಿದ್ದರೆ, ಛತ್ತೀಸ್‌ಗಢ ಅತ್ಯಂತ ಕಡಿಮೆ ಸಂಖ್ಯೆಯ ನಿರುದ್ಯೋಗಿಗಳನ್ನು ಹೊಂದಿದೆ.
- ಸಿಕ್ಕಿಂನಲ್ಲಿ ದೇಶದಲ್ಲೇ ಅತಿ ಹೆಚ್ಚಿನ ಅಂದರೆ, ಪ್ರತಿ 1000 ಜನರಿಗೆ 136 ಜನ ನಿರುದ್ಯೋಗಿಗಳಿದ್ದಾರೆ. ದೇಶದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ನಿರುದ್ಯೋಗಿಗಳನ್ನು ಹೊಂದಿರುವ ರಾಜ್ಯವೆಂಬ ಹೆಗ್ಗಳಿಗೆ ಛತ್ತೀಸ್‌ಗಢ ಪಾತ್ರವಾಗಿದ್ದರೆ, ನಂತರದ ಸ್ಥಾನದಲ್ಲಿ ಕರ್ನಾಟಕ ಇದೆ.
- ಛತ್ತೀಸ್‌ಗಢದಲ್ಲಿ ಪ್ರತಿ 1000 ಜನರಿಗೆ ಕೇವಲ 14 ನಿರುದ್ಯೋಗಿಗಳಿದ್ದರೆ ಕರ್ನಾಟಕದಲ್ಲಿ ಈ ಪ್ರಮಾಣ 20 ರಷ್ಟಿದೆ.
- ಉಳಿದಂತೆ ಮಧ್ಯಪ್ರದೇಶಲ್ಲಿ 22, ಆಂಧ್ರಪ್ರದೇಶದಲ್ಲಿ 25 ಮತ್ತು ಗುಜರಾತ್‌ನಲ್ಲಿ 27 ಇದೆ.

**ಯುವ ಸಮೂಹದಲ್ಲೂ ನಂ.2:**

- ಇನ್ನು ಕೇವಲ ಯುವ ಸಮೂಹವನ್ನು ತೆಗೆದುಕೊಂಡರೆ, ಇದರಲ್ಲೂ ಛತ್ತೀಸ್‌ಗಢದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ (ಶೇ.33ರಷ್ಟು) ನಿರುದ್ಯೋಗಿಗಳಿದ್ದರೆ, ಕರ್ನಾಟಕ ಶೇ.52ರಷ್ಟು ಪ್ರಮಾಣದ ಮೂಲಕ ಕೆಳಗಿನಿಂದ ಎರಡನೇ ಸ್ಥಾನದಲ್ಲಿದೆ.
- ಸಿಕ್ಕಿಂನಲ್ಲಿ ಪ್ರತಿ 1000 ಜನರಿಗೆ 372 ಜನ ಯುವ ಸಮೂಹ ನಿರುದ್ಯೋಗ ಅನುಭವಿಸುವ ಮೂಲಕ ಈ ಪಟ್ಟಿಯಲ್ಲೂ ಅಗ್ರಸ್ಥಾನ ಪಡೆದುಕೊಂಡಿದೆ. ನಂತರದ ಸ್ಥಾನಗಳಲ್ಲಿ ಅರುಣಾಚಲ ಪ್ರದೇಶ 327, ಕೇರಳ 315, ತ್ರಿಪುರಾ (306) ರಾಜ್ಯಗಳಿವೆ.

**ಸ್ವಯಂ ಉದ್ಯೋಗಕ್ಕೆ ಆದ್ಯತೆ:**

- ಸಮೀಕ್ಷೆ ಅನ್ವಯ ಶೇ.51.2 ರಷ್ಟು ಜನ ಸ್ವಯಂ ಉದ್ಯೋಗ ಮೂಲಕ ತಮ್ಮ ಆದಾಯವನ್ನು ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ. ಇದರಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ಸೇರಿವೆ.
- ವರದಿ ಅನ್ವಯ ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಪ್ರಮಾಣ ಶೇ.4.4ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಈ ಪ್ರಮಾಣ ಶೇ.5.7ರಷ್ಟಿದೆ.
- ದೇಶವ್ಯಾಪಿ ಶೇ.4 ಪುರುಷರು ನಿರುದ್ಯೋಗಿಗಳಾಗಿದ್ದರೆ, ಮಹಿಳೆಯರಲ್ಲಿ ಈ ಪ್ರಮಾಣ ಶೇ.7.2ರಷ್ಟಿದೆ.

**ರೋಗಿಗಳಿಗೆ ವೈದ್ಯರು ಬರೆದುಕೊಡುವ ಔಷಧ ಚೀಟಿ ಇನ್ನುಮುಂದೆ ಸ್ಪಷ್ಟ ದಪ್ಪಕ್ಷರದಲ್ಲಿರಬೇಕು**

ರೋಗಿಗಳಿಗೆ ವೈದ್ಯರು ಬರೆದುಕೊಡುವ ಔಷಧ ಚೀಟಿ (ಪ್ರಿಸ್‌ಕ್ರಿಪ್ಶನ್)ಯ ವಿವರಗಳು ಇಂಗ್ಲೀಷ್‌ನ ದಪ್ಪ ಅಕ್ಷರ (ಕ್ಯಾಪಿಟಲ್ ಲೆಟರ್)ಗಳಲ್ಲಿ ಇರಬೇಕೆಂಬ ನಿಯಮ ರೂಪುಗೊಂಡ ವರ್ಷದ ಬಳಿಕ ಎಚ್ಚೆತ್ತಿರುವ ರಾಜ್ಯ ಸರ್ಕಾರ, ವೈದ್ಯರು ಕಟ್ಟುನಿಟ್ಟಾಗಿ ಈ ನಿಯಮ ಪಾಲನೆ ಮಾಡಬೇಕು ಎಂದು ಆದೇಶ ಹೊರಡಿಸಿದೆ. ವೈದ್ಯರು ಔಷಧ ಚೀಟಿಯನ್ನು ಇಂಗ್ಲೀಷ್‌ನ ದಪ್ಪ ಅಕ್ಷರಗಳಲ್ಲಿ ಬರೆಯುವುದರೊಂದಿಗೆ ತಮ್ಮ ಕೈಬರಹವನ್ನು ಸುಧಾರಣೆ ಮಾಡಿಕೊಳ್ಳಬೇಕು. ಅಲ್ಲದೆ, ಔಷಧ ಚೀಟಿಯಲ್ಲಿ ನೋಂದಣಿ ಸಂಖ್ಯೆಯನ್ನು ಸಹ ನಮೂದಿಸಬೇಕು ಎಂದು ತಿಳಿಸಲಾಗಿದೆ.

**ಆದೇಶದ ಹಿನ್ನೆಲೆ:**

ವೈದ್ಯರು ರೋಗಿಗಳಿಗೆ ಬರೆದು ಕೊಡುವ ಪ್ರಿಸ್‌ಕ್ರಿಪ್ಷನ್‌ನ ವಿವರಗಳು ರೋಗಿಗಳು ಮತ್ತು ಔಷಧಿ ಅಂಗಡಿಯವರಿಗೆ ತಿಳಿಯುವಂತಿರಬೇಕು ಎಂಬ ಸದುದ್ದೇಶದಿಂದ ಈ ಆದೇಶವನ್ನು ರಾಜ್ಯದ ವೈದ್ಯರು ಪಾಲನೆ ಮಾಡಬೇಕು ಎಂದು ಹೇಳಿದೆ. ಕರ್ನಾಟಕ ವೈದ್ಯಕೀಯ ಪರಿಷತ್ (ಕೆಎಂಸಿ) 2012ರ ಆಗಸ್ಟ್ 24ರಂದು ಔಷಧ ಚೀಟಿಗಳನ್ನು ಕಡ್ಡಾಯವಾಗಿ ದಪ್ಪ ಅಕ್ಷರಗಳಲ್ಲಿ ಬರೆಯಬೇಕು ಎಂಬ ಹೊಸ ನಿಯಮ ಜಾರಿಗೆ ತಂದಿತ್ತು. ಆದರೆ, ರಾಜ್ಯದಲ್ಲಿ 96 ಸಾವಿರಕ್ಕೂ ಹೆಚ್ಚು ವೈದ್ಯರು ಇದ್ದರೂ ಬಹಳಷ್ಟು ವೈದ್ಯರಿಗೆ ಈ ನಿಯಮದ ಬಗ್ಗೆ ಮಾಹಿತಿಯೇ ಇರಲಿಲ್ಲ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಹ ಆಲೋಪತಿ ವೈದ್ಯರಿಗೂ ಈ ಆದೇಶವನ್ನು ರವಾನಿಸಿದೆ ಎಂದು ತಿಳಿದುಬಂದಿದೆ.

**ಸ್ವಾಗತ:**

ವೈದ್ಯರು ಬರೆದು ಕೊಡುವ ಔಷಧ ಚೀಟಿ (ಪ್ರಿಸ್‌ಕ್ರಿಪ್ಷನ್) ವಿದ್ಯಾವಂತನಿಗೂ ಅರ್ಥವಾಗಲ್ಲ. ಕೆಲವೊಮ್ಮೆ ಔಷಧಿ ಅಂಗಡಿಯವರೂ ಸಹ ಮಾತ್ರೆ, ಔಷಧಿಗಳನ್ನು ನೀಡಬೇಕಾದರೆ ತಿಣುಕಾಡಬೇಕಾಗುತ್ತದೆ. ಅಷ್ಟೊಂದು ಕ್ಲಿಷ್ಟಕರವಾಗಿರುತ್ತೆ ವೈದ್ಯರ ಬರವಣಿಗೆ ಶೈಲಿ. ಈ ಬಗ್ಗೆ ಕೆಎಂಸಿಗೆ ಸಾವಿರಾರು ದೂರುಗಳು ಬಂದ ಹಿನ್ನೆಲೆಯಲ್ಲಿ ಕೆಎಂಸಿ ಹೊಸ ನೀತಿಯೊಂದನ್ನು ಜಾರಿ ಮಾಡಿತ್ತು. ನಿಯಮ ಜಾರಿ ಮಾಡಿ ವರ್ಷ ಕಳೆದರೂ, ಯಾವೊಬ್ಬ ವೈದ್ಯರು ಅನುಸರಿಸುತ್ತಿರುವ ಬಗ್ಗೆ ಮಾಹಿತಿ ಇಲ್ಲ. ಹೊಸ ಆದೇಶ ಕಟ್ಟುನಿಟ್ಟಾಗಿ ಜಾರಿಯಾಗಬೇಕಾದರೆ, ಔಷಧಿ ಅಂಗಡಿಯವವರು ಸಹಕರಿಸಬೇಕು. ಆಗಲೇ ವೈದ್ಯರು ಬರವಣಿಗೆ ಶೈಲಿಯನ್ನು ಸುಧಾರಿಸಿಕೊಳ್ಳುವರು. ವೈದ್ಯರ ಬರವಣಿಗೆ ಶೈಲಿಗೆ ಔಷಧಿ ಅಂಗಡಿಯವರು ಹೊಂದಿಕೊಂಡಿರುವುದರಿಂದ ನಿಯಮಕ್ಕೆ ಬೆಲೆ ಇಲ್ಲದಂತಾಗಿದೆ. ಇನ್ನಾದರೂ, ಔಷಧಿ ಅಂಗಡಿಯವರು ಮತ್ತು ವೈದ್ಯರು ಸರ್ಕಾರದ ಆದೇಶವನ್ನು ಪಾಲನೆ ಮಾಡುವುದು ಒಳಿತು ಎಂದು ಕರ್ನಾಟಕ ವೈದ್ಯಕೀಯ ಪರಿಷತ್ ಅಧ್ಯಕ್ಷ ಹೇಳುತ್ತಾರೆ.

**"ಕನಿಷ್ಠ ಅಭಿವೃದ್ಧಿ ಹೊಂದಿದ ರಾಜ್ಯಗಳ" ಪಟ್ಟಿಯಲ್ಲಿ ಕರ್ನಾಟಕ**

ಅಭಿವೃದ್ಧಿ ಹೊಂದಿದ ರಾಜ್ಯಗಳ ಪಟ್ಟಿಯಲ್ಲಿ ಗುಜರಾತ್ ಮತ್ತು ಕರ್ನಾಟಕ ಇಲ್ಲ ಎಂದು ಕೇಂದ್ರ ಸರ್ಕಾರ ರಚಿಸಿದ್ದ ಸಮಿತಿಯೊಂದು ವರದಿ ನೀಡಿದೆ. ಕರ್ನಾಟಕ ಕೂಡ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಜ್ಯವಲ್ಲ. ಕರ್ನಾಟಕ ಹಾಗೂ ಗುಜರಾತ್ 'ಕನಿಷ್ಠ ಅಭಿವೃದ್ಧಿ ಹೊಂದಿದ ರಾಜ್ಯಗಳು' ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಮ್ ರಾಜನ್ ಸಮಿತಿ ಕೇಂದ್ರಕ್ಕೆ ವರದಿ ಸಲ್ಲಿಸಿದೆ. ಗುಜರಾತ್, ಮಧ್ಯಪ್ರದೇಶ ಹಾಗೂ ಛತ್ತೀಸ್‌ಗಢನಂತಹ ಪ್ರಮುಖ ರಾಜ್ಯಗಳು ಅಭಿವೃದ್ಧಿ ಹೊಂದಿದ ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಲು ವಿಫಲವಾಗಿವೆ. ಗೋವಾ, ಕೇರಳ, ತಮಿಳುನಾಡು, ಪಂಜಾಬ್, ಮಹಾರಾಷ್ಟ್ರ, ಉತ್ತರಾಖಂಡ, ಹರ್ಯಾಣ ಅಭಿವೃದ್ಧಿ ಹೊಂದಿದ ರಾಜ್ಯಗಳು ಎಂದು ವರದಿ ತಿಳಿಸಿದೆ.

**ಯಾವುದಿದು ಸಮಿತಿ?**

ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡ ಬೇಕೆಂದು ಹೋರಾಟ ನಡೆಸಿದ ವೇಳೆ ಆಗ ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದ ಈಗಿನ ರಿಸರ್ವ್ ಬ್ಯಾಂಕ್ ಗವರ್ನರ್ ರಾಜನ್ ನೇತೃತ್ವದಲ್ಲಿ ಕೇಂದ್ರವು ಸಮಿತಿ ರಚಿಸಿ, ರಾಜ್ಯಗಳ ಹಿಂದುಳಿಯುವಿಕೆ ಪತ್ತೆಗೆ ವಿಧಾನ ತಿಳಿಸಲು ಕೋರಿತ್ತು.

**ಕಡಿಮೆ ಅಭಿವೃದ್ಧಿ ಹೊಂದಿದ ರಾಜ್ಯಗಳು:**

ಕರ್ನಾಟಕ, ಗುಜರಾತ್, ಪಶ್ಚಿಮ ಬಂಗಾಳ, ಮಣಿಪುರ, ನಾಗಾಲ್ಯಾಂಡ್ ಆಂಧ್ರಪ್ರದೇಶ, ಜಮ್ಮು-ಕಾಶ್ಮೀರ, ಮೀಜೋರಂ, ತ್ರಿಪುರ, ಸಿಕ್ಕಿಂ, ಹಿಮಾಚಲಪ್ರದೇಶ. ಕನಿಷ್ಠ ಅಭಿವೃದ್ಧಿ ಹೊಂದಿದ ರಾಜ್ಯ ಒಡಿಶಾ, ಬಿಹಾರ, ಮಧ್ಯಪ್ರದೇಶ, ಛತ್ತೀಸ್‌ಗಢ, ಜಾರ್ಖಂಡ, ಅರುಣಾಚಲಪ್ರದೇಶ, ಅಸ್ಸಾಂ, ಮೇಘಾಲಯ, ಉತ್ತರಪ್ರದೇಶ ಹಾಗೂ ರಾಜಸ್ಥಾನ.

**ಅಭಿವೃದ್ಧಿ ಹೊಂದಿದ ರಾಜ್ಯಗಳು:**

ಗೋವಾ, ಕೇರಳ, ತಮಿಳುನಾಡು, ಪಂಜಾಬ್, ಮಹಾರಾಷ್ಟ್ರ, ಉತ್ತರಾಖಂಡ, ಹರ್ಯಾಣ

**ಪಾವಗಡದ ಸೂಲಗಿತ್ತಿ ನರಸಮ್ಮಗೆ ಕೇಂದ್ರ ಸರ್ಕಾರದ ಪ್ರಶಸ್ತಿ**

ಅಕ್ಟೋಬರ್ 1ರಂದು ನಡೆಯುವ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಆರು ಮಂದಿ ಗಣ್ಯರನ್ನು ಸನ್ಮಾನಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಕೋಲಾರ ಜಿಲ್ಲೆಯ ಮದ್ದೇರಿಯ ಮುನಿರೆಡ್ಡಿ (ಕಲೆ), ಬೆಳಗಾವಿ ಜಿಲ್ಲೆಯ ಹುಲ್ಲಪ್ಪನವರಮಠದ ಶಾಂತಾದೇವಿ (ಶಿಕ್ಷಣ), ಉಡುಪಿ ತಾಲ್ಲೂಕಿನ ಕಾಪು ವಿಶ್ವನಾಥ ಶೆಟ್ಟಿ (ಸಮಾಜಸೇವೆ), ವಿಜಾಪುರದ ವೈಜನಾಥ ಓಂಕಾರಪ್ಪ ಸಮಗೊಂಡ (ಕ್ರೀಡೆ), ಹುಬ್ಬಳ್ಳಿಯ ಬಸವರಾಜ ಗೂಳಪ್ಪ ಭೂಸರೆಡ್ಡಿ (ಸಾಹಿತ್ಯ), ಬೆಂಗಳೂರಿನ ಎಚ್.ಕೆ. ವಾಸುದೇವರೆಡ್ಡಿ (ಕಾನೂನು) ಅವರನ್ನು ಸನ್ಮಾನಿಸಲಾಗುವುದು. ಸನ್ಮಾನಿತರಿಗೆ 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ನೀಡಲಾಗುವುದು.

**ನರಸಮ್ಮಗೆ ಕೇಂದ್ರ ಸರ್ಕಾರದ ಪ್ರಶಸ್ತಿ:**

ಪಾವಗಡ ತಾಲ್ಲೂಕಿನ ವೆಂಕಟಾಪುರ ಸಮೀಪದ ಕೃಷ್ಣಾಪುರದ ಸೂಲಿಗಿತ್ತಿ ನರಸಮ್ಮ ಅವರಿಗೆ ಕೇಂದ್ರ ಸರ್ಕಾರದ ಪ್ರಶಸ್ತಿ ಸಂದಿದೆ. ಪ್ರಶಸ್ತಿ ಮೊತ್ತ Rs 2.5 ಲಕ್ಷ ನಗದು. ಅ.1 ರಂದು ದೆಹಲಿಯಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಗ್ರಾಮೀಣ ಭಾಗದಲ್ಲಿ ಹೆರಿಗೆ ಮಾಡಿಸುವ ಕೆಲಸದಲ್ಲಿ ನಿರತರಾಗಿದ್ದ ಇವರು ಸೂಲಿಗಿತ್ತಿ ಎಂದೇ ಪ್ರಸಿದ್ಧಿ. ಇದುವರೆಗೂ 1,500 ಕ್ಕೂ ಹೆಚ್ಚು ಹೆರಿಗೆ ಮಾಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ 91 ವರ್ಷದ ನರಸಮ್ಮ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ

**ಕರ್ನಾಟಕ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 'ಗಾಂಧಿ ಸಾಕ್ಷಿ ಕಾಯಕ' ತಂತ್ರಾಂಶ ಬಿಡುಗಡೆ**

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೈಗೊಳ್ಳಲಾಗುವ ಎಲ್ಲ ಅಭಿವೃದ್ಧಿ ಕಾಮಗಾರಿಗಳಲ್ಲಿ ಪಾರದರ್ಶಕತೆ ತರಲು ಹಾಗೂ ನೈಜ ಸ್ಥಿತಿಗತಿಗಳ ಚಿತ್ರಣ ನೀಡುವ 'ಗಾಂಧಿ ಸಾಕ್ಷಿ ಕಾಯಕ' ತಂತ್ರಾಂಶ ಯೋಜನೆ ಜಾರಿಗೆ ತರಲು ತೀರ್ಮಾನಿಸಲಾಗಿದೆ. ಗ್ರಾಮ ಪಂಚಾಯಿತಿಯಿಂದ ಜಿಲ್ಲಾ ಪಂಚಾಯಿತಿವರೆಗೂ ನಡೆಯುವ ಅಭಿವೃದ್ಧಿ ಕಾಮಗಾರಿ ಹಾಗೂ ಇನ್ನಿತರ ಕೆಲಸಗಳ ದೈನಂದಿನ ವಸ್ತುಸ್ಥಿತಿಯನ್ನು ಸಾರ್ವಜನಿಕರಿಗೆ ನೂತನ ತಂತ್ರಾಂಶದಿಂದ ನೀಡಲಾಗುವುದು.

**ತಂತ್ರಾಂಶದ ಬಗ್ಗೆ:**

- ಸಾರ್ವಜನಿಕರು ತಮ್ಮೂರಿನ ಗ್ರಾಮ ಪಂಚಾಯಿತಿಯಲ್ಲಿ ಆಗುತ್ತಿರುವ ಕಾಮಗಾರಿಗಳ ವಿವರಗಳನ್ನು ಈ ತಂತ್ರಾಂಶದ ಮೂಲಕ ನೋಡಬಹುದು.
- ಕೆಲಸ ಮಾಡದೆ ಬಿಲ್ ಪಡೆಯುವ ಅಕ್ರಮಗಳಿಗೆ ಈ ತಂತ್ರಾಂಶದಿಂದ ತೆರೆಬೀಳಲಿದೆ. ಭ್ರಷ್ಟಾಚಾರ ನಿಯಂತ್ರಣ ನಿಯಂತ್ರಣ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಪಾರದರ್ಶಕತೆ ಬರಲಿದೆ.
- ಕ್ರಿಯಾ ಯೋಜನೆಯಿಂದ ಕಾಮಗಾರಿಯ ನಾನಾ ಹಂತಗಳು, ಹಣ ಪಾವತಿವರೆಗೂ ಮಾಹಿತಿಗಳನ್ನು ತಂತ್ರಾಂಶಕ್ಕೆ ಪ್ರತಿ ದಿನವೂ ಅಪ್‌ಲೋಡ್ ಮಾಡಲಾಗುವುದು.
- ಕಾಮಗಾರಿ ನಡೆದಿರುವ ಖಾತರಿ ಕುರಿತು ಸ್ಥಳ ಪರಿಶೀಲನಾ ವರದಿ ವಿವರಗಳನ್ನು ಒದಗಿಸಲಾಗುವುದು. ನಾನಾ ಹಂತಗಳ ಕಾಮಗಾರಿಯ ಛಾಯಾಚಿತ್ರ ಹಾಗೂ ಸ್ಥಳಪರಿಶೀಲನೆ ವರದಿ ಇಲ್ಲದಿದ್ದರೆ ಬಿಲ್ ಪಾವತಿಯಾಗುವುದಿಲ್ಲ.
- ರಾಷ್ಟ್ರೀಯ ಮಾಹಿತಿ ಕೇಂದ್ರದ ತಂತ್ರಜ್ಞರು ಪ್ರತಿದಿನ ಮಾಹಿತಿಯನ್ನು ತಂತ್ರಾಂಶಕ್ಕೆ ಅಪ್‌ಡೇಟ್ ಮಾಡಲಿದ್ದಾರೆ.
- ಗೂಗಲ್ ಮ್ಯಾಪ್ ಬಳಸಿಕೊಳ್ಳುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಕನ್ನಡ ಭಾಷೆಯಲ್ಲಿ ಇರುವುದರಿಂದ ಬಳಕೆದಾರರ ಸ್ನೇಹಿಯಾಗಿರಲಿದೆ.
- ದತ್ತಾಂಶ ಅಳವಡಿಕೆ, ನಿಯಂತ್ರಣ ಹಾಗೂ ಮೇಲ್ವಿಚಾರಣೆಯನ್ನು ಆನ್‌ಲೈನ್ ಮೂಲಕ ಕೈಗೊಳ್ಳಲು ಅವಕಾಶವಿದೆ. ಇದರ ಮೇಲ್ವಿಚಾರಣೆಗೆ ನಿಯಂತ್ರಣ ಕೊಠಡಿ ಸ್ಥಾಪಿಸಲಾಗುವುದು.
- ರಾಜ್ಯದ ಯಾವುದೇ ಮೂಲೆಯಲ್ಲಿ ಕುಳಿತು ಯಾವುದೇ ಗ್ರಾಮ ಇಲ್ಲವೇ ಜಿಲ್ಲಾ ಪಂಚಾಯಿತಿಯ ಮಾಹಿತಿಯನ್ನು ಆನ್ ಲೈನ್ ಮೂಲಕ ವೀಕ್ಷಿಸಬಹುದು.

**ಅಕ್ಟೋಬರ್ 2 ರಿಂದ ಜಾರಿ:**

ಈ ತಂತ್ರಾಂಶ ಬಳಕೆ ಹಾಗೂ ಮಾಹಿತಿ ನೀಡುವ ಸಂಬಂಧ ಪಂಚಾಯತ್ ರಾಜ್ ಇಲಾಖೆಗೆ ಸೇರಿದ 6000 ಸಂಸ್ಥೆಗಳ ಸಿಬ್ಬಂದಿಯನ್ನು ತರಬೇತುಗೊಳಿಸಲಾಗಿದೆ. ಅಕ್ಟೋಬರ್ 2 ರಿಂದ ಸಾರ್ವಜನಿಕರ ಬಳಕೆಗೆ ಈ ತಂತ್ರಾಂಶ ಲಭ್ಯವಾಗಲಿದೆ. ಇದರಿಂದ ಕಾಮಗಾರಿ ನಕಲು ಆಗುವುದನ್ನು ತಡೆಯಬಹುದು. ಸಲಹೆ, ಸೂಚನೆ ಹಾಗೂ ಆಕ್ಷೇಪಣೆ ಸಲ್ಲಿಸಲು ಅವಕಾಶ ಮಾಡಲಾಗಿದೆ. ತಂತ್ರಾಂಶ ವಿಳಾಸ: **http://gsk.kar.nic.in**

**<u>ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ "ವಿದ್ಯಾಸಿರಿ" ಯೋಜನೆ ಜಾರಿ</u>**

ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅನುಕೂಲವಾಗಿ "ವಿದ್ಯಾಸಿರಿ" ಎಂಬ ವಿನೂತನ ಯೋಜನೆಯನ್ನು ಹೊರತಂದಿದೆ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರು ಅಕ್ಟೋಬರ್ 1 ರಂದು ಈ ಯೋಜನೆಗೆ ಬೆಂಗಳೂರಿನಲ್ಲಿ ಚಾಲನೆ ನೀಡಿದರು. ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್ ಆಂಜನೇಯ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

**ಏನಿದು "ವಿದ್ಯಾಸಿರಿ" ಯೋಜನೆ?**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿ ಕೊಡಲು ಈಗಾಗಲೇ ವಿದ್ಯಾರ್ಥಿ ನಿಲಯಗಳನ್ನು ರಾಜ್ಯದೆಲ್ಲಡೆ ಸ್ಥಾಪಿಸಲಾಗಿದೆ. ಆದರೆ ವಿದ್ಯಾರ್ಥಿಗಳ ಪ್ರಮಾಣ ಅಧಿಕವಾಗಿರುವ ಕಾರಣ ಎಲ್ಲರಿಗೂ ಹಾಸ್ಟೆಲ್ ಸೌಲಭ್ಯ ದೊರೆಯುತ್ತಿಲ್ಲ ಎನ್ನುವ ಕೂಗು ಇದೆ. ಹಾಗಾಗಿ ಈ ವರ್ಗಕ್ಕೆ ಸೇರಿದ ಹಾಸ್ಟೆಲ್ ವಂಚಿತ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮನೆಯಲ್ಲೇ ಉಳಿದುಕೊಳ್ಳಲು ಮಾಸಿಕ ಭತ್ಯೆಯನ್ನು ನೀಡುವ ಯೋಜನೆ ಇದಾಗಿದೆ.

**ಭತ್ಯೆ ಎಷ್ಟು?**

- ಹಾಸ್ಟೆಲ್ ನಲ್ಲಿ ಉಳಿಯದೇ ಮನೆಯಲ್ಲೇ ಉಳಿಯುವ ವಿದ್ಯಾರ್ಥಿಗಳಿಗೆ ಮಾಸಿಕ ಭತ್ಯೆ ರೂ 1500 ರನ್ನು ನೀಡಲಾಗುವುದು. 10 ತಿಂಗಳಿಗೆ ಒಟ್ಟು 15,000 ರೂಗಳನ್ನು ವಿದ್ಯಾರ್ಥಿಯ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು.
- ವಾರ್ಷಿಕ 20,000 ವಿದ್ಯಾರ್ಥಿಗಳನ್ನು ಈ ಯೋಜನೆಯಡಿ ಅನುಕೂಲ ಪಡೆದುಕೊಳ್ಳಲಿದ್ದಾರೆ.

ಕರುನಾಡು ಎಕ್ಸಾಮ್ಸ್

## ರಾಷ್ಟ್ರೀಯ

### ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ ಪುನರ್ ರಚನೆಗೆ ಕೇಂದ್ರ ಒಪ್ಪಿಗೆ

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯನ್ನು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಪುನರ್ ರಚಿಸಲು ಆರ್ಥಿಕ ವ್ಯವಹಾರಗಳ ಮೇಲಿನ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರ ಅನ್ವಯ ಈ ಯೋಜನೆಯನ್ನು ಇನ್ನು ಮುಂದೆ ರಾಷ್ಟ್ರೀಯ ನಗರ ಜೀವನೋಪಾಯ ಯೋಜನೆ (National Urban Livelihoods Mission) ಎಂದು ಕರೆಯಲಾಗುವುದು. ಈ ಯೋಜನೆಗಾಗಿ ಕೇಂದ್ರ ಸರ್ಕಾರ ರೂ 6405 ಕೋಟಿಯನ್ನು ವ್ಯಯಿಸಲಿದೆ.

**ಯೋಜನೆಯ ಬಗ್ಗೆ:**

- ನಗರದಲ್ಲಿ ಬಡತನ ನಿರ್ಮೂಲನೆ ಮಾಡುವ ಗುರಿಯನ್ನು ಈ ಯೋಜನೆ ಹೊಂದಿದೆ. ಶೋಷಿತ ವರ್ಗದ ಜನರಿಗೆ ಸ್ವ-ಉದ್ಯೋಗ ಜತೆಗೆ ಕೌಶಲ್ಯ ವೃದ್ದಿಯನ್ನು ಹೆಚ್ಚಿಸಿ ಸ್ವ-ಉದ್ಯೋಗಕ್ಕೆ ಅಡಿಪಾಯ ಹಾಕುವಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿದೆ.
- ನಗರ ಬಡಜನತಗೆ ವಸತಿ ಸೌಕರ್ಯ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಹಂತಹಂತವಾಗಿ ಒದಗಿಸಲಿದೆ.
- ಇದರ ಜೊತೆಗೆ ನಗರ ಬೀದಿ ವ್ಯಾಪಾರಿಗಳಿಗೂ ಈ ಯೋಜನೆಯಡಿ ಸಾಮಾಜಿಕ ಭದ್ರತೆ, ಸಾಲ ಸೌಕರ್ಯ ಮತ್ತು ಕೌಶಲ್ಯ ಅಭಿವೃದ್ಧಿ ಉತ್ತೇಜಿಸಲು ಗುರಿಹೊಂದಲಾಗಿದೆ.

**ಅನುಷ್ಠಾನ:**

- ರಾಷ್ಟ್ರೀಯ ನಗರ ಜೀವನೋಪಾಯ ಯೋಜನೆಯನ್ನು ಎರಡು ಹಂತಗಳಲ್ಲಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಮೊದಲನೇ ಹಂತ (2013-17) ಹಾಗೂ ಎರಡನೇ ಹಂತ (2017-22).
- ಮೊದಲ ಹಂತದಲ್ಲಿ ಈ ಒಂದು ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿರುವ ನಗರಗಳಲ್ಲಿ ಮತ್ತು ಒಂದು ಲಕ್ಷಕ್ಕಿಂತ ಕಡಿಮೆ ಇರುವ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುವುದು ಹಾಗೂ ಯೋಜನೆಯ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ 75: 25 ಅನುಪಾತದಲ್ಲಿ ಭರಿಸಲಿವೆ
- ಈಶಾನ್ಯ ರಾಜ್ಯ ಮತ್ತು ವಿಶೇಷ ಸ್ಥಾನಮಾನ ಹೊಂದಿರುವ ರಾಜ್ಯಗಳಲ್ಲಿ ಈ ಯೋಜನೆಯ ಅನುಷ್ಠಾನ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ 90:10 ಅನುಪಾತದಲ್ಲಿ ಭರಿಸಲಿವೆ.

**"ಭಾರತ್ ಗ್ರಾಮೀಣ ಜೀವನೋಪಾಯ ಫೌಂಡೇಶನ್ (Bharat Rural Livelihood Foundation)" ಸ್ಥಾಪನೆಗೆ ಕೇಂದ್ರ ಒಪ್ಪಿಗೆ**

ಭಾರತ್ ಗ್ರಾಮೀಣ ಜೀವನೋಪಾಯ ಫೌಂಡೇಶನ್ ಸ್ಥಾಪನೆಯ ಪ್ರಸ್ತಾವನೆಗೆ ಕೇಂದ್ರ ಆರ್ಥಿಕ ವ್ಯವಹಾರಗಳ ಮೇಲಿನ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಈ ಮಹತ್ವದ ನಿರ್ಣಯದಿಂದ ಭಾರತ್ ಗ್ರಾಮೀಣ ಜೀವನೋಪಾಯ ಫೌಂಡೇಶನ್ -1860 ಅಡಿ ಕಾರ್ಯನಿರ್ವಹಿಸಲಿದೆ.

**ಕಾರ್ಯವೇನು?**

- ಸರ್ಕಾರದ ಜತೆಗೂಡಿ ನಾಗರಿಕ ಸಾಮಾಜಿಕ ಕಾರ್ಯಗಳ ಸರಳವಾಗಿ ಜಾರಿಗೆ ತರಲು ಸಹಕರಿಸುವುದು. ಸರ್ಕಾರ ತರುವ ಜೀವನೋಪಾಯ ಯೋಜನೆಗಳನ್ನು ಅಗತ್ಯ ವರ್ಗಕ್ಕೆ ಅದರಲ್ಲೂ ಮಹಿಳೆಯರಿಗೆ ತಲುಪುವಂತೆ ಮಾಡುವುದು.
- ಭಾರತ್ ಗ್ರಾಮೀಣ ಜೀವನೋಪಾಯ ಫೌಂಡೇಶನ್ ನಾಗರಿಕ ಸಾಮಾಜಿಕ ಸಂಸ್ಥೆಗಳಿಗೆ ಬೇಕಾಗುವ ಆರ್ಥಿಕ ಸಹಾಯವನ್ನು ಒದಗಿಸಲಿದೆ.
- ಈ ಸಂಸ್ಥೆಯು ಮುಂದಿನ ಐದು ವರ್ಷಗಳಲ್ಲಿ ಸುಮಾರು 10 ಲಕ್ಷ ಬಡ ಕುಟುಂಬಗಳನ್ನು ತಲುಪುವ ಗುರಿಯನ್ನು ಹೊಂದಿದೆ.
- ಈ ಸಂಸ್ಥೆಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ 500 ಕೋಟಿ ಹಣವನ್ನು ನೀಡಲಿದೆ.
- ಸರ್ಕಾರದ ಭಾಗಿತ್ವದಿಂದ ಒಂದೆಡೆಯಾದರೆ ಖಾಸಗಿ ಮತ್ತು ಸರ್ಕಾರೇತರ ಸಂಸ್ಥೆಗಳ ಭಾಗಿತ್ವದಲ್ಲಿಯೂ ಈ ಸಂಸ್ಥೆ ಕಾರ್ಯನಿರ್ವಹಿಸಲಿದೆ.
- ಈ ಸಂಸ್ಥೆಯ ಸ್ಥಾಪನೆಗೆ ಏಪ್ರಿಲ್ 18, 2013 ರಂದು ಮೊದಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆ ಬಳಿಕ ಉನ್ನತ ಸಚಿವರ ಸಮಿತಿಗೆ ಈ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಲಾಗಿತ್ತು.

**ಸಾಕ್ಷರತೆ ಪ್ರಮಾಣ ಕೇರಳವನ್ನು ಹಿಂದಿಕ್ಕಿದ ತ್ರಿಪುರ ರಾಜ್ಯ**

ದೇಶದ ಸಾಕ್ಷರತೆ ಪ್ರಮಾಣದಲ್ಲಿ ತ್ರಿಪುರ ಈಗ ನಂ.1 ಸ್ಥಾನಕ್ಕೇರಿದೆ. ಇದುವರೆಗೂ ದೇಶದಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಹೊಂದಿರುವ ರಾಜ್ಯವೆಂದು ಖ್ಯಾತಿ ಹೊಂದಿದ್ದ ಕೇರಳವನ್ನು ತ್ರಿಪುರ ರಾಜ್ಯ ಹಿಂದಿಕ್ಕಿದೆ. ಈ ಮಾಹಿತಿಯನ್ನು ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅಗರ್ತಲಾದಲ್ಲಿ ಅಧಿಕೃತವಾಗಿ ಬಿಡುಗಡೆಗೊಳಿಸಿದರು.

- ಇತ್ತೀಚೆಗೆ ನಡೆಸಲಾದ ಸಮೀಕ್ಷೆಯ ಪ್ರಕಾರ ತ್ರಿಪುರ ರಾಜ್ಯದ ಸಾಕ್ಷರತೆ ಪ್ರಮಾಣ ಶೇ 94.65. ಕೇರಳ ಶೇ 93.91 ಸಾಕ್ಷರತೆಯನ್ನು ಹೊಂದಿದೆ. 2001 ರ ಜನಗಣತಿ ಸಮೀಕ್ಷೆಯಂತೆ ತ್ರಿಪುರ ಶೇ 87.75% ಸಾಕ್ಷರತೆಯನ್ನು ಹೊಂದಿದ್ದು, ಸಾಕ್ಷರತೆ ಪ್ರಮಾಣದಲ್ಲಿ 12 ನೇ ಸ್ಥಾನವನ್ನು ಪಡೆದುಕೊಂಡಿತ್ತು. ಆದರೆ 2011 ರ ಜನಗಣತಿ ನಂತರ ನಾಲ್ಕನೇ ಸ್ಥಾನಕ್ಕೇರಿತ್ತು.

- ಆದರೆ 2012 ರಲ್ಲಿ ತ್ರಿಪುರ ಸರ್ಕಾರ ಕೈಗೊಂಡಿದ್ದ ಸಮೀಕ್ಷೆಯಂತೇ 37 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ತ್ರಿಪುರದಲ್ಲಿ ಕೇವಲ 1,31,634 ಜನರು ಮಾತ್ರ ಅನಕ್ಷರಸ್ಥರಾಗಿದ್ದಾರೆ. ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತ್, NGO ಮತ್ತು ಇತರೆ ಸಂಘ ಸಂಸ್ಥೆಗಳ ನೆರವಿನಿಂದ ತ್ರಿಪುರ ಈ ಸಾಧನೆಯನ್ನು ಮಾಡಿರುವುದಾಗಿ ಮಾಣಿಕ್ ಸರ್ಕಾರ್ ಹೇಳಿದ್ದಾರೆ.
- 2011 ರ ಜನಗಣತಿ ಮಾಹಿತಿ ಪ್ರಕಾರ ಕೇರಳ ಸಾಕ್ಷರತೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಮಿಜೋರಂ ರಾಜ್ಯ ಎರಡನೇ ಸ್ಥಾನದಲ್ಲಿತ್ತು. ಹಾಗೂ ರಾಷ್ಟ್ರದ ಸಾಕ್ಷರತೆ ಪ್ರಮಾಣ ಶೇ 74.04 ಆಗಿತ್ತು. ಈಶಾನ್ಯ ರಾಜ್ಯಗಳ ಪೈಕಿ ಅರುಣಾಚಲ ಪ್ರದೇಶ ಶೇ 66.6 ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ಸಾಕ್ಷರತ ಪ್ರಮಾಣ ಪಟ್ಟಿಯಲ್ಲಿ ಬಿಹಾರ ನಂತರ ಕಡೆಯ ಸ್ಥಾನದಲ್ಲಿರುವ ಎರಡನೇ ರಾಜ್ಯ.

**“ಮನೋಧೈರ್ಯ ಯೋಜನೆ”: ಮಹಾರಾಷ್ಟ್ರ ಸಚಿವ ಸಂಪುಟ ಒಪ್ಪಿಗೆ**

ಅತ್ಯಾಚಾರಕ್ಕೆ ಒಳಗಾಗುವ ಮಹಿಳೆಯರು ಮತ್ತು ಲೈಂಗಿಕ ಹಲ್ಲೆಗೆ ಬಲಿಯಾಗುವ ಮಕ್ಕಳಿಗೆ ಆರ್ಥಿಕ, ವೈದ್ಯಕೀಯ, ಕಾನೂನು ನೆರವು ಹಾಗೂ ಪುನರ್ ವಸತಿ ಸೌಲಭ್ಯ ಒದಗಿಸುವ ಮಹತ್ವದ ಯೋಜನೆಗೆ ಮಹಾರಾಷ್ಟ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ.

- “ಮನೋಧೈರ್ಯ ಯೋಜನೆ” ಎಂದು ಹೆಸರಿಡಲಾಗಿರುವ ಈ ಮಹತ್ವಕಾಂಕ್ಷಿ ಯೋಜನೆಗೆ ಅಕ್ಟೋಬರ್ 2 ರಂದು ಚಾಲನೆ ನೀಡಲಾಗುವುದು.
- ಲೈಂಗಿಕ ಹಲ್ಲೆ ಮತ್ತು ಅತ್ಯಾಚಾರಕ್ಕೆ ಬಲಿಯಾಗಿ ನೊಂದವರಿಗೆ ಈ ಯೋಜನೆಯಡಿ 2 ರಿಂದ 3 ಲಕ್ಷದ ವರೆಗೆ ಆರ್ಥಿಕ ಸಹಾಯವನ್ನು ನೀಡಲಾಗುವುದು. ಇದರ ಜತೆಗೆ ಉಚಿತ ಕಾನೂನು ನೆರವು, ವೈದ್ಯಕೀಯ ಸೌಲಭ್ಯ ಹಾಗೂ ಪುನರ್ ವಸತಿ ಸೌಲಭ್ಯವನ್ನು ಸರ್ಕಾರ ಒದಗಿಸಲಿದೆ.
- ಇತ್ತೀಚೆಗೆ ಮುಂಬೈ ನಲ್ಲಿ ಮಹಿಳಾ ಪತ್ರಿಕೋದ್ಯಮಿಯೊಬ್ಬರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಹಿನ್ನಲೆಯಲ್ಲಿ ಮಹಾರಾಷ್ಟ್ರ ಸರ್ಕಾರ ಈ ಯೋಜನೆಯನ್ನು ಸಿದ್ದಪಡಿಸಿದೆ.

**“ಮುಂಬೈ” ವಿಶ್ವದ ಎರಡನೇ ಅತ್ಯುತ್ತಮ ನಗರ: ಸಮೀಕ್ಷೆ**

ಭಾರತದ ವಾಣಿಜ್ಯ ನಗರಿ ಮುಂಬೈ ವಿಶ್ವದ ಎರಡನೇ ಅತ್ಯುತ್ತಮ ನಗರವೆಂಬ ಖ್ಯಾತಿಗೆ ಒಳಗಾಗಿದೆ. ಮಾರ್ಕೆಟಿಂಗ್ ರಿಸರ್ಚ್ ಸಂಸ್ಥೆ ಇಪ್ಸಾಸ್ (Ipsos) ನಡೆಸಿರುವ ಸಮೀಕ್ಷೆಯಲ್ಲಿ ಮುಂಬೈ ವಿಶ್ವದ ಎರಡನೇ ಅತ್ಯುತ್ತಮ ನಗರವೆಂದು ಹೇಳಲಾಗಿದೆ.

- Ipsos ಸಂಸ್ಥೆ ಜಾಗತಿಕ ಮಟ್ಟದ ಸುಮಾರು 24 ದೇಶಗಳಲ್ಲಿ ನಡೆಸಿರುವ ಈ ಸಮೀಕ್ಷೆಯಲ್ಲಿ ಸಿಂಗಾಪುರ ವಿಶ್ವದ ಮೊದಲ ಅತ್ಯುತ್ತಮ ನಗರವೆಂದು ಹೇಳಾಗಿದೆ. ನಂತರದ ಸ್ಥಾನದಲ್ಲಿ ಮುಂಬೈ, ನ್ಯೂಯಾರ್ಕ್, ಲಂಡನ್ ಮತ್ತು ಅಬು ದುಬೈ ಟಾಪ್ ಐದರಲ್ಲಿ ಸ್ಥಾನಪಡೆದಿರುವ ಪ್ರಮುಖ ನಗರಗಳು.
- ವಾಸಿಸಲು ಯೋಗ್ಯವಾದ ಮತ್ತು ವ್ಯವಹಾರಕ್ಕೆ ಅನುಕೂಲಕರ ವಾತಾವರಣದ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಈ ಸಮೀಕ್ಷೆಯನ್ನು ನಡೆಸಲಾಗಿದೆ.
- ವ್ಯವಹಾರಕ್ಕೆ ಮುಂಬೈ ವಿಶ್ವದ ಮೊದಲ ಅತ್ಯುತ್ತಮ ನಗರವೆಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ನಂತರದ ಸ್ಥಾನವನ್ನು ಸಿಂಗಾಪುರ, ಅಬು ದುಬೈ, ಪ್ಯಾರಿಸ್ ಮತ್ತು ಸಿಡ್ನಿ ಪಡೆದುಕೊಂಡಿವೆ.

**ರಾಜಸ್ತಾನ: ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ಡಯಾಲಿಸಿಸ್**

ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಡಯಾಲಿಸಿಸ್ ಸೌಲಭ್ಯ ನೀಡುವ ಹೊಸ ಪ್ರಯತ್ನಕ್ಕೆ ರಾಜಸ್ತಾನ ಸರ್ಕಾರ ಮುಂದಾಗಿದೆ. ಮುಖ್ಯಮಂತ್ರಿ ಅಶೋಕ್ ಗೆಹ್ಲಾಟ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪರಿಣಾಮಕಾರಿ ನಿರ್ಣಯವನ್ನು ಕೈಗೊಳ್ಳಲಾಗಿದೆ.

- ಅಕ್ಟೋಬರ್ 2 ರಂದು ಮಹಾತ್ಮಗಾಂಧೀ ಜಯಂತಿ ದಿನದಂದು ಈ ಯೋಜನೆಗೆ ರಾಜಸ್ತಾನ ಸರ್ಕಾರ ಚಾಲನೆ ನೀಡಲಿದೆ.
- ಎಪಿಎಲ್ ಅಥವಾ ಬಿಪಿಎಲ್ ಕಾರ್ಡ್ ಹೊಂದಿರುವ ಎಲ್ಲಾ ರೋಗಿಗಳಿಗೂ ಈ ಯೋಜನೆಯಡಿ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.
- ಕೇವಲ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಈ ಯೋಜನೆ ಜಾರಿಗೆ ಬರಲಿದೆ.

**158 ಏಕಲವ್ಯ ಮಾದರಿ ವಸತಿ ಶಾಲೆಗಳ ಸ್ಥಾಪನೆಗೆ ಕೇಂದ್ರ ಅಸ್ತು**

ದೇಶದ 23 ರಾಜ್ಯಗಳಲ್ಲಿ ಒಟ್ಟು 158 ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಬುಡಕಟ್ಟು ವಿದ್ಯಾರ್ಥಿಗಳಿಗಳ ಕಲ್ಯಾಣಕ್ಕೆಂದೇ ಮೀಸಲಿರಿಸಿದ ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಕೇಂದ್ರ ಬುಡಕಟ್ಟು ಸಚಿವಾಲಯದಡಿ ಸ್ಥಾಪಿಸಲಾಗುವುದು.

- ಒಟ್ಟು 158 ಶಾಲೆಗಳ ಪೈಕಿ ಅತಿ ಹೆಚ್ಚು ಅಂದರೆ 22 ಶಾಲೆಗಳನ್ನು ಗುಜರಾತ್ ನಲ್ಲಿ ಸ್ಥಾಪಿಸಲಾಗುವುದು. ಉಳಿದಂತೆ ಮಧ್ಯಪ್ರದೇಶದಲ್ಲಿ 20, ರಾಜಸ್ತಾನದಲ್ಲಿ 17, ಛತ್ತೀಸ್ ಗಡ್ ಮತ್ತು ಒಡಿಶಾದಲ್ಲಿ ತಲಾ 16 ಶಾಲೆಗಳನ್ನು ಸ್ಥಾಪಿಸಲಾಗುವುದು. ಉಳಿದ ಶಾಲೆಗಳು ಇನ್ನಿತರ ರಾಜ್ಯಗಳಲ್ಲಿ ಜಾರಿಗೆ ಬರಲಿವೆ.

**ಏಕಲವ್ಯ ಮಾದರಿ ವಸತಿ ಶಾಲೆಗಳು**:

- ಭಾರತ ಸಂವಿಧಾನದ ಪರಿಚ್ಛೇದ **275 (1)** ರಡಿ ಈ ಮಾದರಿ ವಸತಿ ಶಾಲೆಗಳ ನಿರ್ಮಾಣಕ್ಕೆ ಧನ ಸಹಾಯವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರ ಈ ಶಾಲೆಗಳು ಮೀಸಲಾಗಿದ್ದು, ಬುಡಕಟ್ಟು ಜನಾಂಗದ ಶಿಕ್ಷಣ ಮಟ್ಟವನ್ನು ಅಭಿವೃದ್ಧಿ ಪಡಿಸುವ ಹಿನ್ನೆಲೆಯಿಂದ ಭಾರತ ಸರ್ಕಾರ ಈ ಶಾಲೆಗಳನ್ನು ತೆರೆಯುತ್ತಿದೆ.
- ಅತ್ಯುತ್ತಮ ಶಾಲಾ ಕೊಠಡಿಗಳು, ಕಂಪ್ಯೂಟರ್ ಲ್ಯಾಬ್, ಉತ್ತಮ ದರ್ಜೆಯ ಗ್ರಂಥಾಲಯ, ವಸತಿ ಸೌಲಭ್ಯ ಸೇರಿದಂತೆ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗುವ ಪರಿಸರವನ್ನು ಈ ಶಾಲೆಗಳು ಹೊಂದಿರಲಿವೆ.

**ಸೆಪ್ಟೆಂಬರ್ 14: ರಾಷ್ಟ್ರೀಯ ಹಿಂದಿ ದಿವಸ್**

ಸೆಪ್ಟೆಂಬರ್ 14 ರಂದು ರಾಷ್ಟ್ರೀಯ ಹಿಂದಿ ದಿವಸ್ ಆಚರಣೆಯನ್ನು ಭಾರತದಾದ್ಯಂತ ಆಚರಿಸಲಾಗುತ್ತದೆ. ಹಿಂದಿ ಭಾಷೆಯನ್ನು ಆಡಳಿತ ಭಾಷೆಯೆಂದು ಭಾರತ ಸರ್ಕಾರ ಘೋಷಿಸಿದ ದಿನದ ಸ್ಮರಣಾರ್ಥ ಈ ದಿನವನ್ನು ಹಿಂದಿ ದಿವಸ್ ಎಂದು ಆಚರಿಸಲಾಗುತ್ತದೆ.

- ಸೆಪ್ಟೆಂಬರ್ 14, 1949 ರಂದು ಭಾರತ ಸಂಸತ್ತು ಹಿಂದಿಯನ್ನು ಆಡಳಿತ ಭಾಷೆ ಎಂದು ಘೋಷಿಸಿ ತೀರ್ಮಾನ ಕೈಗೊಂಡಿತು. ಹಾಗಾಗಿ ಸೆಪ್ಟೆಂಬರ್ 14 ರಂದು ರಾಷ್ಟ್ರೀಯ ಹಿಂದಿ ದಿನವನ್ನು ಆಚರಿಸಲಾಗುವುದು.
- ಹಿಂದಿ ಭಾಷೆ ಪುರಾತನ ಭಾಷೆಗಳಲ್ಲಿ ಒಂದಾಗಿದ್ದು, ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಹಿಂದಿ ಭಾಷೆಯ ಮೂಲ ದ್ರಾವಿಡ ಭಾಷೆ.
- ಭಾರತದಲ್ಲಿ ಅತಿ ಹೆಚ್ಚು ಮಾತನಾಡುವ ಭಾಷೆ ಎಂದರೆ ಹಿಂದಿ ನಂತರ ತೆಲುಗು ಅತಿ ಹೆಚ್ಚು ಮಾತನಾಡುವ ಭಾಷೆ.
- ಹಿಂದಿ ದಿನದ ಸ್ಮರಣಾರ್ಥ ಹಿಂದಿ ಭಾಷೆಯನ್ನು ಪ್ರೋತ್ಸಾಹಿಸುವಲ್ಲಿ ಶ್ರಮಿಸುವ ವಿವಿಧ ಸಂಘ ಸಂಸ್ಥೆಗಳು, ವ್ಯಕ್ತಿಗಳಿಗೆ ಈ ದಿನದಂದು ಇಂದಿರಾ ಗಾಂಧಿ ಭಾಷ ಪ್ರಶಸ್ತಿಯನ್ನು ನೀಡಲಾಗುವುದು.

**ಭಾರತ ಸೇನಾಪಡೆಗೆ ಸಿ-17 ಸರಕು ವಿಮಾನ ಸೇರ್ಪಡೆ**

ಅತ್ಯಂತ ಕ್ಷಿಪ್ರಗತಿಯಲ್ಲಿ ಸೈನಿಕರು ಮತ್ತು ಶಸ್ತ್ರಾಸ್ತ್ರಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ನೆರವಾಗಬಲ್ಲ ಸಿ-17 ಸರಕು ವಿಮಾನ ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಯಾಗಿದೆ. ರಕ್ಷಣಾ ಸಚಿವ ಎ.ಕೆ.ಆಯಂಟನಿ, ವಿಮಾನದ ಕೀ ಅನ್ನು ಸೇನಾ ಸಿಬ್ಬಂದಿಗೆ ಹಸ್ತಾಂತರಿಸುವ ಮೂಲಕ ಈ ಹಿಂಡನ್ ವಾಯುನೆಲೆಯಲ್ಲಿ ಕಾರ್ಯಕ್ರಮ ನೆರವೇರಿಸಿದರು.

**'ಸಿ-17 ಗ್ಲೋಬಲ್ ಮಾಸ್ಟರ್' ಬಗ್ಗೆ:**

- ಸಿ-17 ಗ್ಲೋಬಲ್ ಮಾಸ್ಟರ್, ಅಮೆರಿಕದ ವಿಮಾನವಾಗಿದ್ದು, ಇದು ಒಂದೇ ಬಾರಿಗೆ 70 ಟನ್ ತೂಕವನ್ನು ಹೊತ್ತು ಸಾಗಬಲ್ಲ ಸಾಮರ್ಥ್ಯ ಹೊಂದಿದೆ.
- ಇದುವರೆಗೆ ಭಾರತೀಯ ಪಡೆಯಲ್ಲಿನ ಅತ್ಯಂತ ದೊಡ್ಡ ಸರಕು ವಿಮಾನವೆಂದರೆ ರಷ್ಯಾದ ಐಎಲ್-76 ಆಗಿತ್ತು. ಇದರ ಸಾಮರ್ಥ್ಯ ಕೇವಲ 40 ಟನ್ ಮಾತ್ರ ಆಗಿತ್ತು.
- ಹೀಗಾಗಿ ಹೊಸ ವಿಮಾನ ಸೇರ್ಪಡೆ, ತುರ್ತು ಸಂದರ್ಭದಲ್ಲಿ ಸೈನಿಕರು ಮತ್ತು ಶಸ್ತ್ರಾಸ್ತ್ರಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವಲ್ಲಿ ನೆರವಾಗಲಿದೆ.
- ಈ ಸರಕು ಸಾಗಣೆ ವಿಮಾನ ಒಮ್ಮೆಗೆ ಯುದ್ಧ ಟ್ಯಾಂಕ್‌ಗಳು ಮತ್ತು 150 ಸೈನಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.
- 2011ರಲ್ಲಿ ಇಂತಹ 10 ವಿಮಾನಗಳ ಪೂರೈಕೆ ಸಂಬಂಧ ಅಮೆರಿಕದೊಂದಿಗೆ 20000 ಕೋಟಿ ರೂ.ಗಳ ಒಪ್ಪಂದವನ್ನು ಭಾರತ ಮಾಡಿಕೊಂಡಿತ್ತು. ಈ ಪೈಕಿ ಇದೀಗ 3 ವಿಮಾನಗಳು ಭಾರತಕ್ಕೆ ಹಸ್ತಾಂತರವಾಗಿದ್ದು, ಇನ್ನು 7 ವಿಮಾನಗಳು ಮುಂದಿನ ವರ್ಷದ ಅಂತ್ಯದ ವೇಳೆಗೆ ವಾಯುಪಡೆ ಕೈಸೇರಲಿದೆ ಎಂದು ವಾಯುಪಡೆ ಹೇಳಿದೆ.

**ಬೀದಿ ವರ್ತಕರ ಜೀವನೋಪಾಯ ಹಕ್ಕುಗಳ ರಕ್ಷಣಾ ಮಸೂದೆ 2012 ಅಂಗೀಕರಿಸಿದ ಲೋಕಸಭೆ**

ಬೀದಿ ಬದಿಯ ವ್ಯಾಪಾರ ಮತ್ತು ನಗರಗಳ ಬೀದಿ ಬದಿಯ ವರ್ತಕರ ಜೀವನೋಪಾಯ ಹಕ್ಕುಗಳ ರಕ್ಷಣಾ ಮಸೂದೆ 2012' ಲೋಕಸಭೆಯಲ್ಲಿ ಅವಿರೋಧವಾಗಿ ಅಂಗೀಕಾರಗೊಂಡಿದೆ.

**ಪ್ರಮುಖ ಅಂಶಗಳು:**

- ಮಸೂದೆಯಲ್ಲಿನ ಅಂಶಗಳನ್ನು ಜಾರಿಗೊಳಿಸಲು ಪ್ರತಿ ಪಟ್ಟಣಗಳಲ್ಲಿ ಪಟ್ಟಣ ವ್ಯಾಪಾರ ಪ್ರಾಧಿಕಾರ ಸ್ಥಾಪಿಸುವುದು.
- ವ್ಯಾಪಾರ ವಲಯ ಗುರುತಿಸುವಿಕೆ, ಬೀದಿ ಬದಿ ವ್ಯಾಪಾರಕ್ಕೆ ಯೋಜನೆ ರೂಪಿಸುವುದು ಮತ್ತು ವ್ಯಾಪಾರಿಗಳ ಸಮೀಕ್ಷೆಗೆ ಸಂಬಂಧಿಸಿದ ತೀರ್ಮಾನ ಕೈಗೊಳ್ಳುವಾಗ ಬೀದಿ ಬದಿ ವ್ಯಾಪಾರಿಗಳ ಪಾಲ್ಗೊಳ್ಳುವಿಕೆ ಖಾತ್ರಿ ಪಡಿಸಬೇಕು.
- ನಗರ ವ್ಯಾಪಾರಿಗಳ ಸಮಿತಿ (ಟಿ.ವಿ.ಸಿ)ಯಲ್ಲಿ ಪರಿಶಿಷ್ಟ ಜಾತಿ, ಪಂಗಡ, ಒಬಿಸಿ, ಅಲ್ಪಸಂಖ್ಯಾತರು ಮತ್ತು ಅಂಗವಿಕಲರು ಸೇರಿದಂತೆ ಅಧಿಕಾರಿಗಳು ಹಾಗೂ ಬೀದಿ ಬದಿ ವ್ಯಾಪಾರಿಗಳು ಪ್ರತಿನಿಧಿಗಳಾಗಿ ಇರಬೇಕು. ಟಿ.ವಿ.ಸಿಯಲ್ಲಿ ಶೇ 40ರಷ್ಟು ಸದಸ್ಯರು ಬೀದಿ ಬದಿ ವ್ಯಾಪಾರಿಗಳಿರಬೇಕು. ಅವರನ್ನು ಚುನಾವಣೆ ಮೂಲಕ ಆಯ್ಕೆ ಮಾಡಬೇಕು. ಒಟ್ಟು ಸದಸ್ಯರಲ್ಲಿ ಶೇ. 33 ರಷ್ಟು ಮಹಿಳೆಯರು ಇರಬೇಕು.

- ಅಧಿಕಾರಿಗಳ ಸ್ವೇಚ್ಛಾ ವರ್ತನೆಯನ್ನು ತಪ್ಪಿಸಲು ಸದ್ಯಕ್ಕಿರುವ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಬೇಕು ಮತ್ತು ಎಸ್.ಸಿ, ಎಸ್.ಟಿ, ಒಬಿಸಿ, ಮಹಿಳೆಯರು, ಅಂಗವಿಕಲರು ಮತ್ತು ಅಲ್ಪಸಂಖ್ಯಾತರನ್ನು ಗುರುತಿಸಿ ಪ್ರಮಾಣ ಪತ್ರ ನೀಡಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ಸಮೀಕ್ಷೆ ನಡೆಸಬೇಕು.
- ಪ್ರಮಾಣಪತ್ರ ಪಡೆದ ವ್ಯಾಪಾರಿ ಮೃತಪಟ್ಟಲ್ಲಿ, ಯಾವುದೇ ಕಾರಣಕ್ಕೆ ವ್ಯಾಪಾರ ಮಾಡಲು ಸಾಧ್ಯವಾಗದಿದ್ದಲ್ಲಿ, ಅವರ ಕುಟುಂಬ ವರ್ಗದವರು ವ್ಯಾಪಾರ ಮಾಡಬಹುದು.
- ಎಲ್ಲ ಬೀದಿ ವರ್ತಕರನ್ನು ಸಮೀಕ್ಷೆಯಲ್ಲಿ ಗುರುತಿಸಿ ವ್ಯಾಪಾರ ವಲಯದಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು. ನಗರ, ಪಟ್ಟಣ ಅಥವಾ ವಲಯದ ಜನಸಂಖ್ಯೆಯಲ್ಲಿ 2.5ರಷ್ಟು ಮಾತ್ರ ಬೀದಿ ವ್ಯಾಪಾರಿಗಳಿರುವಂತೆ ನೋಡಿಕೊಳ್ಳಬೇಕು.
- ಮಸೂದೆಯ ಸೆಕ್ಷನ್ 29, ಅಧಿಕಾರಿಗಳು ಮತ್ತು ಪೊಲೀಸ್ ಕಿರುಕುಳದಿಂದ ಬೀದಿ ವ್ಯಾಪಾರಿಗಳಿಗೆ ರಕ್ಷಣೆ ಒದಗಿಸಿ, ಯಾವುದೇ ಭಯವಿಲ್ಲದೇ ವ್ಯಾಪಾರ ನಡೆಸಿಕೊಂಡು ಹೋಗಲು ಅನುವು ಮಾಡಿಕೊಡುತ್ತದೆ.
- ಸುಮಾರು ಒಂದು ಕೋಟಿ ಬೀದಿ ವ್ಯಾಪಾರಿಗಳು ಘನತೆಯಿಂದ ವ್ಯಾಪಾರ ನಡೆಸಲು ಮತ್ತು ಜೀವನೋಪಾಯ ಹಕ್ಕುಗಳಿಗೆ ರಕ್ಷಣೆ ಸಿಗಲಿದೆ.
- ವ್ಯಾಪಾರ ವಲಯದಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಬೀದಿ ವ್ಯಾಪಾರಿಗಳಿದ್ದರೆ ಅವರನ್ನು ಲಾಟರಿ ಮೂಲಕ ಆಯ್ಕೆ ಮಾಡಬೇಕು. ಉಳಿದ ವ್ಯಾಪಾರಿಗಳಿಗೆ ಸಮೀಪದ ವ್ಯಾಪಾರ ವಲಯದಲ್ಲಿ ಅವಕಾಶ ಮಾಡಿಕೊಡಬೇಕು.
- ಸಮೀಕ್ಷೆ ಪೂರ್ಣಗೊಂಡು ಪ್ರಮಾಣ ಪತ್ರ ವಿತರಿಸುವವರೆಗೆ ಬೀದಿ ಬದಿ ವ್ಯಾಪಾರಿಯನ್ನು ಸ್ಥಳಾಂತರಿಸುವಂತಿಲ್ಲ.

**ಮಹತ್ವಾಕಾಂಕ್ಷಿ ಪಿಂಚಣಿ ಮಸೂದೆ-2011 ಲೋಕಸಭೆಯಲ್ಲಿ ಅಂಗೀಕಾರ**

8 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯುಪಿಎ ಸರ್ಕಾರದ ಮಹತ್ವಾಕಾಂಕ್ಷಿ ವಿಧೇಯಕವಾದ ಪಿಂಚಣಿ ಮಸೂದೆ-2011 ಕೊನೆಗೂ ಲೋಕಸಭೆಯಲ್ಲಿ ಅಂಗೀಕಾರಗೊಂಡಿದೆ. ಇನ್ನು ರಾಜ್ಯಸಭೆಯಲ್ಲಿ ಮಸೂದೆ ಅಂಗೀಕಾರವಾಗಬೇಕಿದ್ದು, ಬಳಿಕ ರಾಷ್ಟ್ರಪತಿಗಳು ಸಹಿ ಹಾಕಿದರೆ ಮಸೂದೆಗೆ ಕಾಯ್ದೆ ರೂಪ ಸಿಗಲಿದೆ.

**ಹಿನ್ನೆಲೆ:**

2005 ರಲ್ಲಿ ಮೊದಲ ಬಾರಿ ಮಂಡನೆಯಾದ ನಂತರ 2011 ರಲ್ಲಿ ಮತ್ತೆ ಈ ಮಸೂದೆ ಅಂಗೀಕರಿಸಿಕೊಳ್ಳುವ ವಿಫಲ ಯತ್ನ ನಡೆದಿತ್ತು. ಆದರೆ, ಈ ಸಲ ವಿರೋಧ ಬದಿಗೊತ್ತಿದ ಲೋಕಸಭೆಯು ಮಸೂದೆಗೆ ಅಸ್ತು ಎಂದಿತು. ಷೇರುಪೇಟೆಯಲ್ಲಿ ಪಿಂಚಣಿ ಹಣ ಹೂಡುವುದನ್ನು ವಿರೋಧಿಸಿ ವಿಪಕ್ಷಗಳು ಮಂಡಿಸಿದ್ದ ಅನೇಕ ತಿದ್ದುಪಡಿಗಳನ್ನು ಸದನವು ತಿರಸ್ಕರಿಸಿತು. ಸಂಸದೀಯ ಸ್ಥಾಯಿ ಸಮಿತಿ ಮಾಡಿರುವ ಹಲ ಶಿಫಾರಸುಗಳನ್ನು ಒಪ್ಪಿಯೇ ಮಸೂದೆ ಸಿದ್ಧಪಡಿಸಲಾಗಿದೆ.

**ಮಸೂದೆ ಬಗ್ಗೆ:**

- ನೌಕರರ ಪಿಂಚಣಿ ಹಣವನ್ನು ಶೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಪ್ರಾಧಿಕಾರ ರಚನೆ
- ಪಿಂಚಣಿ ಹಣ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಗೆ ಅವಕಾಶ
- ಸರ್ಕಾರವಲ್ಲದೆ ಖಾಸಗಿ ಕಂಪನಿಗಳಲ್ಲೂ ಹೂಡಿಕೆ
- ಪಿಂಚಣಿ ಕ್ಷೇತ್ರದಲ್ಲಿ ಶೇ.26 ವಿದೇಶಿ ನೇರ ಬಂಡವಾಳಕ್ಕೆ ಅವಕಾಶ
- ಪಿಂಚಣಿ ಕ್ಷೇತ್ರವನ್ನು ನಿಯಂತ್ರಿಸಲು ಪೆನ್ಶನ್ ಫಂಡ್ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರ
- ಹೊಸ ಪಿಂಚಣಿ ಯೋಜನೆಯು ಎಲ್ಲ ಕೇಂದ್ರ ಸರ್ಕಾರಿ ನೌಕರರಿಗೆ (ಸಶಸ್ತ್ರ ಪಡೆ ಹೊರತುಪಡಿಸಿ) ಕಡ್ಡಾಯ
- ಪಿಂಚಣಿಯನ್ನು ವಾಪಸು ಪಡೆಯುವಾಗ ಸಾಕಷ್ಟು ನಿಬಂಧನೆಗಳು
- ಪಿಂಚಣಿ ಕ್ಷೇತ್ರದಲ್ಲಿನ್ನು ಶೇ.26 ವಿದೇಶಿ ಹೂಡಿಕೆಗೆ ಅವಕಾಶ
- ಷೇರುಪೇಟೆಯಲ್ಲೂ ಪಿಂಚಣಿ ಹಣ ಹೂಡಿಕೆ

**'ಆಧಾರ್ ಕಾರ್ಡ್ ಕಡ್ಡಾಯವಲ್ಲ' : ಸುಪ್ರೀಂ ಕೋರ್ಟ್ ಮಹತ್ವದ ಆದೇಶ**

ಭಾರತೀಯ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರ ನೀಡುವ 'ಆಧಾರ್ ಕಾರ್ಡ್ ಕಡ್ಡಾಯವಲ್ಲ. ಅದು ಐಚ್ಛಿಕ' ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿದೆ. ಸಾಮಾಜಿಕ ಭದ್ರತಾ ಯೋಜನೆಯಡಿ ಮಾಸಿಕ ವೇತನ, ಭವಿಷ್ಯ ನಿಧಿ, ಮದುವೆ ಹಾಗೂ ಆಸ್ತಿ ನೋಂದಣಿ ಸೇರಿದಂತೆ ಹಲವು ಉದ್ದೇಶಗಳಿಗೆ ಕೆಲ ರಾಜ್ಯಗಳು ಆಧಾರ್ ಕಾರ್ಡ್ ಕಡ್ಡಾಯ ಮಾಡಿರುವುದರ ವಿರುದ್ಧ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಸರ್ಕಾರ ಈ ಸ್ಪಷ್ಟನೆ ನೀಡಿದೆ.

**ಮೂಲಭೂತ ಹಕ್ಕು ಉಲ್ಲಂಘನೆ:**

- ಆಧಾರ್ ಕಾರ್ಡ್ ಇಲ್ಲದೇ ವಿವಾಹ ನೋಂದಣಿ ಮಾಡಲಾಗದು ಎಂದು ಮಹಾರಾಷ್ಟ್ರ ಸರ್ಕಾರ ಇತ್ತೀಚೆಗೆ ಹೇಳಿತ್ತು' ಎಂಬ ಅಂಶವನ್ನು ಕೋರ್ಟ್ ಗಮನಕ್ಕೆ ತಂದರು.
- 'ಸಂವಿಧಾನದ 14 (ಸಮಾನತೆಯ ಹಕ್ಕು) ಮತ್ತು 21ನೇ (ಜೀವನ ಮತ್ತು ಸ್ವಾತಂತ್ರ್ಯದ ಹಕ್ಕು) ವಿಧಿಯಂತೆ ಈ ಯೋಜನೆ ಮೂಲಭೂತ ಹಕ್ಕುಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ.
- ಸರ್ಕಾರ ಇದು ಐಚ್ಛಿಕ ಎಂದು ಹೇಳುತ್ತಿದೆ. ಆದರೆ, ವಸ್ತುಸ್ಥಿತಿ ಹೀಗಿಲ್ಲ' ಎಂದೂ ಅವರು ಹೇಳಿದರು. ಇದನ್ನು ಆಲಿಸಿದ ಪೀಠ, ಆಧಾರ್ ಕಾರ್ಡ್‌ನ್ನು ಅಕ್ರಮ ವಲಸಿಗರಿಗೆ ವಿತರಿಸದಂತೆ ಸರ್ಕಾರಕ್ಕೆ ಸೂಚಿಸಿತು.
- ಆಧಾರ್ ಕಾರ್ಡ್ ಇಲ್ಲ ಎಂಬ ನೆಪ ಹೇಳಿ ಫಲಾನುಭವಿಗಳಿಗೆ ಮತ್ತು ನಾಗರಿಕರಿಗೆ ಯಾವುದೇ ಸೌಲಭ್ಯ ನಿರಾಕರಿಸುವಂತಿಲ್ಲ.

**ಭಾರತದಲ್ಲಿ ಈಗ ಮೊಬೈಲ್ ಬಳಕೆದಾರರ ಸಂಖ್ಯೆ 67 ಕೋಟಿ: ಸಮೀಕ್ಷೆ**

ಜಿಎಸ್‌ಎಂ ಚಂದಾದಾರರ ಸಂಖ್ಯೆ ಆಗಸ್ಟ್‌ನಲ್ಲಿ 17.8 ಲಕ್ಷದಷ್ಟು ಏರಿಕೆ ಕಂಡಿದ್ದು ಒಟ್ಟು ಬಳಕೆದಾರರ ಸಂಖ್ಯೆ 67.44 ಕೋಟಿ ದಾಟಿದೆ ಎಂದು ಭಾರತೀಯ ಮೊಬೈಲ್ ದೂರವಾಣಿ ಸೇವಾ ಸಂಸ್ಥೆಗಳ ಒಕ್ಕೂಟ (ಸಿಒಎಐ) ಹೇಳಿದೆ. ಜುಲೈ ಅಂತ್ಯಕ್ಕೆ

ದೇಶದಲ್ಲಿ 67.26 ಕೋಟಿ 'ಜಿಎಸ್‌ಎಂ' ಚಂದಾದಾರರಿದ್ದರು. ಆಗಸ್ಟ್‌ನಲ್ಲಿ ಏರ್‌ಸೆಲ್ ಕಂಪೆನಿ ತನ್ನ ಸೇವಾ ವ್ಯಾಪ್ತಿಗೆ ಹೊಸದಾಗಿ 8.76 ಲಕ್ಷ ಬಳಕೆದಾರರನ್ನು ಸೇರಿಸಿಕೊಂಡು ಒಟ್ಟು ಸಂಖ್ಯೆಯನ್ನು 6.26 ಕೋಟಿಗೆ ಹೆಚ್ಚಿಸಿಕೊಂಡಿದೆ.

**ಯಾರ ಪಾಲು ಎಷ್ಟು?**

- ಏರ್‌ಟೆಲ್ ಚಂದಾದಾರರ ಸಂಖ್ಯೆ 8.33 ಲಕ್ಷದಷ್ಟು ಹೆಚ್ಚಿದ್ದು, ಒಟ್ಟು ಸಂಖ್ಯೆ 19.22 ಕೋಟಿಗೇರಿದೆ. ಏರ್‌ಟೆಲ್ ಮಾರುಕಟ್ಟೆ ಪಾಲು ಸಹ ಶೇ 28.50ಕ್ಕೆ ಜಿಗಿದಿದೆ.
- ಐಡಿಯಾ ಸೆಲ್ಯುಲರ್ ಗ್ರಾಹಕರ ಸಂಖ್ಯೆ 7.52 ಲಕ್ಷದಷ್ಟು ಹೆಚ್ಚಿದ್ದು 12.60 ಕೋಟಿಗೆ ಏರಿಕೆ ಕಂಡಿದೆ.
- ವೊಡಾಫೋನ್ ತನ್ನ ಸೇವಾ ವ್ಯಾಪ್ತಿಗೆ ಹೊಸದಾಗಿ 85 ಸಾವಿರ ಗ್ರಾಹಕರನ್ನು ಸೇರ್ಪಡೆ ಮಾಡಿಕೊಂಡಿದೆ. ಕಂಪೆನಿ ಶೇ 22.88ರಷ್ಟು ಮಾರುಕಟ್ಟೆ ಪಾಲು ಕಾಯ್ದುಕೊಂಡಿದ್ದು ಒಟ್ಟಾರೆ ಗ್ರಾಹಕರ ಸಂಖ್ಯೆ 15.43 ಕೋಟಿ ದಾಟಿದೆ.
- ವಿಡಿಯೊಕಾನ್ 1.58 ಲಕ್ಷ ಗ್ರಾಹಕರನ್ನು ಹೊಸದಾಗಿ ಗಳಿಸಿಕೊಂಡಿದ್ದು, ಬಳಕೆದಾರರ ಸಂಖ್ಯೆ 29.29 ಲಕ್ಷಕ್ಕೇರಿದೆ.
- ಯುನಿನಾರ್ 5 ಲಕ್ಷ ಗ್ರಾಹಕರನ್ನು ಕಳೆದುಕೊಂಡಿದ್ದು, ಚಂದಾದಾರರ ಸಂಖ್ಯೆ ಆಗಸ್ಟ್ ಅಂತ್ಯಕ್ಕೆ 3.22 ಕೋಟಿಗೆ ತಗ್ಗಿದೆ.
- 'ಎಂಟಿಎನ್‌ಎಲ್' ಗ್ರಾಹಕರ ಸಂಖ್ಯೆಯೂ 2.48 ಲಕ್ಷದಷ್ಟು ತಗ್ಗಿದೆ.

## ಪ್ರಜೆಗಳಿಗೆ ಚುನಾವಣಾ ಅಭ್ಯರ್ಥಿಗಳನ್ನು ತಿರಸ್ಕರುಸುವ ಹಕ್ಕು: ಸುಪ್ರೀಂ ಕೋರ್ಟ್

ಚುನಾವಣೆಯಲ್ಲಿ ಸ್ಪರ್ಧಿಸಿರುವ ಎಲ್ಲ ಅಭ್ಯರ್ಥಿಗಳನ್ನು ತಿರಸ್ಕರಿಸುವ ನಕಾರಾತ್ಮಕ ಮತದಾನದ ಹಕ್ಕು ಮತದಾರರಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಈ ಹಕ್ಕನ್ನು ಚಲಾಯಿಸಲು ಅನುವು ಮಾಡಿಕೊಡುವ ಸಲುವಾಗಿ ಮತಯಂತ್ರಗಳು (ಇವಿಎಂ) ಹಾಗೂ ಮತ ಪತ್ರಗಳಲ್ಲಿ 'ಯಾರಿಗೂ ನನ್ನ ಮತವಿಲ್ಲ' ಎಂಬ ಆಯ್ಕೆಯನ್ನು ಒದಗಿಸುವಂತೆ ಚುನಾವಣೆ ಆಯೋಗಕ್ಕೆ ನಿರ್ದೇಶನ ನೀಡಿದೆ.

**ಸುಪ್ರೀಂ ತೀರ್ಪು:**

''ನಕಾರಾತ್ಮಕ ಮತದಾನಕ್ಕೆ ಅವಕಾಶ ಮಾಡಿಕೊಟ್ಟರೆ ಮತದಾನ ಪ್ರಕ್ರಿಯೆಗೆ ಶುದ್ಧತೆ ಹಾಗೂ ಪಾರದರ್ಶಕತೆ ಒದಗುತ್ತದೆ. ಸೂಕ್ತ ಅಭ್ಯರ್ಥಿಯಿಲ್ಲ ಎಂಬ ಕಾರಣಕ್ಕಾಗಿ ಮತದಾನದಿಂದ ದೂರವುಳಿಯಲು ಮುಂದಾಗುವ ಮತದಾರರನ್ನೂ ನಕಾರಾತ್ಮಕ ಮತದಾನದ ಅವಕಾಶ ಮತಗಟ್ಟೆಗೆ ಎಳೆದು ತರುತ್ತದೆ. ಇದರಿಂದ ನೀತಿ ನೇಮ ತಪ್ಪಿದ ಅಭ್ಯರ್ಥಿಗಳ ಕುರಿತು ತಮಗಿರುವ ಅಸಮಾಧಾನವನ್ನು ಮತದಾರರು ವ್ಯಕ್ತಪಡಿಸಲು ಅನುವಾಗಲಿದೆ. 'ಇಂಥ ಅಭ್ಯರ್ಥಿಗಳು ನನ್ನ ಮತಕ್ಕೆ ಅರ್ಹರಲ್ಲ,' ಎಂದು ಮತದಾರರು ನೇರವಾಗಿ ಹೇಳಬಹುದಾಗಿದೆ,'' ಎಂದು ಮುಖ್ಯ ನ್ಯಾಯಮೂರ್ತಿ ಪಿ.ಸದಾಶಿವಂ ನೇತೃತ್ವದ ಸರ್ವೋಚ್ಚ ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ. 'ಯಾರಿಗೂ ನನ್ನ ಮತವಿಲ್ಲ' ಎಂಬ ಆಯ್ಕೆ ಮಾಡುವ ಮತದಾರರ ವಿವರವನ್ನು ರಹಸ್ಯವಾಗಿಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಚುನಾವಣೆ ಆಯೋಗಕ್ಕೆ ಪೀಠ ಸೂಚನೆ ನೀಡಿದೆ. ಈ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಆಯೋಗಕ್ಕೆ ಅಗತ್ಯವಿರುವ ಸಹಕಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

**ಮೂಲಭೂತ ಹಕ್ಕು:**

"ನಕಾರಾತ್ಮಕ ಮತದಾನವೂ ಮೂಲಭೂತ ಹಕ್ಕುಗಳಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅಂಗ. ಆಯ್ಕೆ ಸ್ವಾತಂತ್ರ್ಯ ಪ್ರಜಾಸತ್ತೆಯ ಪ್ರಮುಖ ಲಕ್ಷಣ. ಹೀಗಾಗಿ ನಕಾರಾತ್ಮಕ ಮತದಾನ ನಾಗರಿಕರ ಸವಿಂಧಾನ ಬದ್ಧ ಹಕ್ಕು," ಎಂದು ಪೀಠ ಸ್ಪಷ್ಟಪಡಿಸಿದೆ. "ನಕಾರಾತ್ಮಕ ಮತದಾನ 13 ದೇಶಗಳಲ್ಲಿ ಚಾಲ್ತಿಯಲ್ಲಿದೆ. ಭಾರತದಲ್ಲೂ ಜನಪ್ರತಿನಿಧಿಗಳು ಸದನದಲ್ಲಿ ನಡೆಯುವ ಮತದಾನ ಪ್ರಕ್ರಿಯೆಯಿಂದ ಹೊರಗುಳಿಯಲು ಅವಕಾಶವಿದೆ. 'ಮತದಾನದಿಂದ ದೂರ ಉಳಿದಿದ್ದೇವೆ' ಎಂಬ ಆಯ್ಕೆಯಿರುವ ಒತ್ತು ಗುಂಡಿಯನ್ನು ಸಂಸದರು ಅಥವಾ ಶಾಸಕರು ಒತ್ತುವ ಮೂಲಕ ತಮ್ಮ ಮತವನ್ನು ಯಾರಿಗೂ ನೀಡಿಲ್ಲ ಎಂಬುದನ್ನು ಸ್ಪಷ್ಟಪಡಿಸಬಹುದು," ಎಂದು ಸುಪ್ರೀಂ ಹೇಳಿದೆ.

**ವ್ಯವಸ್ಥೆ ಸ್ವಚ್ಛ:**

"ನಕಾರಾತ್ಮಕ ಮತದಾನಕ್ಕೆ ಅವಕಾಶ ಕಲ್ಪಿಸಿದರೆ ಉತ್ತಮ ಹಾಗೂ ಸಚ್ಚಾರಿತ್ರ್ಯವಂತ ಅಭ್ಯರ್ಥಿಗಳನ್ನಷ್ಟೇ ಕಣಕ್ಕಿಳಿಸುವ ಅನಿವಾರ್ಯತೆಗೆ ರಾಜಕೀಯ ಪಕ್ಷಗಳು ಸಿಲುಕುತ್ತವೆ. ಹೀಗಾದರೆ ಚುನಾವಣೆ ಪ್ರಕ್ರಿಯೆ ಸುಧಾರಣೆ ಕಾಣಲಿದೆ. ಯೋಗ್ಯ ಜನಪ್ರತಿನಿಧಿಗಳು ಆಯ್ಕೆಯಾಗುವ ಮೂಲಕ ರಾಜಕೀಯ ವ್ಯವಸ್ಥೆ ಜತೆ ಪ್ರಜಾತಂತ್ರವೂ ಸ್ವಚ್ಛಗೊಳ್ಳಲಿದೆ," ಎಂದು ನ್ಯಾಯಪೀಠ ಆಶಾಭಾವನೆ ವ್ಯಕ್ತಪಡಿಸಿದೆ.

**ಹಿನ್ನೆಲೆ:**

ಮತದಾರರಿಗೆ ನಕಾರಾತ್ಮಕ ಮತದಾನಕ್ಕೆ ಅವಕಾಶ ಕಲ್ಪಿಸುವಂತೆ ಕೋರಿ 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ' ಎಂಬ ಸ್ವಯಂ ಸೇವಾ ಸಂಘಟನೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಬಂಧ ಸುಪ್ರೀಂತೀರ್ಪುಹೊರಬಿದ್ದಿದೆ.

**ಈಗೇನಿದೆ?**

ಮತಗಟ್ಟೆಗೆ ಹೋಗಿ 'ಮತದಾನ ಮಾಡದೆ ಇರುವ ಅಧಿಕಾರ' ಚಲಾಯಿಸಲು ಈಗಿನ ಜನತಾ ಪ್ರಾತಿನಿಧ್ಯ ಕಾಯ್ದೆ 49 (ಒ) ಯಲ್ಲಿ ಮತದಾರನಿಗೆ ಅವಕಾಶ ನೀಡಲಾಗಿತ್ತು. ಆದರೆ ಅದು ಮತಪತ್ರ ಅಥವಾ ಮತಯಂತ್ರದಲ್ಲಿ ದಾಖಲಾಗುತ್ತಿರಲಿಲ್ಲ. ಮತಗಟ್ಟೆಗೆ ಬಂದು 'ನಾನು ಮತ ಚಲಾಯಿಸಲು ಇಷ್ಟ ಪಡುವುದಿಲ್ಲ' ಎಂದು ಮತಗಟ್ಟೆ ಅಧಿಕಾರಿಗೆ ತಿಳಿಸಬೇಕಾಗುತ್ತಿತ್ತು. ಅದನ್ನು ದಾಖಲೆ ಪುಸ್ತಕದಲ್ಲಿ ಕಾಖಲಿಸಿ ಮತದಾರ ಸಹಿ ಪಡೆಯಲಾಗುತ್ತಿತ್ತು.

**ಸುಪ್ರೀಂ ತೀರ್ಪಿನ ಮುಖ್ಯಾಂಶಗಳು:**

* ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳ ತಿರಸ್ಕಾರಕ್ಕೆ ಮತದಾರರಿಗೆ ಸಂವಿಧಾನ ಬದ್ಧ ಹಕ್ಕಿದೆ

* 'ಯಾರಿಗೂ ಮತವಿಲ್ಲ' ಎಂಬುದು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗ

* ನಕಾರಾತ್ಮಕ ಮತದಾನದಿಂದ ರಾಜಕೀಯ ಹಾಗೂ ಚುನಾವಣೆ ವ್ಯವಸ್ಥೆ ಸ್ವಚ್ಛ

* 'ಯಾರಿಗೂ ಮತವಿಲ್ಲ' ಎಂಬ ಒತ್ತುಗುಂಡಿಯನ್ನು ಇಎಂವಿಗಳಲ್ಲಿ ಅಳವಡಿಸಬೇಕು

* ನಕಾರಾತ್ಮಕ ಮತದಾನ ಮಾಡಿದವರ ಗೋಪ್ಯತೆ ಕಾಪಾಡಬೇಕು

* ಹೊಸ ವ್ಯವಸ್ಥೆ ಕಲ್ಪಿಸಲು ಆಯೋಗಕ್ಕೆ ಕೇಂದ್ರ ಸಹಕರಿಸಬೇಕು.

**"ಜಿಯೋ ಪಾರ್ಸಿ (Jiyo Parsi") ಯೋಜನೆ ಜಾರಿಗೊಳಿಸಿದ ಕೇಂದ್ರ ಸರ್ಕಾರ**

ದೇಶದಲ್ಲಿ ಪಾರ್ಸಿ ಧರ್ಮದ ಜನಸಂಖ್ಯೆ ಕ್ಷೀಣಿಸುತ್ತಿರುವ ಹಿನ್ನಲೆಯಲ್ಲಿ "ಜಿಯೋ ಪಾರ್ಸಿ" ಎನ್ನುವ ಯೋಜನೆಯನ್ನು ಕೇಂದ್ರ ಅಲ್ಪಸಂಖ್ಯಾತರ ಮೇಲಿನ ಸಚಿವಾಲಯ ಜಾರಿಗೊಳಿಸಿದೆ.

**ಈ ಯೋಜನೆ ಏಕೆ?**

- ದೇಶದ ಅಲ್ಪಸಂಖ್ಯಾತರ ಧರ್ಮಗಳಲ್ಲಿ ಪಾರ್ಸಿ ಸಹ ಒಂದು. ಆದರೆ ಪಾರ್ಸಿ ಧರ್ಮದ ಜನಸಂಖ್ಯೆ ದೇಶದಲ್ಲಿ ಇತ್ತೀಚೆಗೆ ಕ್ಷೀಣಿಸುತ್ತಿದೆ. ಪಾರ್ಸಿ ಜನಸಂಖ್ಯೆಯನ್ನು ಸ್ಥಿರಗೊಳಿಸಿ, ಜನಸಂಖ್ಯೆಯನ್ನು ಹೆಚ್ಚಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.

**ಯೋಜನೆಯ ಅನುಷ್ಠಾನ:**

- ಯೋಜನೆಗೆ ತಗಲುವ ಶೇ 100 ರಷ್ಟು ವೆಚ್ಚವನ್ನು ಕೇಂದ್ರ ಅಲ್ಪಸಂಖ್ಯಾತ ಸಚಿವಾಲಯ ಭರಿಸಲಿದೆ.
- ಆಯ್ದ ನಗರ/ಪಟ್ಟಣಗಳ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

**ಗುರಿ:**

- ಈ ಯೋಜನೆ ಕೇವಲ ಪಾರ್ಸಿ ಸಮುದಾಯಕ್ಕೆ ಮಾತ್ರ ಸೀಮಿತ. ಮದುವೆಯಾದ ಪಾರ್ಸಿ ದಂಪತಿಗಳು ಮತ್ತು ವಯಸ್ಕ ಯುವಕ, ಯುವತಿಯರು ಈ ಯೋಜನೆಯಡಿ ಯಾವುದೇ ರೀತಿಯ ವೈದ್ಯಕೀಯ ಸಲಹೆ ಮತ್ತು ಉಪಚಾರ ಪಡೆಯಬಹುದಾಗಿದೆ.

**"ಸೀಕೋ ಔರ್ ಕಮಾವ್" ಯೋಜನೆಗೆ ಚಾಲನೆ ನೀಡಿದ ಕೇಂದ್ರ ಸರ್ಕಾರ**

ಅಲ್ಪಸಂಖ್ಯಾತ ಧರ್ಮೀಯರಿಗೆ ಉದ್ಯೋಗ ಕೊರತೆಯನ್ನು ನೀಗಿಸಿ ಜೀವನ ಮಟ್ಟ ಸುಧಾರಿಸುವ "ಸೀಕೋ ಔರ್ ಕಮಾವ್" (ಕಲಿಯಿರಿ ಮತ್ತು ಗಳಿಸಿರಿ) ಎಂಬ ವಿನೂತನ ಯೋಜನೆಯನ್ನು ಕೇಂದ್ರ ಅಲ್ಪಸಂಖ್ಯಾತ ಸಚಿವಾಲಯ ಇತ್ತೀಚೆಗೆ ಜಾರಿಗೊಳಿಸಿದೆ. ಅಲ್ಪಸಂಖ್ಯಾತ ಧರ್ಮೀಯರಲ್ಲಿ ಕೌಶಲ್ಯವೃದ್ಧಿ ಮಾಡುವುದು ಯೋಜನೆಯ ಪ್ರಮುಖ ಗುರಿ.

**ಯೋಜನೆಯ ಗುರಿ**:

- 12 ನೇ ಪಂಚವಾರ್ಷಿಕ ಯೋಜನೆಯಡಿ (2012-17) ಅಲ್ಪಸಂಖ್ಯಾತ ವರ್ಗಗಳಲ್ಲಿ ನಿರುದ್ಯೋಗ ಪ್ರಮಾಣವನ್ನು ಕಡಿಮೆಗೊಳಿಸುವುದು.
- ಅಲ್ಪಸಂಖ್ಯಾತರಿಗೆ ಕೌಶಲ್ಯ ತರಬೇತಿ ನೀಡಿ ಜೀವನಾಧಾರವನ್ನು ರೂಪಿಸುವುದು.
- ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಭವಿಷ್ಯವನ್ನು ಉತ್ತಮ ಪಡಿಸುವುದು ಹಾಗೂ ಶಾಲೆಯಿಂದ ಹೊರ ಉಳಿದವರಿಗೆ ಉದ್ಯೋಗ ಒದಗಿಸುವುದು.
- ಒಟ್ಟಾರೆಯಾಗಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರನ್ನು ಮೇಲೆತ್ತಲು ಶ್ರಮವಹಿಸುವುದು.
- ಕೌಶಲ್ಯ ತರಬೇತಿ ಮೂಲಕ ದೇಶಕ್ಕೆ ಮಾನವ ಸಂಪನ್ಮೂಲವನ್ನು ಸೃಷ್ಟಿಸುವುದು.

**ಯೋಜನೆಯ ಫಲಾನುಭವಿಗಳು**:

- ರಾಷ್ಟ್ರೀಯ ಅಲ್ಪಸಂಖ್ಯಾತರ ಕಾಯಿದೆ-1992 ರಲ್ಲಿ ಗೊತ್ತು ಮಾಡಿರುವ ಅಲ್ಪಸಂಖ್ಯಾತ ಧರ್ಮಗಳಾದ ಮುಸ್ಲಿಂ, ಕ್ರಿಸ್ಚಿಯನ್ಸ್, ಸಿಕ್ಕರು, ಭೌದ್ಧ ಮತ್ತು ಪಾರ್ಸಿ ಧರ್ಮೀಯರು ಈ ಯೋಜನೆಯಡಿ ಉಪಯೋಗ ಪಡೆದುಕೊಳ್ಳಲಿದ್ದಾರೆ.

## ಅಂತರರಾಷ್ಟ್ರೀಯ

### ಜಾಗತಿಕ ಕಾಫಿ ಉತ್ಪಾದನೆ: 7 ನೇ ಸ್ಥಾನಕ್ಕೆ ಕುಸಿದ ಭಾರತ

ಕಾಫಿ ಉತ್ಪಾದನೆಯಲ್ಲಿ ತುಸು ಹೆಚ್ಚಳ ಕಂಡುಬಂದಿದ್ದರು, ಭಾರತ ಜಾಗತಿಕ ಕಾಫಿ ಉತ್ಪಾದನೆಯಲ್ಲಿ 7 ನೇ ಸ್ಥಾನಕ್ಕೆ ಕುಸಿದಿದೆ. ಕಳೆದ ವರ್ಷ 6 ನೇ ಸ್ಥಾನದಲ್ಲಿತ್ತು. ಪುಟ್ಟ ದೇಶವಾದರು "ರಿಪಬ್ಲಿಕ್ ಆಫ್ ಹೊಂಡರಸ್" ಕಾಫಿ ಉತ್ಪಾದನೆಯಲ್ಲಿ 6 ನೇ ಸ್ಥಾನಕ್ಕೆ ಏರಿದ್ದು, ಭಾರತವನ್ನು 7 ನೇ ಸ್ಥಾನಕ್ಕೆ ತಳ್ಳಿರುವುದು ವಿಶೇಷ.

- 2012 ರಲ್ಲಿ ಭಾರತದ ಕಾಫಿ ಉತ್ಪಾದನೆ ಶೇ 0.48 ರಷ್ಟು ಹೆಚ್ಚಳ ಕಂಡುಬಂದಿದ್ದು 5.28 ಮಿಲಿಯನ್ ಬ್ಯಾಗ್ (ಪ್ರತಿ ಬ್ಯಾಗ್ 60 ಕೆ.ಜಿ) ಯಷ್ಟು ಕಾಫಿಯನ್ನು ಉತ್ಪಾದಿಸಿದೆ. 2011 ರಲ್ಲಿ 5.23 ಮಿಲಿಯನ್ ಬ್ಯಾಗ್ ಕಾಫಿಯನ್ನು ಉತ್ಪಾದಿಸಲಾಗಿತ್ತು. ಭಾರತ ಜಾಗತಿಕ ಕಾಫಿ ಉತ್ಪಾದನೆಯಲ್ಲಿ ಶೇ 3.6 ರಷ್ಟು ಪಾಲನ್ನು ಹೊಂದಿದೆ. ಆದರೆ ರಿಪಬ್ಲಿಕ್ ಆಫ್ ಹೊಂಡರಸ್ ಶೇ 3.7 ರಷ್ಟು ಪಾಲನ್ನು ಹೊಂದಿದೆ.
- ಅಂತರರಾಷ್ಟ್ರೀಯ ಕಾಫಿ ಸಂಸ್ಥೆ ಪ್ರಕಾರ ವಿಶ್ವದ ಕಾಫಿ ಉತ್ಪಾದನೆಯಲ್ಲಿ ಶೇ 7.18 ರಷ್ಟು ಹೆಚ್ಚಳವಾಗಿದೆ. 2012 ರಲ್ಲಿ 144.06 ಮಿಲಿಯನ್ ಬ್ಯಾಗ್ ಕಾಫಿಯನ್ನು ಉತ್ಪಾದಿಸಲಾಗಿದ್ದು, 2011 ರಲ್ಲಿ 134.41 ಮಿಲಿಯನ್ ಬ್ಯಾಗ್ ಕಾಫಿಯನ್ನು ಉತ್ಪಾದಿಸಲಾಗಿತ್ತು.
- ಬ್ರೆಜಿಲ್, ವಿಯಟ್ನಾಂ, ಇಂಡೋನೇಷಿಯಾ ಹಾಗೂ ಈಥಿಯೋಪಿಯಾ ಕಾಫಿ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿ ಪ್ರಮುಖ ರಾಷ್ಟ್ರಗಳು.
- ಆಹಾರ ಮತ್ತು ಕೃಷಿ ಸಂಸ್ಥೆ (Food and Agriculture Organisation) ಪ್ರಕಾರ ಭಾರತದಲ್ಲಿ ಪ್ರತಿ ಹೇಕ್ಟೇರ್ ಗೆ ಕಾಫಿ ಉತ್ಪಾದನೆ 837.8 ಕೆ.ಜಿ ಇದ್ದರೆ, ವಿಯಟ್ನಾಂ ನಲ್ಲಿ 2,187.9 ಕೆ.ಜಿ ಮತ್ತು ಬ್ರೆಜಿಲ್ ನಲ್ಲಿ 1,256.7 ಕೆ,ಜಿ ಇದೆ.

### 20 ವರ್ಷಗಳ ನಂತರ 2014 ರ ನಾಟೋ ಶೃಂಗಸಭೆ ಅತಿಥ್ಯ ವಹಿಸಲಿರುವ ಬ್ರಿಟನ್

ನಾಟೋ (NATO) ನಾರ್ತ್ ಅಟ್ಲಾಂಟಿಕ್ ಟ್ರೇಟಿ ಆರ್ಗನೇಷನ್ನ ಶೃಂಗಸಭೆ 2014 ರಲ್ಲಿ ನಡೆಯಲ್ಲಿದ್ದು, 20 ವರ್ಷಗಳ ನಂತರ ಬ್ರಿಟನ್ ಈ ಶೃಂಗಸಭೆಯ ಅತಿಥ್ಯವನ್ನು ವಹಿಸುತ್ತಿದೆ. ಬ್ರಿಟನ್ ಪ್ರಧಾನಿ ಡೇವಿಡ್ ಕೆಮರೂನ್ ರವರು 2014 ರಲ್ಲಿ ನಡೆಯಲಿರುವ ಈ ಶೃಂಗಸಭೆ ನಾಟೋ ಇತಿಹಾಸದಲ್ಲೇ ಅತ್ಯಂತ ಮಹತ್ವಪೂರ್ಣವಾದದ್ದು ಎಂದಿದ್ದಾರೆ. ಮಾರ್ಗರೆಟ್ ಥ್ಯಾಚರ್ ಅವರು ಪ್ರಧಾನಿ ಆಗಿದ್ದ ವೇಳೆ ಅಂದರೆ 1990 ರಲ್ಲಿ ಬ್ರಿಟನ್ ನಾಟೋ ದ ಶೃಂಗಸಭೆಯನ್ನು ಆಯೋಜಿಸಿತ್ತು.

- ನ್ಯಾಟೊ ಶೃಂಗಸಭೆ ಪ್ರತಿ ಎರಡು ವರ್ಷಕ್ಕೊಮ್ಮೆ ಆಯೋಜಿಸಲಾಗುವುದು. 2012 ರಲ್ಲಿ ನಡೆದ ಶೃಂಗಸಭೆಯ ಅತಿಥ್ಯವನ್ನು ಚಿಕಾಗೋ ವಹಿಸಿತ್ತು.
- ನಾರ್ಥ್ ಅಟ್ಲಾಂಟಿಕ್ ಟ್ರೇಟಿ ಆರ್ಗನೇಷನ್ ಅಥವಾ ಅಟ್ಲಾಂಟಿಕ್ ಅಲಿಯೆನ್ಸ್ ಎಂದು ಕರೆಯಲಾಗುವ ನಾಟೋ ಅಂತರರಾಷ್ಟ್ರಗಳ ಮಿಲಿಟರಿ ಒಪ್ಪಂದವಾಗಿದೆ.

- ಏಪ್ರಿಲ್ 4, 1949 ರಲ್ಲಿ ನಾರ್ಥ್ ಅಟ್ಲಾಂಟಿಕ್ ಒಪ್ಪಂದ ಮೂಲಕ ನಾಟೊ ಜಾರಿಗೆ ಬಂದಿದೆ. ಯಾವುದಾದರೂ ಸದಸ್ಯ ರಾಷ್ಟ್ರಗಳ ಮೇಲೆ ಇತರೆ ರಾಷ್ಟ್ರ ಯುದ್ಧ ಆರಂಭಿಸಿದರೆ ನಾಟೋದ ಸದಸ್ಯ ರಾಷ್ಟ್ರಗಳು ಒಂದುಗೂಡಿ ಸದಸ್ಯ ರಾಷ್ಟ್ರದ ಪರವಾಗಿ ಬೆಂಬಲಿಸುವ ಸಿದ್ಧಾಂತವನ್ನು ಹೊಂದಿವೆ.
- ನಾಟೋದ ಕೇಂದ್ರ ಕಚೇರಿ ಬೆಲ್ಜಿಯಂ ನ ಬ್ರಸೆಲ್ ನಲ್ಲಿ ಇದೆ.

## ಭಾರತ ಮತ್ತು ಓಮೆನ್ ಜಂಟಿ ನೌಕಾ ಸಮರಭ್ಯಾಸ

ಗಲ್ಫ್ ರಾಷ್ಟ್ರಗಳ ಜತೆ ಭಾರತ ತನ್ನ ಬಾಂಧವ್ಯವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಸಾಕ್ಷಿಯಂತೆ ಭಾರತ ಮತ್ತು ಓಮೆನ್ ರಾಷ್ಟ್ರ ಜಂಟಿ ನೌಕಾ ಸಮರಭ್ಯಾಸವನ್ನು ಕೈಗೊಂಡಿದ್ದವು. ಭಾರತದ ಐಎನ್ಎಸ್ ಮೈಸೂರ್, ಐಎನ್ಎಸ್ ತಬರ್, ಐಎನ್ಎಸ್ ತರ್ಕಷ್ ಮತ್ತು ಐಎನ್ಎಸ್ ಆದಿತ್ಯ ನೌಕೆಗಳು ಈ ಸಮರಭ್ಯಾಸದಲ್ಲಿ ಭಾಗವಹಿಸಿದ್ದವು.

- “**ನಷೀರ್ ಅಲ್ ಬಹಾರ್**” ಭಾರತ ಮತ್ತು ಓಮೆನ್ ನಡುವೆ ಎರಡು ವರ್ಷಗಳಿಗೊಮ್ಮೆ ನಡೆಯುವ ಸ್ನೇಹ ಪೂರ್ವಕ ಸಮರಭ್ಯಾಸ. ಉಭಯ ದೇಶಗಳ ನಡುವಿನ ಸಂಬಂಧ ಮತ್ತು ಸಹಕಾರವನ್ನು ಉತ್ತೇಜಿಸಲು ಈ ಸಮರಭ್ಯಾಸ ವೇದಿಕೆ ಎನ್ನಲಾಗಿದೆ,
- ಈ ವರ್ಷ ನಡೆಯುತ್ತಿರುವ ಸಮರಭ್ಯಾಸ ಉಭಯ ದೇಶಗಳ ನಡುವೆ ನಡೆಯುತ್ತಿರುವ ೯ ನೇಯದು. ಹಾಗೂ ಎರಡು ದೇಶಗಳ ನಡುವೆ ಸಮರಭ್ಯಾಸ ಚಾಲನೆಯಾಗಿ 20 ವರ್ಷ ತುಂಬಿದ ಸಂಭ್ರಮ.
- ಭಾರತ ಮತ್ತು ಓಮೆನ್ 1953 ಭಾರತ-ಓಮೆನ್ ಸ್ನೇಹ ಒಪ್ಪಂದಕ್ಕೆ ಸಹಿ ಹಾಕಿವೆ.

## ಅಸ್ಟ್ರೇಲಿಯಾ ಪ್ರಧಾನಿಯಾಗಿ ಕನ್ಸರ್ವೇಟಿವ್ ಪಕ್ಷದ ಟೋನಿ ಅಬ್ಬಾಟ್ ಆಯ್ಕೆ

ಆಸ್ಟ್ರೇಲಿಯಾದ ಸಾರ್ವತ್ರಿಕ ಚುನಾವಣೆಯಲ್ಲಿ ಟೋನಿ ಅಬ್ಬಾಟ್ ನೇತೃತ್ವದ ಕನ್ಸರ್ವೇಟಿವ್ ಪಕ್ಷವು ಭಾರಿ ಅಂತರದಿಂದ ಜಯಶಾಲಿಯಾಗಿದೆ. ಪ್ರಧಾನಿ ಕೆವಿನ್ ರುಡ್ ನೇತೃತ್ವದ ಲೇಬರ್ ಪಕ್ಷವು ಹೀನಾಯವಾಗಿ ಸೋಲನುಭವಿಸಿದೆ. ಕನ್ಸರ್ವೇಟಿವ್ ಪಕ್ಷದ ಮೈತ್ರಿಕೂಟವು 85 ಸ್ಥಾನಗಳನ್ನು ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಗಳಿಸಿದೆ. ಲೇಬರ್ ಪಕ್ಷವು 54 ಸ್ಥಾನಗಳನ್ನು ಗಳಿಸಿದೆ. ಇದರಿಂದ ಆರು ವರ್ಷಗಳಿಂದ ಅಧಿಕಾರದಲ್ಲಿದ್ದ ಲೇಬರ್ ಪಕ್ಷವು ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಬೇಕಾಗಿದೆ.

**ಹಿನ್ನೆಲೆ:**

ತಿಂಗಳ ಹಿಂದೆ ಕೆವಿನ್ ರುಡ್ ಅವರು ಪ್ರಧಾನಿ ಸ್ಥಾನದಲ್ಲಿದ್ದ ಜೂಲಿಯಾ ಗಿಲ್ಲಾರ್ಡ್ ಅವರನ್ನು ಪದಚ್ಯುತಗೊಳಿಸಿ ಅಧಿಕಾರದ ಗದ್ದುಗೆ ಏರಿದ್ದರು. ಆದರೆ ಜನರು ಈಗ ಅವರನ್ನು ಹಾಗೂ ಅವರ ಲೇಬರ್ ಪಕ್ಷವನ್ನು ತಿರಸ್ಕರಿಸಿ ಕನ್ಸರ್ವೇಟಿವ್ ಪಕ್ಷಕ್ಕೆ ಮನ್ನಣೆ ನೀಡಿರುವುದರಿಂದ ಟೋನಿ ಅಬ್ಬಾಟ್ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ. ಚುನಾವಣೆಯಲ್ಲಿ ಹಿನ್ನಡೆಯಾದ ನಂತರ

ಮಾತನಾಡಿದ ಕೆವಿನ್ ರುಡ್, ಲೇಬರ್ ಪಕ್ಷದ ನೇತೃತ್ವವನ್ನು ಮತ್ತೆ ವಹಿಸುವುದಿಲ್ಲ, ಇದು ಬದಲಾವಣೆಗೆ ಸಕಾಲ ಎಂದು ಹೇಳಿದ್ದಾರೆ.

**ಸವಾಲುಗಳೇನು?**

ಗೆಲುವಿನ ನಂತರ ಮಾತನಾಡಿದ ಟೋನಿ ಅಬ್ಬಾಟ್, 'ಚುನಾವಣಾ ಪ್ರಚಾರದಲ್ಲಿ ವಚನ ನೀಡಿದಂತೆ ಕಾರ್ಬನ್ ತೆರಿಗೆಯನ್ನು ರದ್ದುಪಡಿಸಲಾಗುತ್ತದೆ' ಎಂದು ತಿಳಿಸಿದ್ದಾರೆ. ಹದಗೆಟ್ಟ ಆರ್ಥಿಕತೆಯನ್ನು ಸರಿಪಡಿಸಿ ವ್ಯಾಪಾರ ವಹಿವಾಟಿಗೆ ಮುಕ್ತ ಅವಕಾಶ ಕಲ್ಪಿಸಿಕೊಡಲಾಗುತ್ತದೆ ಎಂದೂ ಅವರು ಹೇಳಿದ್ದಾರೆ.

**ಜೂಲಿಯಾ ಗಿಲ್ಲಾರ್ಡ್ ನಿವೃತ್ತಿ:**

ಆಸ್ಟ್ರೇಲಿಯಾದ ಪ್ರಥಮ ಮಹಿಳಾ ಪ್ರಧಾನಿ ಆಗಿದ್ದ ಲೇಬರ್ ಪಕ್ಷದ ನಾಯಕಿ ಜೂಲಿಯಾ ಗಿಲ್ಲಾರ್ಡ್ ಅವರು ಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ರಾಜಕೀಯ ನಿವೃತ್ತಿಯನ್ನು ಘೋಷಿಸಿದರು. ತಮ್ಮ ಪಕ್ಷದವರೇ ಬಂಡೆದ್ದಿದ್ದರಿಂದ ಪ್ರಧಾನಿ ಹುದ್ದೆ ಕಳೆದುಕೊಂಡಿದ್ದ ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ತಿಳಿಸಿದ್ದರು. ಮೆಲ್ಬರ್ನ್ ಕ್ಷೇತ್ರದಲ್ಲಿ ತಮ್ಮ ಬದಲು ಸ್ಪರ್ಧಿಸಿ ಗೆದ್ದ ಜೊನ್ ರೈನ್ ಅವರನ್ನು ಅಭಿನಂದಿಸಿದ ನಂತರ ತಮ್ಮ ದೀರ್ಘ ಮೌನ ಮುರಿದು ರಾಜಕೀಯ ನಿವೃತ್ತಿ ಪ್ರಕಟಿಸಿದರು.

**ರಷ್ಯಾದಲ್ಲಿ ನಡೆದ ಜಿ-20 ಶೃಂಗಸಭೆಯ ಒಂದು ವಿಸ್ತೃತ ನೋಟ:**

ವಿಶ್ವದ ಇಪ್ಪತ್ತು ಆರ್ಥಿಕ ಸಬಲ ದೇಶಗಳು ಎರಡು ದಿನಗಳ ಜಿ-20 ಶೃಂಗಸಭೆಯ ಕೊನೆಯ ದಿನ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಸಂಘಟಿತರಾಗಿ ಬಲಪಡಿಸುವ ಅಗತ್ಯವಿರುವುದರಿಂದ ಸದಸ್ಯ ದೇಶಗಳು ಈ ನಿಟ್ಟಿನಲ್ಲಿ ಸಕ್ರಿಯವಾಗಿ ಕೈಜೋಡಿಸುವ ಸಂಯುಕ್ತ ನಿರ್ಣಯದೊಂದಿಗೆ ಸಂಕಲ್ಪ ಸ್ವೀಕರಿಸಿದವು. ರಷ್ಯಾದ ಸಾಂಸ್ಕೃತಿಕ ನಗರಿಯಲ್ಲಿ ಕೊನೆಗೊಂಡ ಈ ಐತಿಹಾಸಿಕ ಶೃಂಗಸಭೆಯಲ್ಲಿ ಕೈಗೊಂಡ 26 ಪುಟಗಳ ಘೋಷಣೆಗಳಿಗೆ ಇಪ್ಪತ್ತು ದೇಶಗಳ ನಾಯಕರು ಎದ್ದುನಿಂತು ಸಹಮತ ವ್ಯಕ್ತಪಡಿಸಿದರು.

**ನಿರ್ಣಯವೇನು?**

"ಎಲ್ಲ ದೇಶಗಳು ಈಗಾಗಲೇ ಕೈಗೊಂಡಿರುವ ಹಣಕಾಸು ಸುಧಾರಣಾ ಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗಬೇಕು ಹಾಗೂ ಎಲ್ಲ ರಂಗಗಳಲ್ಲಿ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಬೇಕು. ಇವು ಸದ್ಯದ ತುರ್ತು ಅಗತ್ಯವಾಗಬೇಕು. ಇದರಿಂದ ಸದೃಢ, ಸುಸ್ಥಿರ ಹಾಗೂ ಸಂತುಲಿತ ಬೆಳವಣಿಗೆ ಹೊಂದಲು ಸಾಧ್ಯ. ಈ ದಿಸೆಯಲ್ಲಿ ಎಲ್ಲ ಸದಸ್ಯ ದೇಶಗಳು ಕಾರ್ಯಪ್ರವೃತ್ತರಾಗಬೇಕೆಂದು ಘೋಷಣೆಯನ್ನು ಸ್ವೀಕರಿಸಲಾಯಿತು." ಆರ್ಥಿಕವಾಗಿ ಪ್ರಬಲ ರಾಷ್ಟ್ರಗಳಾಗಿರುವ ನಾವು ತೆಗೆದುಕೊಳ್ಳುವ ಕ್ರಮಗಳಿಂದ ಇಡೀ ವಿಶ್ವದ ಮೇಲೆ ಅದರ ಪರಿಣಾಮವುಂಟಾಗುವುದರಿಂದ ಆರ್ಥಿಕ ಸುಧಾರಣೆ ಮತ್ತು ಬೆಳವಣಿಗೆಗೆ ಪ್ರಾಮುಖ್ಯ ನೀಡಬೇಕೆಂಬ ನಿರ್ಣಯ ಸ್ವೀಕರಿಸಿದ ಜಿ-20 ನಾಯಕರು, ಪರಸ್ಪರ ಸಹಕಾರ, ಕೊಡು ಕೊಳ್ಳುವಿಕೆ, ನೇರ ಸಹಭಾಗಿತ್ವದಿಂದ ಇದನ್ನು ಆಚರಣೆಗೆ ತರಲು ನಿರ್ಧರಿಸಿದರು.

**ಭಾರತದ ಕಳವಳ ಒಪ್ಪಿಕೊಂಡ ಜಿ20:**

ಹಣಕಾಸು ಹರಿವಿನ ಏರಿಳಿತದಲ್ಲಿನ ಹೆಚ್ಚಳ, ವಿನಿಮಯ ದರಗಳ ಅಡ್ಡಾದಿಡ್ಡಿ ಚಲನೆ ಉದಯೋನ್ಮುಖ ಮಾರುಕಟ್ಟೆಯ ಆರ್ಥಿಕ ಸ್ಥಿರತೆ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಭಾರತದ ಕಳವಳವನ್ನು ಜಿ20 ಒಪ್ಪಿಕೊಂಡಿದೆ. ಈ ಸವಾಲುಗಳನ್ನು ಎದುರಿಸಲು ದೃಢ ನೀತಿಯ ಅಗತ್ಯವನ್ನು ಸೇಂಟ್‌ಪೀಟರ್ಸ್‌ಬರ್ಗ್ ಘೋಷಣೆ ಒತ್ತಿ ಹೇಳಿದೆ. ಪ್ರಧಾನಿ ಅಭಿಪ್ರಾಯಕ್ಕೆ ಬೆಂಬಲ 2008ರ ಆರ್ಥಿಕ ಹಿನ್ನಡೆಗೆ ಪ್ರತಿಯಾಗಿ ಕೆಲವು ದೇಶಗಳು ತೆಗೆದುಕೊಂಡಿದ್ದ ಹಣಕಾಸು ಉತ್ತೇಜನಾ ನೀತಿಗಳನ್ನು ಹಂತಹಂತವಾಗಿ ಹಿಂತೆಗೆದುಕೊಳ್ಳುವುದು ಅಗತ್ಯ ಎಂದು ಪ್ರಧಾನಿ ಸಿಂಗ್ ಹೇಳಿದ್ದರು. ಈ ಅಭಿಪ್ರಾಯಕ್ಕೆ ಶೃಂಗದಲ್ಲೂ ಬೆಂಬಲ ವ್ಯಕ್ತವಾಗಿದೆ.

**ಮುಖ್ಯಾಂಶಗಳು:**

- ವಿಶ್ವ ಆರ್ಥಿಕತೆಯನ್ನು ಚೇತರಿಕೆಯ ಹಾದಿಗೆ ತರುವ ಹಾಗೂ ಹಣಕಾಸು ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಜಿ20 ನಡುವೆ ಆರಂಭವಾದ ಸಹಭಾಗಿತ್ವದ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಆಧುನಿಕ ಇತಿಹಾಸ ಎದುರಿಸುತ್ತಿರುವ ಅತಿದೊಡ್ಡ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ಜಂಟಿ ಕಾರ್ಯಯೋಜನೆ ಮೇಲೆ ಮತ್ತಷ್ಟು ಗಮನ ಹರಿಸುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ವಿಶ್ವ ಆರ್ಥಿಕ ಚೇತರಿಕೆ, ಉನ್ನತಮಟ್ಟದ ಬೆಳವಣಿಗೆ ಮತ್ತು ಉತ್ತಮ ಉದ್ಯೋಗಗಳು ನಮ್ಮ ತುರ್ತು ಅಗತ್ಯವಾಗಿದೆ. ಇದರ ಜತೆಗೆ, ಇತರೆ ದೇಶಗಳಿಗೆ ಹಾನಿಯುಂಟು ಮಾಡುವ ತಪ್ಪು ನೀತಿಗಳನ್ನು ದೂರವಿಟ್ಟು ದೀರ್ಘಾವಧಿಯ ಬೆಳವಣಿಗೆಯನ್ನು ಬಲಪಡಿಸಬೇಕಿದೆ ಎಂದು ಸೇಂಟ್‌ಪೀಟರ್ಸ್‌ಬರ್ಗ್ ಘೋಷಣೆ ಹೇಳಿದೆ.
- ಭ್ರಷ್ಟಾಚಾರ ನಿವಾರಣೆ ನಿಟ್ಟಿನಲ್ಲಿ ಜಿ20 ಶೃಂಗವು ಮಾಹಿತಿ ವಿನಿಮಯ ಮತ್ತು ಅಂತಾರಾಷ್ಟ್ರೀಯ ಸಹಕಾರಕ್ಕೆ ಮನವಿ ಮಾಡಿದೆ. ಸುಸ್ಥಿರ ಆರ್ಥಿಕ ಬೆಳವಣಿಗೆ ಮತ್ತು ಬಡತನ ನಿರ್ಮೂಲನೆ ಮೇಲೆ ಭ್ರಷ್ಟಾಚಾರ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಒಪ್ಪಿಕೊಂಡಿರುವ ಶೃಂಗ ಭ್ರಷ್ಟಾಚಾರವು ಆರ್ಥಿಕ ಸ್ಥಿರತೆ ಮೇಲೂ ಪರಿಣಾಮ ಬೀರುತ್ತದೆ ಎಂದಿದೆ. ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕಾಗಿ ಜಿ20 ದೇಶಗಳ ನಡುವೆ ಮತ್ತಷ್ಟು ಸಹಭಾಗಿತ್ವಕ್ಕಾಗಿ ನೀತಿನಿಯಮಗಳನ್ನು ಅಭಿವೃದ್ಧಿಪಡಿಸುವ ಮತ್ತು ಅವುಗಳನ್ನು ಬಲಪಡಿಸುವ ಕಾರ್ಯವನ್ನು ಮುಂದುವರಿಸಬೇಕು. ಈ ನಿಟ್ಟಿನಲ್ಲಿ ಜಿ20 ದೇಶಗಳ ಜಾಲವನ್ನೂ ಸ್ಥಾಪಿಸುವ, ಅಂತಾರಾಷ್ಟ್ರೀಯ ಸಹಭಾಗಿತ್ವಕ್ಕಾಗಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳು ಪರಸ್ಪರ ಕಾನೂನು ಸಹಕಾರಕ್ಕೂ ಒಪ್ಪಿಗೆ ನೀಡುವುದಾಗಿ ಘೋಷಿಸಿವೆ.
- ತೆರಿಗೆ ಕಳ್ಳತನಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ಮನಮೋಹನ್ ಸಿಂಗ್ ಸೇರಿ ಜಿ 20 ದೇಶದ ನಾಯಕರು ಶಪಥ ಮಾಡಿದ್ದಾರೆ. ತೆರಿಗೆ ಕಳ್ಳತನವನ್ನು ನಿಯಂತ್ರಿಸಲು ಮತ್ತು ಪೈಪೋಟಿಯ ತೆರಿಗೆ ನೀತಿಗಳಿಗೆ ಸಂಬಂಧಿಸಿ ನಿಯಮಗಳ ಬದಲಾವಣೆಗೆ ಒಪ್ಪಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಎಲ್ಲಿ ಲಾಭಗಳಿಸುತ್ತವೆಯೋ ಅಲ್ಲೇ ತೆರಿಗೆ ಪಾವತಿಸುವಂತಾಗಬೇಕು ಎಂದು ಘೋಷಣೆ ಹೇಳಿದೆ.
- ಚಲನಶೀಲ ಆದಾಯದ ಮೇಲೆ ತೆರಿಗೆ ವಿಧಿಸುವುದು ಪ್ರಮುಖ ಸವಾಲಾಗಿದೆ ಎನ್ನುವುದನ್ನು ಒಪ್ಪಿಕೊಂಡಿರುವ ಜಿ20 ದೇಶಗಳು, ತಮ್ಮ ದೇಶದ ಕಾನೂನುಗಳು ಯಾವ ರೀತಿ ಬಿಇಪಿಎಸ್(ಬೇಸ್ ಎರೋಷನ್ ಆಯಂಡ್ ಪ್ರಾಫಿಟ್ ಶಿಫ್ಟಿಂಗ್)ಗೆ ಅವಕಾಶ ಮಾಡಿಕೊಡುತ್ತವೆ ಎನ್ನುವುದನ್ನು ಪರಿಶೀಲಿಸಬೇಕಿದೆ. ಅಲ್ಲದೆ, ಅಂತಾರಾಷ್ಟ್ರೀಯ ಮತ್ತು ದೇಶೀಯ ಕಾನೂನುಗಳು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ತೆರಿಗೆ ತಪ್ಪಿಸಲು ಅವಕಾಶ ನೀಡದಂತೆ ನೋಡಿಕೊಳ್ಳಬೇಕಿದೆ ಎಂದಿವೆ.

**ಇತರೆ ಪ್ರಮುಖ ಘೋಷಣೆಗಳು:**

- ವಿಶ್ವ ಆರ್ಥಿಕತೆಯನ್ನು ಬಲಪಡಿಸಲು ನಾವು ಒಗ್ಗಟ್ಟಿನ ಕ್ರಮ ಕೈಗೊಳ್ಳಲು ಬದ್ಧರಾಗಿದ್ದೇವೆ. ಬೆಳವಣಿಗೆಯನ್ನು ಬಲಪಡಿಸುವುದು ಹಾಗೂ ಉದ್ಯೋಗ ಸೃಷ್ಟಿ ನಮ್ಮ ಪ್ರಮುಖ ಆದ್ಯತೆಯಾಗಿದೆ.
- ಹೇರಳ ಉದ್ಯೋಗಾವಕಾಶದ, ಸುಸ್ಥಿರ, ದೃಢ ಮತ್ತು ಸಮತೋಲಿತ ಬೆಳವಣಿಗೆಯ ಹಾದಿಗೆ ಮರಳುವ ನಿಟ್ಟಿನಲ್ಲಿ ನಾವು ಖಚಿತ ತೀರ್ಮಾನ ತೆಗೆದುಕೊಳ್ಳಲು ಬದ್ಧವಾಗಿದ್ದೇವೆ. ಮುಕ್ತ ಮತ್ತು ನಿಯಮಾಧಾರಿತ ವಿಶ್ವ ಆರ್ಥಿಕ ವ್ಯವಸ್ಥೆಯನ್ನು ಮರುಸ್ಥಾಪಿಸುವ ಜವಾಬ್ದಾರಿಯನ್ನು ಹಂಚಿಕೊಳ್ಳಲಿದ್ದೇವೆ.
- ವಿಶ್ವ ಆರ್ಥಿಕ ಸವಾಲುಗಳನ್ನು ಎದುರಿಸಲು ನಾವು ಸಹಭಾಗಿತ್ವದಲ್ಲಿ ಕೆಲಸ ಮಾಡಲು ಬದ್ಧವಾಗಿದ್ದೇವೆ. ಹಣಕಾಸು ಸುಸ್ಥಿರತೆಯ ಭರವಸೆಯೊಂದಿಗೆ ದೃಢ ಆರ್ಥಿಕ ಚೇತರಿಕೆಗೆ ಸೇಂಟ್ ಪೀಟರ್ಸ್‌ಬರ್ಗ್ ಕಾರ್ಯ ಯೋಜನೆಗೆ ಒಪ್ಪಿದ್ದೇವೆ. ಇದು ಬಲಿಷ್ಠ, ಸುಸ್ಥಿರ ಮತ್ತು ಸಮತೋಲಿತ ಬೆಳವಣಿಗೆ ಸಾಧಿಸಲು ನೆರವು ನೀಡುತ್ತದೆ.
- ಸಿರಿಯಾ ವಿವಾದ ಒಮ್ಮತ ವಿಫಲ ರಾಸಾಯನಿಕ ಅಸ್ತ್ರಗಳ ದಾಳಿಯಿಂದ ತನ್ನ ಬಂಡುಕೋರರ ದಮನಕ್ಕೆ ಮುಂದಾಗಿ ವಿಶ್ವದೆಲ್ಲೆಡೆ ತಲ್ಲಣ ಮೂಡಿಸಿದ ಸಿರಿಯಾ ವಿರುದ್ಧ ಮಿಲಿಟರಿ ದಾಳಿ ಮಾಡಬೇಕೇ, ಬೇಡವೇ ಎಂಬ ಬಗ್ಗೆ ಜಾಗತಿಕ ನಾಯಕರು ಒಮ್ಮತದ ನಿರ್ಧಾರಕ್ಕೆ ಬರಲು ವಿಫಲರಾದರು

**ವಿಶ್ವಸಂಸ್ಥೆಯ ಅಣ್ವಸ್ತ್ರಗಳ ಬಳಕೆ ಮೇಲಿನ ನಿರ್ಬಂಧಕ್ಕೆ ಒಳಗಾದ ಸಿರಿಯಾ**

ರಾಸಾಯನಿಕ ಅಸ್ತ್ರಗಳ ಉತ್ಪಾದನೆ ಮತ್ತು ಬಳಕೆ ಮೇಲಿನ ನಿರ್ಬಂಧ ಒಡಂಬಡಿಕೆಗೆ ಸೇರ್ಪಡೆಗೊಳ್ಳ ಬಯಸಿ ಸಿರಿಯಾ ಸಲ್ಲಿಸಿದ್ದ ಮನವಿಯನ್ನು ಸ್ವೀಕರಿಸಿರುವ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಬಾನ್ ಕಿ-ಮೂನ್, ಸಿರಿಯಾದಲ್ಲಿನ ರಾಸಾಯನಿಕ ಅಸ್ತ್ರಗಳನ್ನು ನಾಶಪಡಿಸುವ ಸಂಬಂಧ ಅಮೆರಿಕ ಮತ್ತು ರಷ್ಯಾ ನಡುವೆ ನಡೆದಿರುವ ಒಪ್ಪಂದಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದ್ದಾರೆ.

**ರಾಸಾಯನಿಕ ಅಣ್ವಸ್ತ್ರ ನಿರ್ಬಧ:**

ರಾಸಾಯನಿಕ ಅಸ್ತ್ರಗಳ ಕುರಿತಾಗಿನ ಒಡಂಬಡಿಕೆ ವ್ಯಾಪ್ತಿಗೆ ಸೇರ್ಪಡೆಗೊಳ್ಳಬಯಸಿ ಸಿರಿಯಾ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿತ್ತು. ಆದರೆ ವಿಶ್ವಸಂಸ್ಥೆಯು ಸಿರಿಯಾದಿಂದ ಹೆಚ್ಚಿನ ವಿವರಗಳನ್ನು ಕೋರಿತ್ತು. ರಾಸಾಯನಿಕ ಅಸ್ತ್ರಗಳ ಕುರಿತಾಗಿನ ಒಡಂಬಡಿಕೆಯ ಪ್ರಕಾರ ರಾಸಾಯನಿಕ ಅಸ್ತ್ರಗಳ ಉತ್ಪಾದನೆ, ಬಳಕೆ ಮತ್ತು ಸಂಗ್ರಹದ ಮೇಲೆ ಸಂಪೂರ್ಣ ನಿಷೇಧ ವಿಧಿಸಲಾಗಿದೆಯಲ್ಲದೆ ಈ ಒಡಂಬಡಿಕೆಯ ಸದಸ್ಯರಾಗ ಬಯಸುವ ರಾಷ್ಟ್ರಗಳು ತಮ್ಮಲ್ಲಿನ ರಾಸಾಯನಿಕ ಅಸ್ತ್ರಗಳನ್ನು ಸಂಪೂರ್ಣವಾಗಿ ನಾಶ ಮಾಡಬೇಕಿವೆ. ಭವಿಷ್ಯದಲ್ಲಿ ಸಿರಿಯಾ ರಾಸಾಯನಿಕ ಅಸ್ತ್ರಗಳನ್ನು ಬಳಸದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವ ಜತೆಯಲ್ಲಿ ಸಿರಿಯಾ ಬಿಕ್ಕಟ್ಟಿಗೆ ರಾಜಕೀಯ ಪರಿಹಾರವೊಂದನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರಿಯಬೇಕಿದೆ ಎಂದು ಬಾನ್ ಕಿ-ಮೂನ್ ಅಭಿಪ್ರಾಯಪಟ್ಟಿದ್ದಾರೆ.

## ವಿಶ್ವದ ಅತ್ಯಂತ ಎತ್ತರ ವಿಮಾನ ನಿಲ್ದಾಣದಿಂದ ವಿಮಾನ ಹಾರಾಟ ನಡೆಸಿದ ಚೀನಾ

ಟಿಬೆಟ್‌ನ ಲ್ಹಾಸಾದಲ್ಲಿ ರೈಲು ಸೇವೆ ಆರಂಭಿಸುವ ಮೂಲಕ ವಿಶ್ವದ ಅತ್ಯಂತ ಎತ್ತರದ ಪ್ರದೇಶದಲ್ಲಿ ರೈಲು ಓಡಿಸಿದ ಕೀರ್ತಿಗೆ ಪಾತ್ರವಾಗಿದ್ದ ಚೀನಾ, ಇದೀಗ ವಿಶ್ವದ ಅತ್ಯಂತ ಎತ್ತರದ ಪ್ರದೇಶದಲ್ಲಿ ನಾಗರಿಕ ವಿಮಾನ ಸೇವೆ ಆರಂಭಿಸಿದ ಹೆಗ್ಗಳಿಕೆಗೂ ಪಾತ್ರವಾಗಿದೆ.

**ವಿಶೇಷತೆಗಳು:**

- ಟಿಬೆಟ್‌ನ ಗಾರ್ಜೆ ಎಂಬಲ್ಲಿ ನಿರ್ಮಿಸಲಾಗಿರುವ ಡಾವ್‌ಚೆಂಗ್ ಯಾಡಿಂಗ್ ವಿಮಾನ ನಿಲ್ದಾಣದಿಂದ ಮೊದಲ ವಿಮಾನ ತನ್ನ ಹಾರಾಟ ನಡೆಸಿತು.
- ಟಿಬೆಟ್ ವಲಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಮತ್ತು ಟಿಬೆಟ್ ಗಡಿಭಾಗಗಳಲ್ಲಿ ತನ್ನ ಸಾರ್ವಭೌಮತ್ವವನ್ನು ಸಾಬೀತುಪಡಿಸುವ ಸಲುವಾಗಿ ಚೀನಾ ಈ ವಿಮಾನ ನಿಲ್ದಾಣವನ್ನು ನಿರ್ಮಿಸಿದೆ.
- ಸುಮಾರು 23 ಸಾವಿರ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಈ ನಿಲ್ದಾಣ, ಸಮುದ್ರ ಮಟ್ಟದಿಂದ 4411 ಮೀಟರ್‌ಗಳಷ್ಟು (14472 ಅಡಿ)ಎತ್ತರದಲ್ಲಿದೆ.
- ವಿಮಾನ ನಿಲ್ದಾಣ ನಿರ್ಮಾಣವಾಗಿರುವ ಗಾರ್ಜೆಯಿಂದ ಸಿಚುವಾನ್ ಪ್ರಾಂತ್ಯದ ಚೆಂಗೂxಗೆ ಬಸ್ ಮೂಲಕ ತಲುಪಲು 2 ದಿನ ಬೇಕಾಗಿದ್ದರೆ, ವಿಮಾನದಲ್ಲಿ ಕೇವಲ 65 ನಿಮಿಷಗಳಲ್ಲಿ ತಲುಪಬಹುದಾಗಿದೆ.
- ಅಲ್ಲದೆ ಈ ವಿಮಾನ ನಿಲ್ದಾಣದ ರನ್‌ವೇ 13780 ಅಡಿ ಉದ್ದವಿದ್ದು, ಇದು ಅಮೆರಿಕದ ಜಾನ್ ಎಫ್.ಕೆನಡಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹೊರತುಪಡಿಸಿದರೆ ವಿಶ್ವದಲ್ಲೇ ಅತ್ಯಂತ ಉದ್ದನೆಯ ರನ್‌ವೇ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಜಾನ್ ಎಫ್. ಕೆನಡಿ ರನ್‌ವೇಗಿಂತ ಇದು ಕೇವಲ 794 ಅಡಿ ಚಿಕ್ಕದಿದೆ.
- ಈ ಪ್ರದೇಶ ಅತ್ಯಂತ ಎತ್ತರದಲ್ಲಿ ಇರುವುದರಿಂದ ಇಲ್ಲಿ ಪ್ರಯಾಣ ಮಾಡುವ ವೇಳೆ ಪ್ರಯಾಣಿಕರಿಗೆ ಉಸಿರಾಟದ ಸಣ್ಣಪುಟ್ಟ ತೊಂದರೆ ಕಾಣಿಸುವ ಸಾಧ್ಯತೆ ಇದ್ದೇ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಕಾರಣಕ್ಕಾಗಿಯೇ ವಿಮಾನಗಳಲ್ಲಿ ಇರುವಂತೆ ಲ್ಹಾಸಾ ರೈಲಿನಲ್ಲಿ ಪ್ರತಿ ಸೀಟಿನ ಬಳಿಯೂ ಕೃತಕ ಆಮ್ಲಜನಕ ಪೂರೈಕೆಗಾಗಿ ವ್ಯವಸ್ಥೆ ಮಾಡಲಾಗಿದೆ.
- ಎರಡು ದಿನದ ಪ್ರಯಾಣ ಕೇವಲ 1 ಗಂಟೆಗೆ ಇಳಿಕೆ ಗಾರ್ಜೆಯಿಂದ ಸಿಚುವಾನ್ ಪ್ರಾಂತ್ಯದ ಚೆಂಗೋಧಿಗೆ ಬಸ್ ಮೂಲಕ ತಲುಪಲು 2 ದಿನ ಬೇಕಾಗಿತ್ತು. ಈಗ ವಿಮಾನದಲ್ಲಿ ಕೇವಲ 1ಗಂಟೆಯಲ್ಲಿ ತಲುಪಬಹುದಾಗಿದೆ.

## ಎರಡು ವರ್ಷಗಳ ನಂತರ ಮೇಲೆದ್ದ ಕೋಸ್ಟಾ ಕಾನ್ ಕಾರ್ಡಿಯಾ ಹಡಗು

ಎರಡು ವರ್ಷಗಳ ಹಿಂದೆ ಇಟಲಿಯ ಗಿಗ್ಲಿಯೋ ಬಂದರು ಬಳಿ ಬಂಡೆಗೆ ಡಿಕ್ಕಿಹೊಡೆದು ಮುಳುಗಿದ್ದ ಕೋಸ್ಟಾ ಕಾನ್‌ಕಾರ್ಡಿಯಾ ಹಡಗನ್ನು ಮೇಲೆತ್ತುವಲ್ಲಿ ಇಟಲಿಯ ರಕ್ಷಣಾ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಸತತ 19 ತಾಸುಗಳ ಪ್ರಯತ್ನದ ಬಳಿಕ

ಮಂಗಳವಾರ ಹಡಗನ್ನು ಮೇಲಕ್ಕೆ ಎತ್ತಲಾಗಿದೆ. ಹಡಗು 114,000 ಟನ್ ತೂಕವಿದ್ದು ಭಾರೀ ಗಾತ್ರದ ಕ್ರೇನ್ ಮೂಲಕ ಮೇಲೆತ್ತಲಾಗಿದ್ದು, ಇದು ಈವರೆಗೆ ನಡೆಸಿದ ಅತ್ಯಂತ ದುಬಾರಿ ಮತ್ತು ಅತಿದೊಡ್ಡ ಹಡಗಿನ ರಕ್ಷಣಾ ಕಾರ್ಯಾಚರಣೆ ಎನಿಸಿಕೊಂಡಿದೆ.

**ಮುಳುಗಿದ್ದು ಹೇಗೆ?**

- ಜ.13, 2013ರಂದು 4,200 ಮಂದಿ ಪ್ರಯಾಣಿಕರಿದ್ದ ಕೋಸ್ಟಾ ಕಾನ್‌ಕಾರ್ಡಿಯಾ ಹಡಗು ಇಟಲಿಯ ಗಿಗ್ಲಿಯೋ ಸಮುದ್ರ ತೀರದಲ್ಲಿ ಬಂಡೆಗೆ ಅಪ್ಪಳಿಸಿದ್ದರಿಂದ ನೀರಲ್ಲಿ ಮುಳುಗಿ ಹೋಗಿತ್ತು. ಈ ಘಟನೆಯಲ್ಲಿ 32 ಮಂದಿ ಸಾವನ್ನಪ್ಪಿದ್ದರು.
- ಇದುವರೆಗಿನ ಅತ್ಯಂತ ದುಬಾರಿ ಮತ್ತು ಅತಿದೊಡ್ಡ ಹಡಗಿನ ರಕ್ಷಣಾ ಕಾರ್ಯಾಚರಣೆ ಎಂಬ ಹೆಗ್ಗಳಿಗೆಕೆ ಪಾತ್ರವಾಲಿದೆ
- ಇಟಲಿ ಹಡಗು ರಕ್ಷಣಾ ಸಿಬ್ಬಂದಿಯಿಂದ ಸತತ 19 ತಾಸುಗಳ ಪ್ರಯತ್ನದ ಫಲವಾಗಿ ಯಶಸ್ವಿಯಾಗಿ ಹಡಗನ್ನು ಮೇಲೆ ತರಲಾಯಿತು
- ಹಡಗಿನ ಅಡಿಯಲ್ಲಿ ಸಿಲುಕಿರಬಹುದಾದ ದೇಹಗಳಿಗೆ ಹುಡುಕಾಟ ಆರಂಭಿಸಿದ್ದಾರೆ
- ಹಡಗನ್ನು ಶೇ.65 ಡಿಗ್ರಿ ನೇರಗೊಳಿಸವಲ್ಲಿ ಇಂಜಿನೀಯರ್‌ಗಳು ಸಫಲರರಾಗಿದ್ದಾರೆ.
- ಹಡಗಿನ ವಿಶೇಷತೆ: - 114,000 ಟನ್ - ಹಡಗಿನ ತೂಕ - 290 ಮೀಟರ್ - ಹಡಗಿನ ಉದ್ದ - 4,200 - ಹಡಗಿನಲ್ಲಿದ್ದ ಪ್ರಯಾಣಿಕರ ಸಂಖ್ಯೆ

## <u>ವಿಶ್ವದ ಅತಿ ದೊಡ್ಡ ಚಿತ್ರನಗರಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಿರುವ ಚೀನಾ</u>

ಹಾಲಿವುಡ್‌ಗೆ ವಿಶ್ವ ಸಿನೆಮಾ ರಂಗದ ಕಾಶಿ ಎಂಬ ಮನ್ನಣೆಯಿದೆ. ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿರುವ ಈ ಬೃಹತ್ ಸ್ಟುಡಿಯೋಕ್ಕೆ ಹಣದ ಥೈಲಿ ಹಿಡಿದು ಒಳಹೊಕ್ಕರೆ ಅಲ್ಲಿ ಹೊರಬರುವಾಗ ಹೊಸ ಚಿತ್ರದ ಪ್ರಿಂಟ್ ಹಿಡಿದುಕೊಂಡು ಬರಬಹುದು. ಚಿತ್ರರಂಗದ ಎ ಟು ಝಡ್ ಸೌಲಭ್ಯ ಇಲ್ಲಿ ಲಭ್ಯವಿದೆ. ಆದರೆ ಈ ಹಾಲಿವುಡ್‌ಗೆ 'ಚೀನಾವುಡ್' ಮೂಲಕ ಸಡ್ಡು ಹೊಡೆಯಲು ಇದೀಗ ಚೀನಾ ಮುಂದಾಗಿದೆ. ಚೀನಾದ ಉದ್ಯಮಿಯೊಬ್ಬರು ವಿಶ್ವದಲ್ಲೇ ಅತ್ಯಾಧುನಿಕ ಮತ್ತು ಅತಿದೊಡ್ಡ ಚಿತ್ರನಗರಿ ನಿರ್ಮಾಣಕ್ಕೆ ಮುಂದಾಗಿದ್ದು, 'ಚೀನಾವುಡ್' ಮುಂದಿನ ದಿನಗಳಲ್ಲಿ ಹಾಲಿವುಡ್‌ಗೆ ಭಾರೀ ಸವಾಲೆಸೆಯಲಿದೆ ಎಂದು ಊಹಿಸಲಾಗಿದೆ.

**'ಮೂವಿ ಮೆಟ್ರೋಪೊಲೀಸ್' ವಿಶೇಷತೆ:**

- ಚೀನಾದ ಕ್ವಿಂಗ್‌ಡಾವ್‌ನಲ್ಲಿ ತಲೆ ಎತ್ತಲಿರುವ ಈ ವಿಶ್ವದ ಅತಿದೊಡ್ಡ ಸಿನಿಮಾ ನಗರಿಗೆ ಶಂಕುಸ್ಥಾಪನೆ ನೆರವೇರಿದ್ದು, ಇದು 2017ರಲ್ಲಿ ಬಳಕೆಗೆ ಲಭ್ಯವಾಗಲಿದೆ ಎಂದು ಅಂದಾಜಿಸಲಾಗಿದೆ.
- ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಹಾಲಿವುಡ್‌ನ ಖ್ಯಾತನಾಮರಾದ ನಿಕೋಲ್ ಕಿಡ್‌ಮನ್, ಲಿಯೋನಾಡೋ ಡಿಕ್ಯಾಪ್ರಿಯೋ, ಜಾನ್ ಟ್ರವ್‌ಲೋಟಾ, ಜೆಟ್ ಲೀ, ಆಸ್ಕರ್ ಪ್ರಶಸ್ತಿ ವಿತರಿಸುವ ಮೋಷನ್ ಪಿಕ್ಚರ್ನ ಚೆರಿಲ್ ಐಸಾಕ್ಸ್ ಸೇರಿದಂತೆ ವಿಶ್ವ ಚಿತ್ರರಂಗದ ಹಲವು ಗಣ್ಯರು ಭಾಗಿಯಾಗಿದ್ದು ವಿಶೇಷ.

- ಹಾಲಿವುಡ್‌ಗೆ 'ಚೀನಾವುಡ್' ಸವಾಲ್: ಚೀನಾದ ನಂ. 1 ಶ್ರೀಮಂತ ಎಂಬ ಹೆಗ್ಗಳಿಕೆ ಹೊಂದಿರುವ 'ಡಲಿಯಾನ್ ವಾಂಡಾ ಗ್ರೂಪ್'ನ 'ವಾಂಗ್ ಜಿಯಾನ್‌ಲಿನ್' ವಿಶ್ವದಲ್ಲೇ ದೊಡ್ಡ ಸಿನೆಮಾ ನಗರಿ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಸುಮಾರು ೨೦೦ ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣಗೊಳ್ಳಲಿರುವ 'ಮೂವಿ ಮೆಟ್ರೋಪೊಲೀಸ್' ಹೆಸರಿನ ಚಿತ್ರ ನಗರಿಯನ್ನು ಸುಮಾರು ೩೦೦೦೦ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ.
- ಈ ಚಿತ್ರ ನಗರಿಯಲ್ಲಿ ಬಾಲಿವುಡ್‌ನಲ್ಲಿ ಇರುವ ಸ್ಟುಡಿಯೋಕ್ಕಿಂತಲೂ ಭಾರೀ ದೊಡ್ಡದಾದ, ವಿಶ್ವದಲ್ಲೇ ಅತ್ಯಂತ ಬೃಹತ್ ಪ್ರಮಾಣದ ಸ್ಟುಡಿಯೋ ನಿರ್ಮಾಣಗೊಳ್ಳಲಿದೆ. ಈ ಬೃಹತ್ ಸ್ಟುಡಿಯೋ 10,000 ಚದರ ಮೀಟರ್‌ಗಳಷ್ಟು ವಿಸ್ತೀರ್ಣ ಹೊಂದಿರಲಿದೆ. ಈ ಬೃಹತ್ ಸ್ಟುಡಿಯೋ ಸೇರಿದಂತೆ ಚಿತ್ರ ನಗರಿಯಲ್ಲಿ ಒಟ್ಟು 20 ಸ್ಟುಡಿಯೋಗಳು ಇರಲಿವೆ.
- ವಾರ್ಷಿಕ ಇಲ್ಲಿ ಕನಿಷ್ಠ 30 ವಿದೇಶಿ ಮತ್ತು ಸ್ಥಳೀಯ 100 ಚಿತ್ರ ನಿರ್ಮಾಣಕ್ಕೆ ಅವಕಾಶ ಇರಲಿದೆ. ಇಲ್ಲಿ ವರ್ಷಕ್ಕೊಂದು ಚಿತ್ರ ನಿರ್ಮಾಣ ಮಾಡಲು ಈಗಾಗಲೇ 30 ಸಂಸ್ಥೆಗಳ ಜೊತೆ ಒಪ್ಪಂದವನ್ನೂ ಮಾಡಿಕೊಳ್ಳಲಾಗಿದೆ.

**ಏನೆಲ್ಲಾ ಇರಲಿದೆ ?**

- ಈ ಚಿತ್ರನಗರಿಯಲ್ಲಿ ಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಎಲ್ಲಾ ಅತ್ಯಾಧುನಿಕ ಸೌಕರ್ಯಗಳ ಜೊತೆಯಲ್ಲಿ ಮೂವಿ ಥಿಯೇಟರ್, ವ್ಯಾಕ್ಸ್ ಮ್ಯೂಸಿಯಂ, ಪ್ರದರ್ಶನ ಹಾಲ್, ಯಾಚ್ ಕ್ಲಬ್, ಹೋಟೆಲ್ ಸೇರಿದಂತೆ ಪ್ರವಾಸಿಗರು ಮತ್ತು ಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಎಲ್ಲಾ ಸವಲತ್ತುಗಳೂ ಒಂದೇ ಕಡೆ ಸಿಗಲಿವೆ.
- ಆರ್ಥಿಕವಾಗಿ ಅಮೆರಿಕಕ್ಕೆ ನಿಧಾನವಾಗಿ ಸಡ್ಡು ಹೊಡೆಯುತ್ತಿರುವ ಚೀನಾ, ಈ ಚಿತ್ರನಗರಿ ಮೂಲಕ ಸಾಂಸ್ಕೃತಿಕ ಲೋಕದಲ್ಲೂ ಅಮೆರಿಕಕ್ಕೆ ಸವಾಲು ಎಸೆಯಲಿದೆ ಎನ್ನಲಾಗಿದೆ.
- ವಿಶ್ವದ ಅತಿದೊಡ್ಡ ಸ್ಟುಡಿಯೋ ಸೇರಿದಂತೆ ಒಟ್ಟು 20 ಸ್ಟುಡಿಯೋ - ವ್ಯಾಕ್ಸ್ ಮ್ಯೂಸಿಯಂ, ಪ್ರದರ್ಶನ ಹಾಲ್, ಹೋಟೆಲ್, ಮೂವಿ ಥಿಯೇಟರ್ - ಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಎ ಟು ಝಡ್ ಎಲ್ಲಾ ಸೌಕರ್ಯಗಳು

**<u>ಹಿರಿಯರು ಜೀವಿಸಲು ಸ್ವೀಡನ್ ಅತ್ಯುತ್ತಮ ತಾಣ: ಸಮೀಕ್ಷೆ</u>**

ವಿಶ್ವ ಸಂಸ್ಥೆ ಪ್ರೇರೇಪಿತ ಸಮೀಕ್ಷೆಯ ಪ್ರಕಾರ ಸ್ವೀಡನ್ ದೇಶ ಹಿರಿಯರು ಜೀವಿಸಲು ಅತ್ಯುತ್ತಮ ತಾಣ ಎಂದು ಹೇಳಲಾಗಿದೆ. "ದಿ ಗ್ಲೋಬಲ್ ಏಜ್ ವಾಚ್ ಇಂಡೆಕ್ಸ್ (The Global Agewatch Index)" ಅಡಿಯಲ್ಲಿ ಕೈಗೊಂಡಿರುವ ಸಮೀಕ್ಷೆಯಲ್ಲಿ ಸ್ವೀಡನ್ ಪ್ರಥಮ ಸ್ಥಾನದಲ್ಲಿದ್ದರೆ, ಆಫ್ಘಾನಿಸ್ತಾನ ಕೊನೆಯ ಸ್ಥಾನದಲ್ಲಿದೆ.

- ಹಿರಿಯರ ಜೀವನ ಮಟ್ಟದ ಕುರಿತಾಗಿ 91 ರಾಷ್ಟ್ರಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆಯಲ್ಲಿ ಹೇಳಿರುವಂತೆ ವಿಶ್ವದ ಅನೇಕ ರಾಷ್ಟ್ರಗಳು ಹಿರಿಯರು ಜೀವಿಸಲು ಸೂಕ್ತ ವ್ಯವಸ್ಥೆಯನ್ನು ಸೃಷ್ಟಿಸುವಲ್ಲಿ ವಿಫಲವಾಗಿವೆ.
- ವಿಶ್ವಸಂಸ್ಥೆಯ ಜನಸಂಖ್ಯೆ ನಿಧಿ ಮತ್ತು "ಹೆಲ್ಪ್ ಏಜ್ ಇಂಟರ್ ನ್ಯಾಷನಲ್" ಜಂಟಿಯಾಗಿ ಈ ಸಮೀಕ್ಷೆಯನ್ನು ನಡೆಸಿದ್ದು, ದಿ ಗ್ಲೋಬಲ್ ಏಜ್ ವಾಚ್ ಇಂಡೆಕ್ಸ್" ಅನ್ನು ಹೊರತಂದಿವೆ.

**ಸಮೀಕ್ಷೆ ಹೇಗೆ?**

- ಆದಾಯ, ಆರೋಗ್ಯ, ಶಿಕ್ಷಣ, ಪರಿಸರ ಮುಂತಾದ ಒಟ್ಟು 13 ಮಾನದಂಡಗಳನ್ನು ಇಟ್ಟುಕೊಂಡು ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

**ಭಾರತದ ಸ್ಥಾನ**:

- ಈ ಸಮೀಕ್ಷೆಯಲ್ಲಿ ಭಾರತ 73 ನೇ ಸ್ಥಾನವನ್ನು ಗಳಿಸಿದೆ. ಉಳಿದಂತೆ ಬ್ರೆಜಿಲ್ (31), ಚೀನಾ (35), ರಷ್ಯಾ (78) ಸ್ಥಾನದಲ್ಲಿವೆ.

**ನೇಪಾಳಕ್ಕೆ ಮಿಲಿಟರಿ ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಮುಂದುವರೆಸಲು ಭಾರತ ಒಪ್ಪಿಗೆ**

ನೇಪಾಳಕ್ಕೆ ಮಿಲಿಟರಿ ಅಗತ್ಯತೆಗಳ ಪೂರೈಕೆಯನ್ನು ಮುಂದುವರೆಸಲು ಭಾರತ ಒಪ್ಪಿಕೊಂಡಿರುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ. ಅತಿ ಶೀಘ್ರದಲ್ಲೇ ಬಹು ಕಾರ್ಯ ರೂಪಿ ನಾವೀನ್ಯ ತಂತ್ರಜ್ಞಾನದಿಂದ ಕೂಡಿರುವ ಲಘು ವಿಮಾನವನ್ನು ಭಾರತ ನೇಪಾಳಕ್ಕೆ ಪೂರೈಕೆ ಮಾಡಲಿದೆ ಎನ್ನಲಾಗಿದೆ.

- ನೇಪಾಳಕ್ಕೆ ಮಿಲಿಟರಿ ಅಗತ್ಯತೆಗಳ ಪೂರೈಕೆಯನ್ನು ಮುಂದುವರೆಸುವ ಮಹತ್ವಾಕಾಂಕ್ಷಿ ಯೋಜನೆಗೆ ಭಾರತದ ಆರ್ಮಿ ಚೀಫ್ ಬೈಕರಮ್ ಸಿಂಗ್ ಮತ್ತು ನೇಪಾಳದ ಆರ್ಮಿ ಚೀಫ್ ಗೌರವ್ ಸುಮ್ಶೇರ್ ರಾಣ ಅವರು ಸಹಿ ಹಾಕಿದರು.
- ದೆಹಲಿಯಲ್ಲಿ ನಡೆದ ಮಾತುಕತೆಯಲ್ಲಿ ಉಭಯ ದೇಶಗಳ ನಡುವೆ ಮಿಲಿಟರಿ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು.
- ನೇಪಾಳದಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗೆ ಭಾರತ ಸಿಬ್ಬಂದಿ ಸೇರಿದಂತೆ ಸೇನಾಪಡೆಗೆ ವಾಹನಗಳನ್ನು ಒದಗಿಸಲಿದೆ. ಅದೇ ರೀತಿ ನೇಪಾಳ ಸೈನಿಕರಿಗೆ ವಿಶೇಷ ತರಬೇತಿ ಸೌಲಭ್ಯವನ್ನು ಭಾರತ ಒದಗಿಸಲಿದೆ ಎಂದು ಹೇಳಲಾಗಿದೆ.
- ಭಾರತದಿಂದ ನೇಪಾಳಕ್ಕೆ ಮಿಲಿಟರಿ ಅಗತ್ಯತೆಗಳ ಪೂರೈಕೆಯನ್ನು 2006 ರಿಂದ ನಿಲ್ಲಿಸಲಾಗಿತ್ತು.

## ವ್ಯವಹಾರ

### ವಿಮಾನಯಾನ ಸೇವೆಗೆ ಟಾಟಾ ಗ್ರೂಪ್ ಮತ್ತು ಸಿಂಗಪುರ ಏರ್ ಲೈನ್ಸ್ ಯೋಜನೆ

ಭಾರತದ ಹೆಸರಾಂತ ಸಂಸ್ಥೆ ಟಾಟಾ ಏರ್ ಲೈನ್ಸ್ ಮತ್ತು ಸಿಂಗಪುರ್ ಏರ್ ಲೈನ್ಸ್ ಭಾರತದಲ್ಲಿ ಪೂರ್ಣ ಅವಧಿಯ ವಿಮಾನಯಾನ ಸೇವೆಯನ್ನು ಆರಂಭಿಸಲು ಸಿದ್ದತೆ ನಡೆಸಿವೆ. ಕಳೆದ 15 ವರ್ಷಗಳ ಹಿಂದೆ ಟಾಟಾ ಗ್ರೂಪ್ಸ್ ಮತ್ತು ಸಿಂಗಪುರ ಏರ್ ಲೈನ್ಸ್ ವಿಮಾನಯಾನ ಸೇವೆಯನ್ನು ಭಾರತದಲ್ಲಿ ಆರಂಭಿಸಲು ಚಿಂತನೆ ನಡೆಸಿದ್ದವಾದರೂ ಅದು ವಿಫಲವಾಗಿತ್ತು.

- ಇತ್ತೀಚೆಗಷ್ಟೇ ಟಾಟಾ ಏರ್ ಲೈನ್ಸ್ ಮತ್ತು ಮಲೇಷಿಯಾದ ಅಗ್ಗ ದರದ ವಿಮಾನಯಾನ ಸಂಸ್ಥೆ ಏರ್ ಏಷ್ಯಾ ಇಂತಹದೇ ಸೇವೆಯನ್ನು ಆರಂಭಿಸಲು ಸಹಿ ಹಾಕಿದ್ದು ಇಲ್ಲಿ ಸ್ಮರಿಸಬಹುದು. ಸದ್ಯ ಈ ಪ್ರಸ್ತಾವನೆಗೆ ಅಂತಿಮ ಅನುಮೋದನೆಯೊಂದೆ ಬಾಕಿಯಿದೆ.
- ಟಾಟಾ ಏರ್ ಲೈನ್ಸ್ ಮತ್ತು ಸಿಂಗಪುರ ಏರ್ ಲೈನ್ಸ್ ಜಂಟಿಯಾಗಿ ಆರಂಭಿಸಲಿರುವ ಈ ಸೇವೆಯಲ್ಲಿ ಟಾಟಾ ಸಂಸ್ಥೆ ಶೇ 51 ರಷ್ಟು ಪಾಲು ಹೊಂದಿರಲಿದೆ. ಉಳಿದ ಪಾಲನ್ನು ಸಿಂಗಪುರ ಏರ್ ಲೈನ್ಸ್ ಹೊಂದಲಿದೆ.
- ದೇಶದ ವಿಮಾನಯಾನ ಸೇವೆಯಲ್ಲಿ ವಿದೇಶಿ ಹೂಡಿಕೆದಾರರು ಬಂಡವಾಳ ಹೂಡುವ ಸಲುವಾಗಿ ಸರ್ಕಾರ ಶೇ 49 ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ವಿಮಾನಯಾನ ಕ್ಷೇತ್ರದಲ್ಲಿ ಕಲ್ಪಿಸಿದೆ.

### ನೋಕಿಯಾ ಮೊಬೈಲ್ ಸಂಸ್ಥೆಯನ್ನು ಖರೀದಿಸಿದ ಮೈಕ್ರೋಸಾಫ್ಟ್

ಮೊಬೈಲ್ ಕ್ಷೇತ್ರದ ದಿಗ್ಗಜನಾಗಿದ್ದ ನೋಕಿಯಾ ಮೊಬೈಲ್ ಸಂಸ್ಥೆಯನ್ನು ಮೈಕ್ರೋಸಾಫ್ಟ್ ಸಂಸ್ಥೆ ಭಾರಿ ಮೊತ್ತಕ್ಕೆ ಖರೀದಿಸಿದೆ. ಕಂಪ್ಯೂಟರ್ ಕ್ಷೇತ್ರದ ದಿಗ್ಗಜ ಎಂದೇ ಖ್ಯಾತಿಯಾಗಿರುವ ಮೈಕ್ರೋಸಾಫ್ಟ್ ಸಂಸ್ಥೆ ಸುಮಾರು 7.2 ಮಿಲಿಯನ್ ಡಾಲರ್‌ಗೆ ಮೊಬೈಲ್ ಸಂಸ್ಥೆ ನೋಕಿಯಾವನ್ನು ಖರೀದಿ ಮಾಡಿದೆ. ಫಿನ್‌ಲ್ಯಾಂಡ್ ಮೂಲದ ನೋಕಿಯಾ ಸಂಸ್ಥೆಯನ್ನು ಅಮೆರಿಕ ಮೂಲದ ಮೈಕ್ರೋಸಾಫ್ಟ್ ಸಂಸ್ಥೆ ಖರೀದಿಸಿದ್ದು, ಶೀಘ್ರದಲ್ಲಿಯೇ ಮಾರುಕಟ್ಟೆಗೆ ತನ್ನ ನೂತನ ಸರಣಿಯ ಮೊಬೈಲ್‌ಗಳನ್ನು ಬಿಡುಗಡೆ ಮಾಡುವುದಾಗಿ ಮೈಕ್ರೋಸಾಫ್ಟ್ ಹೇಳಿದೆ. ಇದೊಂದು ದಿಟ್ಟ ನಡೆಯಾಗಿದ್ದು, ಎರಡೂ ಸಂಸ್ಥೆಗಳ ಗ್ರಾಹಕ, ಸಿಬ್ಬಂದಿಗಳನ್ನು ಮತ್ತು ಅವರ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೈಕ್ರೋಸಾಫ್ಟ್ ನಿರ್ಗಮಿತ ಸಿಇಒ ಸ್ಟೀವ್ ಬಾಲ್ಮರ್ ಹೇಳಿದ್ದಾರೆ.

**ನೋಕಿಯಾ ಮಾರಾಟ ಏಕೆ?**

- ಮಾರುಕಟ್ಟೆಯಲ್ಲಿ ಸ್ಮಾರ್ಟ್‌ಫೋನ್‌ಗಳ ಭರಾಟೆ ಹೆಚ್ಚಾದಂತೆ ಸ್ಪರ್ಧೆ ಎದುರಿಸಲಾಗದೇ ನೋಕಿಯಾ ಮಂಕಾಗಿತ್ತು.
- ಒಂದು ಕಾಲದಲ್ಲಿ ಮೊಬೈಲ್ ಕ್ಷೇತ್ರದಲ್ಲಿ ಅನಭಿಶಕ್ತ ದೊರೆಯಾಗಿದ್ದ ನೋಕಿಯಾ ಸಂಸ್ಥೆ ಇತ್ತೀಚೆಗಿನ ದಿನಗಳಲ್ಲಿ ಆಪಲ್ ಮತ್ತು ಸ್ಯಾಮ್‌ಸಂಗ್‌ಗಳ ತೀವ್ರ ಸ್ಪರ್ಧೆಯನ್ನು ತಡೆಯಲಾಗದೇ ಸಾಕಷ್ಟು ನಷ್ಟವನ್ನು ಅನುಭವಿಸಿತ್ತು.

- ಆಪಲ್ ಮತ್ತು ಸ್ಯಾಮ್‌ಸಂಗ್ ಸಂಸ್ಥೆಗಳ ತೀವ್ರ ಸ್ಪರ್ಧೆಯಿಂದಾಗಿ ನೋಕಿಯಾ 2011ರಲ್ಲಿ ಮೈಕ್ರೋಸಾಫ್ಟ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ಲುಮಿಯಾ ಸರಣಿ ಮೊಬೈಲ್‌ಗಳಿಗೆ ವಿಂಡೋಸ್ ಆಪರೇಟಿಂಗ್ ಸಿಸ್ಟಮ್ ಅನ್ನು ಅಳವಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು.
- ಆರಂಭದಲ್ಲಿ ಭಾರಿ ಸದ್ದು ಮಾಡಿದ್ದ ನೋಕಿಯಾ ಲುಮಿಯಾ ಸರಣಿ ಮೊಬೈಲ್‌ಗಳು, ತದ ನಂತರ ಆಪಲ್ ಮತ್ತು ಸ್ಯಾಮ್‌ಸಂಗ್ ಆಂಡ್ರಾಯ್ಡ್ ಮೊಬೈಲ್‌ಗಳ ಕಾರ್ಯಕ್ಷಮತೆಯ ಮುಂದೆ ಮಂಕಾಗಿತ್ತು.
- ಅಲ್ಲದೆ ವಿಂಡೋಸ್ ಮೊಬೈಲ್‌ಗಳಲ್ಲಿನ ಆಪ್ಸ್‌ಗಳು ದುಬಾರಿಯಾಗಿರುವುದು ಕೂಡ ಗ್ರಾಹಕರನ್ನು ಆಂಡ್ರಾಯ್ಡ್ ಮೊಬೈಲ್‌ಗಳತ್ತ ವಾಲುವಂತೆ ಮಾಡಿತ್ತು.

**ವಿದೇಶಿ ಬ್ಯಾಂಕ್ ಗಳಲ್ಲಿಯೂ ಕೂಡ ಇನ್ನು ಮುಂದೆ ಝೀರೋ ಬ್ಯಾಲೆನ್ಸ್ ಖಾತೆ**

ಭಾರತದಲ್ಲಿ ಸೇವೆ ನೀಡುತ್ತಿರುವ ವಿದೇಶಿ ಬ್ಯಾಂಕ್‌ಗಳಲ್ಲಿ ಇನ್ನು ಯಾವುದೇ ಭಾರತೀಯ ಸುಲಭವಾಗಿ ಝೀರೊ ಬ್ಯಾಲೆನ್ಸ್ ಖಾತೆ ತೆರೆಯಬಹುದು. ಈ ಕುರಿತು ಆರ್‌ಬಿಐ ಆದೇಶ ಹೊರಡಿಸಿದೆ. ಆರ್‌ಬಿಐ ಈ ಹಿಂದೆ ಘೋಷಿಸಿದ್ದ ಸಾಮಾನ್ಯ ಉಳಿತಾಯ ಬ್ಯಾಂಕ್ ಖಾತೆ ಕಾನೂನುಗಳು ಭಾರತದಲ್ಲಿನ ವಿದೇಶಿ ಬ್ಯಾಂಕ್‌ಗಳಿಗೂ (ಎಚ್‌ಎಸ್‌ಬಿಸಿ, ಸಿಟಿಬ್ಯಾಂಕ್) ಅನ್ವಯವಾಗುತ್ತದೆ. ಹೀಗಾಗಿ ಯಾವುದೇ ಬಡ ಭಾರತೀಯ ಕೂಡಾ ಶೂನ್ಯ ಬ್ಯಾಲೆನ್ಸ್ (ಝೀರೋ ಬ್ಯಾಲೆನ್ಸ್) ಹೊಂದಿರುವ ಖಾತೆಗಳನ್ನು ತೆರೆಯಬಹುದಾಗಿದೆ. ಈ ಮೂಲಕ ಬ್ಯಾಂಕ್‌ಗಳಿಂದ ಡೆಬಿಟ್ ಕಾರ್ಡ್ ಪಡೆಯಬಹುದಾಗಿದೆ.

**ಉಪಯೋಗಗಳು:**

- ಈ ಯೋಜನೆ ಅನ್ವಯ ಖಾತೆ ಆರಂಭಿಸಲು ಬ್ಯಾಂಕ್‌ನಲ್ಲಿ ಯಾವುದೇ ಠೇವಣಿ ಇಡುವುದು ಕಡ್ಡಾಯವಲ್ಲ.
- ಈ ರೀತಿಯ ಖಾತೆ ಹೊಂದಿದವರು ಇ ಪೇಮೆಂಟ್, ಚೆಕ್‌ಬುಕ್ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯ ಪಡೆಯಬಹುದಾಗಿದೆ.
- ಖಾತೆ ಹೊಂದಿದವರು ಬ್ಯಾಂಕ್ ಡೆಬಿಟ್ ಕಾರ್ಡ್ ಪಡೆಯಬಹುದು

**ನೋಟಿನ ಮಾಲೆಗೆ ಆರ್‌ಬಿಐ ಅಂಕುಶ:**

ಇದೇ ವೇಳೆ ಕರೆನ್ಸಿ ನೋಟುಗಳನ್ನು ಬಳಸಿ ಮಾಲೆ ತಯಾರಿಸಬಾರದು ಎಂದು ಆರ್‌ಬಿಐ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಕರೆನ್ಸಿ ನೋಟುಗಳನ್ನು ಮಾಲೆ ಕಟ್ಟಲು, ಮಂಟಪಗಳನ್ನು ಅಲಂಕರಿಸಲು ಮತ್ತು ದೇವರನ್ನು ಅಲಂಕರಿಸಲು ಬಳಸಬಾರದು. ಇದರಿಂದಾಗಿ ನೋಟುಗಳು ವಿರೂಪಗೊಳ್ಳುತ್ತದೆ ಮಾತ್ರವಲ್ಲ ಬಾಳಿಕೆಯೂ ಕಡಿಮೆಯಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

## ಪವರ್ ಆಫ್ ಅಟಾರ್ನಿ ಕೂಡ ಚೆಕ್ ಬೌನ್ಸ್ ಪ್ರಕರಣ ದಾಖಲಿಸಬಹುದು: ಸುಪ್ರೀಂ ಕೋರ್ಟ್

ಪವರ್ ಆಫ್ ಅಟಾರ್ನಿ ಹೊಂದಿದವರು ತಮ್ಮ ಫಿರ್ಯಾದಿದಾರರ ಪರವಾಗಿ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಿ ಅದನ್ನು ಮುಂದುವರಿಸುವ ಅಧಿಕಾರವನ್ನು ಹೊಂದಿದ್ದಾರೆ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ಈ ವಿಚಾರವಾಗಿ ದೇಶದ ಕೆಲ ಹೈಕೋರ್ಟ್‌ಗಳು ಮತ್ತು ಸುಪ್ರೀಂಕೋರ್ಟ್ ಈ ಹಿಂದೆ ವಿಭಿನ್ನ ತೀರ್ಪು ನೀಡಿದ್ದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ನ ವಿಭಾಗೀಯ ಪೀಠಕ್ಕೆ ವರ್ಗಾಯಿಸಲ್ಪಟ್ಟಿತ್ತು. ಈಗ ತ್ರಿಸದಸ್ಯ ಪೀಠ ಇದೀಗ ಈ ಮಹತ್ವದ ತೀರ್ಪನ್ನು ನೀಡಿದೆ.

**ಸುಪ್ರೀಂ ತೀರ್ಪು:**

ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯಿದೆಯ ಸೆಕ್ಷನ್ 138ರ ಪ್ರಕಾರ ಪವರ್ ಆಫ್ ಅಟಾರ್ನಿ ಹೊಂದಿರುವವರು ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಿ, ಪ್ರಕರಣವನ್ನು ಮುಂದುವರಿಸಲು ಕಾನೂನು ಮತ್ತು ನ್ಯಾಯಸಮ್ಮತ ಅಧಿಕಾರವನ್ನು ಹೊಂದಿದ್ದಾರೆ ಎಂದು ಪೀಠ ತನ್ನ ತೀರ್ಪಿನಲ್ಲಿ ತಿಳಿಸಿದೆ. ಚೆಕ್ ಬೌನ್ಸ್ ಪ್ರಕರಣ ದಾಖಲಿಸುವ ಪವರ್ ಆಫ್ ಅಟಾರ್ನಿ ಹೊಂದಿರುವ ವ್ಯಕ್ತಿಗಳು ಈ ವ್ಯವಹಾರದ ಸಾಕ್ಷಿಗಳಾಗಿರಬೇಕು ಅಥವಾ ವ್ಯವಹಾರದ ಬಗೆಗೆ ತಿಳಿದಿರಬೇಕು. ಆದರೆ ಪವರ್ ಆಫ್ ಅಟಾರ್ನಿಗಳು ತಮ್ಮ ಹೆಸರಿನಲ್ಲಿ ಪ್ರಕರಣವನ್ನು ದಾಖಲಿಸಲು ಅವಕಾಶ ಇಲ್ಲವಾಗಿದ್ದು ಫಿರ್ಯಾದಿದಾರರ ಹೆಸರಿನಲ್ಲಿಯೇ ಪ್ರಕರಣವನ್ನು ದಾಖಲಿಸಿ, ಅವರ ಪರವಾಗಿ ವಾದವನ್ನು ಮುಂದುವರಿಸಬಹುದಾಗಿದೆ ಎಂದು ನ್ಯಾಯಪೀಠ ಹೇಳಿದೆ.

## ಸ್ಟೇಟ್ ಬ್ಯಾಂಕ್ ಸಮೂಹ ಬ್ಯಾಂಕ್ ಗಳ ಸುಧಾರಣೆ ಮತ್ತು ವಿಲೀನ ಪ್ರಕ್ರಿಯೆ: ವರದಿ

ಎಸ್‌ಬಿಐ ಕೇಂದ್ರ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಪ್ರಮುಖವಾದುದು. ಈ ಬ್ಯಾಂಕಿಗೆ 157 ವಿದೇಶಿ ಕಚೇರಿಗಳಿವೆ. ಒಟ್ಟಾರೆ ದೇಶಾದ್ಯಂತ 15,000ಕ್ಕೂ ಅಧಿಕ ಶಾಖೆಗಳನ್ನು ಇದು ಹೊಂದಿರುವುದು ಹೆಗ್ಗಳಿಕೆಯೇ ಸರಿ. ಬಹಳ ಸಮಯದಿಂದ ಕೇಳಿಬರುತ್ತಿರುವ ಮಾತೆಂದರೆ, ಬ್ಯಾಂಕುಗಳ ಸುಧಾರಣೆ ಮತ್ತು ವಿಲೀನ ಪ್ರಕ್ರಿಯೆ. ಜನರಿಗೆ ಬ್ಯಾಂಕ್‌ಗಳ ವಿಲೀನ ಪ್ರಕ್ರಿಯೆಯಿಂದ ಹೆಚ್ಚಿನ ಲಾಭ ದೊರಕದೇ ಇರಬಹುದು. ಆದರೆ, ಸುಧಾರಣೆಯಿಂದ ನಿಜಕ್ಕೂ ಅನುಕೂಲವಿದೆ.

**ವಿಲೀನ ಪ್ರಕ್ರಿಯೆ:**

1991ರ ನಂತರ ಸುಧಾರಣೆಯ ಗಾಳಿ ಬಂದಿದ್ದರೂ ಈಗಲೂ ನಮ್ಮ ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸರ್ಕಾರಿ ಸ್ವಾಮ್ಯದ ಹಣಕಾಸು ಸಂಸ್ಥೆಗಳದ್ದೇ ಪಾರಮ್ಯ. ಅಂದರೆ ಶೇ.70 ವಹಿವಾಟು ಅವುಗಳದ್ದೇ. ಈ ಪೈಕಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್ ಬಿಐ) ಮೊದಲ ಸ್ಥಾನದಲ್ಲಿದ್ದರೂ ವಿಶ್ವಮಟ್ಟದ 20 ಬ್ಯಾಂಕುಗಳ ಪಟ್ಟಿಯಲ್ಲಿ ಅದರ ಹೆಸರೇ ಇಲ್ಲ. ಎಸ್‌ಬಿಐ ಸಮೂಹಕ್ಕೆ ವಿಲೀನ ಪ್ರಕ್ರಿಯೆ ಹೊಸತೇನೂ ಅಲ್ಲ. ಸ್ಟೇಟ್ ಬ್ಯಾಂಕ್ ಸೌರಾಷ್ಟ್ರ (1998ರ ಆ.13) ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂದೋರ್ (2009 ಜು.19) ಅನ್ನು ಎಸ್‌ಬಿಐನಲ್ಲಿ ವಿಲೀನಗೊಳಿಸಲು ಒಪ್ಪಿಕೊಂಡು, ನಿರ್ಧರಿಸಲಾಗಿತ್ತು.

**ಎಷ್ಟು ಸಹವರ್ತಿ ಬ್ಯಾಂಕುಗಳಿವೆ?**

ಸದ್ಯ ಸ್ಟೇಟ್ ಬ್ಯಾಂಕ್ ಸಮೂಹದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜೈಪುರ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಪಟಿಯಾಲ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ ಇವೆ.

**ಯಾವುದೆಲ್ಲ ವಿಲೀನ?**

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜೈಪುರ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್‌ಗಳನ್ನು ವಿಲೀನಗೊಳಿಸುವುದು ಕೇಂದ್ರ ಸರ್ಕಾರದ ಮುಂದಿರುವ ಯೋಜನೆ. ಈ ರೀತಿ ಆದಾಗ ಎಸ್‌ಬಿಐ ಜಗತ್ತಿನ ಹತ್ತು ಬಲಿಷ್ಠ ಬ್ಯಾಂಕುಗಳ ಸಾಲಿಗೆ ಸೇರುತ್ತದೆ.

**ಏನಾಗುತ್ತದೆ?**

ವಿಲೀನದ ಬಳಿಕ ಬ್ಯಾಂಕಿಗೆ ಆರ್ಥಿಕ ಮತ್ತು ಕಾರ್ಯಾಕಾರಿ ಶಕ್ತಿ ಬರುತ್ತದೆ. ಅಂದರೆ, ನಷ್ಟದಲ್ಲಿರುವ ಬ್ಯಾಂಕು ಹಣಕಾಸಿನ ವಿಚಾರದಲ್ಲಿ ಮತ್ತಷ್ಟು ಬಲಿಷ್ಠವಾಗುತ್ತದೆ. ಆದರೆ, ಕೆಲವೊಂದು ಶಾಖೆಗಳನ್ನು ರದ್ದು ಮಾಡಬೇಕಾದ ಪರಿಸ್ಥಿತಿಯೂ ಎದುರಾಗಬಹುದು. ವಿಲೀನ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸುವವರು ಪ್ರಮುಖವಾಗಿ ವ್ಯಕ್ತಪಡಿಸುತ್ತಿರುವ ವಾದ ಏನೆಂದರೆ, 'ಹಲವು ಮಂದಿ ಕೆಲಸ ಕಳೆದುಕೊಳ್ಳಬೇಕಾಗುತ್ತದೆ' ಎಂಬುದು. ಆದರೆ, ಬಹುತೇಕರಿಗೆ ಇದರಿಂದ ಲಾಭವೇ ಆಗುತ್ತದೆ. ವಿಲೀನದಿಂದಾಗಿ ಹೊಸ ವಿಭಾಗ ಮತ್ತು ಹೊಸ ರೀತಿಯ ಹೊಣೆ ಸೃಷ್ಟಿಯಾಗುತ್ತದೆ. ಜತೆ ಇರುವ ಶಾಖೆಗಳನ್ನು ಮುಚ್ಚುವ ಸಾಧ್ಯತೆಯೂ ಕಡಿಮೆಯೇ.

**ಅನುಕೂಲಗಳು:**

ಗಾತ್ರದಿಂದ ಬರುವಂಥ ಕ್ಷಮತೆ, ಗಾತ್ರದಿಂದ ದೊಡ್ಡದಾದಾಗ ವೆಚ್ಚ ಕಡಿಮೆಯಾಗಿ ಲಾಭ ಹೆಚ್ಚುತ್ತದೆ. ದೇಶದಲ್ಲಿ ಮೂಲಭೂತ ಅಭಿವೃದ್ಧಿಗೆ ಬೇಕಾದ ಮೊತ್ತವನ್ನು ಸಾಲದ ರೂಪದಲ್ಲಿ ನೀಡುವ ಸಾಮರ್ಥ್ಯ ಬರುತ್ತದೆ. ನಷ್ಟದಿಂದ ಸೊರಗಿದ ಬ್ಯಾಂಕುಗಳಿಗೆ ಜೀವದಾನ ಸಿಗುತ್ತದೆ. ಜನರ ಅಗತ್ಯಕ್ಕೆ ತಕ್ಕಂತೆ ಹೊಸ ಶಾಖೆಗಳನ್ನು ಆರಂಭಿಸಬಹುದು. ಎಲ್ಲ ಪ್ರದೇಶಗಳ ಮಾರುಕಟ್ಟೆ ಪ್ರವೇಶಿಸುವ ಶಕ್ತಿ ಬರುತ್ತದೆ. ಅನಾನುಕೂಲಗಳು ಸಣ್ಣ ಹೂಡಿಕೆದಾರರನ್ನು, ಕೃಷಿಕರನ್ನು ಕಡೆಗಣಿಸುವ ಸಾಧ್ಯತೆ. ಶಾಖೆಗಳ ಮರುಸ್ಥಾಪನೆ ಮತ್ತು ಕಾರ್ಯಗಳ ಪರಿಷ್ಕರಣೆಯಿಂದ ಕೆಲ ಉದ್ಯೋಗ/ ಹುದ್ದೆಗಳು ರದ್ದಾಗಬಹುದು. ದೊಡ್ಡ ಬ್ಯಾಂಕುಗಳಲ್ಲಿ ಹಗರಣ ನಡೆದರೆ ಅದರಿಂದ ದೇಶದ ಹಣಕಾಸು ವ್ಯವಸ್ಥೆಗೆ ಧಕ್ಕೆ ಬಂದೀತು.

**ಟಾಟಾ ಸಮೂಹದಿಂದ ಹೊಸ ವಿಮಾನಯಾನ ಕಂಪನಿ ಪ್ರಾರಂಭ**

ಅಡುಗೆ ಉಪ್ಪಿನಿಂದ ಹಿಡಿದು ಸಾಫ್ಟ್‌ವೇರ್ ಉತ್ಪಾದನೆವರೆಗೆ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಕಂಪನಿಗಳನ್ನು ಹೊಂದಿರುವ ಟಾಟಾ ಸಮೂಹ, ಹಲವು ದಶಕಗಳ ಬಳಿಕ ವಿಮಾನಯಾನ ಕ್ಷೇತ್ರಕ್ಕೆ ಭರ್ಜರಿಯಾಗಿ ಪ್ರವೇಶ ಮಾಡಲು ಹೊರಟಿದೆ. ಏಳು ತಿಂಗಳ

ಹಿಂದಷ್ಟೇ ಏರ್ ಏಷ್ಯಾ ವಿಮಾನಯಾನ ಕಂಪನಿ ಸಹಯೋಗದಲ್ಲಿ ಅಗ್ಗದ ವಿಮಾನ ಸಂಸ್ಥೆ ಸ್ಥಾಪಿಸುವುದಾಗಿ ಘೋಷಿಸಿದ್ದ ಟಾಟಾ, ಇದೀಗ ಸಿಂಗಾಪುರ ಏರ್‌ಲೈನ್ಸ್ ಜತೆಗೂಡಿ ತನ್ನದೇ ಮಾಲೀಕತ್ವದಲ್ಲಿ ಹೊಸ ಕಂಪನಿಯೊಂದನ್ನು ಆರಂಭಿಸಲು ಒಪ್ಪಂದ ಮಾಡಿಕೊಂಡಿದೆ. ಇದರಿಂದಾಗಿ ಕೆಲವೇ ತಿಂಗಳಲ್ಲಿ ದೇಶದಲ್ಲಿ ಟಾಟಾ ಬ್ರ್ಯಾಂಡ್‌ನ ಎರಡು ವಿಮಾನಗಳು ಓಡಾಡಲಿವೆ.

**ಸಿಂಗಾಪುರ ಏರ್ ಲೈನ್ಸ್ ಒಪ್ಪಂದ:**

ಸಿಂಗಾಪುರ ಏರ್‌ಲೈನ್ಸ್ ಜತೆಗೂಡಿ ದೇಶದಲ್ಲಿ ವಿಮಾನ ಓಡಿಸುವ ಟಾಟಾ ಕಂಪನಿಯ ಪ್ರಯತ್ನ 18 ವರ್ಷಗಳಷ್ಟು ಹಿಂದಿನದು. ಆದರೆ ಅದು ಆಗ ಫಲಪ್ರದವಾಗಿರಲಿಲ್ಲ. ಬಳಿಕ ಮತ್ತೊಂದು ಬಾರಿ ಸಿಂಗಾಪುರ ಏರ್‌ಲೈನ್ಸ್ ಜತೆಗೂಡಿ ವಿಮಾನಯಾನ ಉದ್ಯಮ ಪ್ರವೇಶಿಸಲು ಪ್ರಯತ್ನಿಸಿತ್ತಾದರೂ ಅದರಲ್ಲೂ ಯಶಸ್ಸು ಸಿಕ್ಕಿರಲಿಲ್ಲ. ಆದರೆ ಇದೀಗ ಪರಿಪೂರ್ಣ ಸೇವೆ ಒದಗಿಸುವ ವಿಮಾನಯಾನ ಕಂಪನಿಯನ್ನು ಆರಂಭಿಸಲು ಸಿಂಗಾಪುರ ಏರ್‌ಲೈನ್ಸ್ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಈ ಕಂಪನಿಯಲ್ಲಿ ಟಾಟಾ ಸನ್ಸ್ ಶೇ.51 ಪಾಲು ಹೊಂದುವ ಮೂಲಕ ಮಾಲೀಕತ್ವ ಗಳಿಸಿದರೆ, ಉಳಿಕೆ ಶೇ.49 ಷೇರುಗಳನ್ನು ಸಿಂಗಾಪುರ ಏರ್ ಲೈನ್ಸ್ ಹೊಂದಿರಲಿದೆ. ಹೊಸ ವಿಮಾನಯಾನ ಕಂಪನಿಗೆ ಅನುಮತಿ ಕೋರಿ ವಿದೇಶಿ ಹೂಡಿಕೆ ಉತ್ತೇಜನಾ ಮಂಡಳಿಗೆ ಈಗಾಗಲೇ ಟಾಟಾ ಕಂಪನಿ ಅರ್ಜಿ ಸಲ್ಲಿಸಿದೆ.

**3ನೇ ಪ್ರಯತ್ನ:**

ಸಿಂಗಾಪುರ ಏರ್‌ಲೈನ್ಸ್ ಜತೆಗೂಡಿ ಭಾರತೀಯ ವಿಮಾನಯಾನ ಕ್ಷೇತ್ರ ಪ್ರವೇಶಿಸಲು ಟಾಟಾ ಸಮೂಹ ನಡೆಸುತ್ತಿರುವ ಮೂರನೆ ಪ್ರಯತ್ನ ಇದಾಗಿದೆ. 1995ರಲ್ಲಿ ಉಭಯ ಕಂಪನಿಗಳು ದೇಶದಲ್ಲಿ ವಿಮಾನಯಾನ ಆರಂಭಕ್ಕೆ ಅರ್ಜಿ ಸಲ್ಲಿಸಿದ್ದವು. ವರ್ಷದ ಬಳಿಕ ಅನುಮತಿ ಸಿಕ್ಕಿತು. ಆದರೆ 1997ರಲ್ಲಿ ವಿಮಾನಯಾನ ನೀತಿಯೇ ಬದಲಾಗಿದ್ದರಿಂದ ವಿಮಾನ ಓಡಾಟ ಆರಂಭವಾಗಿರಲಿಲ್ಲ. ಟಾಟಾ ಸ್ಥಾಪಿಸಿದ್ದ ಕಂಪನಿಯೇ ಈಗಿನ ಏರ್ ಇಂಡಿಯಾ 1932ರಲ್ಲಿ ಟಾಟಾ ಸಮೂಹದ ಜೆಆರ್‌ಡಿ ಟಾಟಾ ಅವರು ಟಾಟಾ ಏರ್ ಲೈನ್ಸ್ ವಿಮಾನಯಾನ ಕಂಪನಿಯನ್ನು ಸ್ಥಾಪಿಸಿದ್ದರು. 1946ರಲ್ಲಿ ಏರ್ ಇಂಡಿಯಾ ಎಂದು ಹೆಸರು ಬದಲಿಸಿದ ಆ ಕಂಪನಿಯನ್ನು 1953ರಲ್ಲಿ ರಾಷ್ಟ್ರೀಕರಣಗೊಳಿಸಿ, ಸರ್ಕಾರ ತೆಕ್ಕೆಗೆ ತೆಗೆದುಕೊಂಡಿತ್ತು

## <u>ಭಾರತೀಯ ಮೂಲದ ಉದ್ಯಮಿಯ ತೆಕ್ಕೆಗೆ ಬ್ಲಾಕ್ ಬರಿ ಮೊಬೈಲ್</u>

ನಷ್ಟದ ಸುಳಿಗೆ ಸಿಕ್ಕಿ ಒದ್ದಾಡುತ್ತಿದ್ದ ಕೆನಡಾ ಮೂಲದ ಬ್ಲಾಕ್‌ಬೆರಿ ಮೊಬೈಲ್ ಕಂಪನಿಯನ್ನು ಹೈದ್ರಾಬಾದ್ ಮೂಲದ ಪ್ರೇಮ್ ವಾಟ್ಸಾ ಖರೀದಿಸಲಿದ್ದಾರೆ. ಈ ಕುರಿತು ವಾಟ್ಸಾ ನೇತೃತ್ವದ ಫೇರ್‌ಫ್ಯಾಕ್ಸ್ ಕಂಪನಿ ಮತ್ತು ಬ್ಲಾಕ್‌ಬೆರಿ ಮಾತುಕತೆ ಪೂರ್ಣಗೊಳಿಸಿವೆ. ಇದರೊಂದಿಗೆ ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಮೊಬೈಲ್ ಕಂಪನಿ ಭಾರತೀಯನ ತೆಕ್ಕೆಗೆ ಬೀಳುವುದು ಖಚಿತಗೊಂಡಿದೆ.

**ಫೇರ್ ಫ್ಯಾಕ್ಸ್ ಕಂಪನಿ:**

- ಪ್ರೇಮ್ ವಾಟ್ಸಾ ಸಿಇಒ ಆಗಿರುವ ಫೇರ್‌ಫ್ಯಾಕ್ಸ್ ಕಂಪನಿ, ಪ್ರಸಕ್ತ ಬ್ಲಾಕ್‌ಬೆರಿ ಕಂಪನಿಯಲ್ಲಿ ಅತಿದೊಡ್ಡ ಷೇರು ಹೊಂದಿರುವ ಸಂಸ್ಥೆಯಾಗಿದೆ.

- ಹಲವು ವರ್ಷಗಳಿಂದ ಬ್ಲಾಕ್‌ಬೆರಿ ನಷ್ಟದ ಹಾದಿಯಲ್ಲಿ ಸಾಗಿದ್ದರೂ, ಅದು ಅತ್ಯುತ್ತಮ ಭವಿಷ್ಯ ಹೊಂದಿರುವ ಕಂಪನಿ ಎಂದು ಪ್ರತಿಪಾದಿಸುತ್ತಲೇ ಬಂದಿದ್ದ ಪ್ರೇಮ್ ವಾಟ್ಸಾ, ಇದೀಗ ಫೇರ್‌ಫ್ಯಾಕ್ಸ್ ನೇತೃತ್ವದಲ್ಲಿ ಹೂಡಿಕೆದಾರರ ಒಕ್ಕೂಟವನ್ನು ರಚಿಸಿಕೊಂಡು ಅದರ ಮೂಲಕ ಬ್ಲಾಕ್‌ಬೆರಿ ಕಂಪನಿ ಖರೀದಿಸಿಗೆ ನಿರ್ಧರಿಸಿದ್ದಾರೆ.
- ಅಂದಾಜು 29000 ಕೋಟಿ ರೂ. ವೆಚ್ಚದಲ್ಲಿ ಈ ಖರೀದಿ ವ್ಯವಹಾರ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.
- ಪ್ರೇಮ್ ವಾಟ್ಸಾ ಈ ಹಿಂದೆ ಬ್ಲಾಕ್‌ಬೆರಿ ಕಂಪನಿಯಲ್ಲಿ ನಿರ್ದೇಶಕರಾಗಿದ್ದರು. ಕಳೆದ ಆಗಸ್ಟ್ ತಿಂಗಳಿನಲ್ಲಷ್ಟೇ ಅವರು ಆಡಳಿತ ಮಂಡಳಿ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.
- ಫೇರ್‌ಫ್ಯಾಕ್ಸ್ ಕಂಪನಿ ಪ್ರಸಕ್ತ ಬ್ಲಾಕ್‌ಬೆರಿ ಕಂಪನಿಯಲ್ಲಿ ಶೇ.10ರಷ್ಟು ಪಾಲು ಹೊಂದಿದೆ.

**ಶೂನ್ಯ ಬಡ್ಡಿ ದರದ ಜನಪ್ರಿಯ ಸಾಲ ಯೋಜನೆಗಳಿಗೆ ಆರ್.ಬಿ.ಐ. ಕಡಿವಾಣ**

ಕ್ರೆಡಿಟ್ ಕಾರ್ಡ್ ಬಳಸಿ ಸರಕುಗಳನ್ನು ಖರೀದಿಸಿ, ನಂತರ ಯಾವುದೇ ಬಡ್ಡಿ ದರ ಇಲ್ಲದೆ (ಶೂನ್ಯ ಬಡ್ಡಿ ದರ) ಸಮಾನ ಮಾಸಿಕ ಕಂತುಗಳ (ಇಎಂಐ) ಮೂಲಕ ಸಾಲ ಮರುಪಾವತಿ ಮಾಡುವಂತಹ ಜನಪ್ರಿಯ ಸಾಲ ಯೋಜನೆಗಳನ್ನು ನಿಲ್ಲಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ವಾಣಿಜ್ಯ ಬ್ಯಾಂಕುಗಳಿಗೆ ಸೂಚನೆ ನೀಡಿದೆ. ಗ್ರಾಹಕರ ಹಿತಾಸಕ್ತಿ ರಕ್ಷಿಸುವ ಸಲುವಾಗಿಯೇ ಶೂನ್ಯ ಬಡ್ಡಿ ದರದ ಸಾಲ ಯೋಜನೆ ನಿಲ್ಲಿಸುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿರುವುದಾಗಿ 'ಆರ್‌ಬಿಐ' ಸ್ಪಷ್ಟಪಡಿಸಿದೆ.

**ಗ್ರಾಹಕರನ್ನು ಸೆಳೆಯುವ ತಂತ್ರ:**

- ಕ್ರೆಡಿಟ್ ಕಾರ್ಡ್ ಬಳಸಿ ಸರಕು ಗಳನ್ನು ಖರೀದಿಸಿ, ನಂತರ ಯಾವುದೇ ಬಡ್ಡಿ ದರ ಇಲ್ಲದೆ (ಶೂನ್ಯ ಬಡ್ಡಿ ದರ) 'ಇಎಂಐ' ಪಾವತಿಸಿ ಎನ್ನುವುದು ಗ್ರಾಹ ಕರನ್ನು ಸೆಳೆಯುವ ತಂತ್ರ ಮಾತ್ರ.
- ವಹಿವಾಟು ಪ್ರಕ್ರಿಯೆ ಶುಲ್ಕದ ರೂಪದಲ್ಲಿ ನಂತರ ಗ್ರಾಹಕರಿಂದ ಬಡ್ಡಿ ವಸೂಲು ಮಾಡಲಾಗುತ್ತದೆ. ಕೆಲವು ಬ್ಯಾಂಕು ಗಳು ಸಾಲ ನೀಡುವಾಗಲೇ ಮೂಲ ದಲ್ಲೇ ಬಡ್ಡಿ ಕಡಿತ ಮಾಡುತ್ತಿರುವುದು ಕೂಡ 'ಆರ್‌ಬಿಐ' ಗಮನಕ್ಕೆ ಬಂದಿದೆ.
- ಇಂತಹ ಯೋಜನೆಗಳಲ್ಲಿ ಗ್ರಾಹಕರ ಹಿತಾಸಕ್ತಿ ರಕ್ಷಿಸುವ ಯಾವುದೇ ಉದ್ದೇಶ ಇಲ್ಲ. ಆದ್ದರಿಂದ ಇದರ ಮೇಲೆ ನಿಷೇಧ ಹೇರಲಾಗುತ್ತಿದೆ ಎಂದು 'ಆರ್‌ಬಿಐ' ಸ್ಪಷ್ಟಪಡಿಸಿದೆ.

**ಡೆಬಿಟ್ ಕಾರ್ಡ್ ಗೆ ಶುಲ್ಕ ಇಲ್ಲ:**

- ಇದೇ ವೇಳೆ, ಗ್ರಾಹಕರು ಸರಕುಗಳನ್ನು ಖರೀ ದಿಸಿ, ಡೆಬಿಟ್ ಕಾರ್ಡ್ ಬಳಸಿ ಪಾವತಿಸಿದರೆ ಅದರ ಮೇಲೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಬಾರದು ಎಂದೂ 'ಆರ್‌ಬಿಐ' ಸ್ಪಷ್ಟ ಸೂಚನೆ ನೀಡಿದೆ.
- ಈ ರೀತಿಯ ಯೋಜನೆಗಳಿರುವುದು ಗ್ರಾಹಕರನ್ನು ಆಕರ್ಷಿಸಲು ಮಾತ್ರ. ಈ ಮೂಲಕ ಹೆಚ್ಚು ಹೆಚ್ಚು ಸರಕುಗಳನ್ನು ಖರೀದಿಸುವಂತೆ ಉತ್ತೇಜಿಸಲಾಗುತ್ತದೆ. ನಂತರ ಸರಕುಗಳು ಮತ್ತು ಮರು ಪಾವತಿ ಅವಧಿ ಆಧರಿಸಿ ಬಡ್ಡಿ ದರ ಮತ್ತು ವಹಿವಾಟು ಪ್ರಕ್ರಿಯೆ ಶುಲ್ಕ ಹೇರಲಾಗುತ್ತದೆ ಎಂದೂ 'ಆರ್‌ಬಿಐ' ಹೇಳಿದೆ.
- ಶೂನ್ಯ ಬಡ್ಡಿದರ ಕ್ರಮ ಅನುಸರಿ ಸುವ ಬದಲು ಬ್ಯಾಂಕುಗಳು, ಸರಕುಗಳಿಗೆ ಮಾರಾಟಗಾರರು ನೀಡುವ ರಿಯಾಯ್ತಿ ಆಧರಿಸಿ ಸಾಲ ನೀಡಬೇಕು. ಎಂದೂ 'ಆರ್‌ಬಿಐ' ಸಲಹೆ ಮಾಡಿದೆ.

- ಶೂನ್ಯ ಬಡ್ಡಿದರ ಕ್ರಮ ಅನುಸರಿಸುವ ಬದಲು ಬ್ಯಾಂಕುಗಳು, ಸರಕುಗಳಿಗೆ ಮಾರಾಟಗಾರರು ನೀಡುವ ರಿಯಾಯ್ತಿ ಆಧರಿಸಿ ಸಾಲ ನೀಡಬೇಕು ಎಂದೂ 'ಆರ್‌ಬಿಐ' ಸಲಹೆ ಮಾಡಿದೆ.

**ಭಾರತೀಯ ಅಂಚೆ ಇಲಾಖೆಯಿಂದ 'ಮೊಬೈಲ್ ಮನಿ ಆರ್ಡರ್' ಸೇವೆ**

ಹಾಲಿ ಚಾಲ್ತಿಯಲ್ಲಿರುವ ಮನಿ ಆರ್ಡರ್ ಸೇವೆಗೆ ಹೈಟೆಕ್ ಸ್ಪರ್ಶ ನೀಡುವಂತಹ 'ಮೊಬೈಲ್ ಮೂಲಕ ಹಣ ವರ್ಗಾವಣೆ ಸೇವೆ'ಯನ್ನು ಭಾರತೀಯ ಅಂಚೆ ಇಲಾಖೆ ಸೆ.27 ರಂದು ರಾಜ್ಯಕ್ಕೆ ಪರಿಚಯಿಸಲು ಮುಂದಾಗಿದೆ. ನೂತನ ಮನಿ ಆರ್ಡರ್ ಸೇವೆಯನ್ನು ಬಿಎಸ್‌ಎನ್‌ಎಲ್ ಸಹಯೋಗದಲ್ಲಿ ಕರ್ನಾಟಕ ವೃತ್ತದಲ್ಲಿ ಚಾಲನೆ ನೀಡಲಿದೆ.

**ಏನಿದು ಸೇವೆ?**

ನೂತನ ಹಣ ವರ್ಗಾವಣೆ ಸೇವೆಯು ದೇಶಾದ್ಯಂತ ಯಾವುದೇ ತೊಂದರೆಯಿಲ್ಲದೆ, ಕಡಿಮೆ ಕಮಿಷನ್ ದರದಲ್ಲಿ, ತ್ವರಿತಗತಿಯಲ್ಲಿ ದೊರೆಯಲಿದ್ದು ಬಳಕೆದಾರ ಸ್ನೇಹಿಯಾಗಿ ಕಾರ್ಯನಿರ್ವಹಿಸಲಿದೆ. ಈ ಸೇವೆಯಲ್ಲಿ ಅಂಚೆ ಇಲಾಖೆ ನೀಡುವ ಮೊಬೈಲ್ ಹ್ಯಾಂಡ್ ಸೆಟ್‌ಗಳನ್ನು ಬಳಸುವುದು ಅನಿವಾರ್ಯವಾಗಿದೆ.

**ಸೇವೆ ಪಡೆಯುವುದು ಹೇಗೆ?**

- ಮೊದಲು ಅಂಚೆ ಕಚೇರಿಗೆ ತೆರಳಿ ಅರ್ಜಿ ತುಂಬಿರಿ ಹಾಗೂ ನಿಗದಿತ ಠೇವಣಿ ಸಲ್ಲಿಸಿ ಮೊಬೈಲ್ ಪಡೆಯಿರಿ.
- ನಂತರ 6 ಸಂಖ್ಯೆಯ ಕೋಡ್ ನೀಡಲಾಗುತ್ತದೆ. ಆ ಕೋಡ್ ಬಳಸಿ ಹಣ ವರ್ಗಾವಣೆ ಮಾಡಬಹುದು.
- ನೀವು ಹಣ ಕಳುಹಿಸುವ ವ್ಯಕ್ತಿ ಬಳಿಯು ಇಂತಹದ್ದೇ ಮೊಬೈಲ್ ಇರುವುದು ಕಡ್ಡಾಯ.
- ಆ ಮೊಬೈಲ್‌ಗೆ ಬಂದ ಸಂದೇಶವನ್ನು ಯಾವುದೇ ಹತ್ತಿರದ ಅಂಚೆ ಕಚೇರಿಗೆ ಹೋಗಿ ತೋರಿಸಿ ಹಣ ಪಡೆಯಬಹುದು.
- ಈ ಸೇವೆಗಾಗಿಯೇ ವಿಶೇಷ ಮೊಬೈಲ್ ವಿನ್ಯಾಸಗೊಳಿಸಲಾಗಿದೆ

**ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರದ ಹೊಸ ನಿಯಮ ಅಕ್ಟೋಬರ್ 1 ರಿಂದ ಜಾರಿ**

ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರ (ಐಆರ್ ಡಿಎ)ದ ಹೊಸ ನಿಯಮದ ಪ್ರಕಾರ ಅಕ್ಟೋಬರ್ 1 ರಿಂದ ಪಡೆದುಕೊಳ್ಳುವ ಎಲ್ಲಾ ಜೀವ ವಿಮಾ ಯೋಜನಗೆಗಳಿಗೆ ಶೇ.3.09 ರಷ್ಟು ಸೇವಾ ತೆರಿಗೆ ತೆರಬೇಕಾಗಿದೆ. ಇಷ್ಟು ಮಾತ್ರವಲ್ಲ, ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಯ 45 ವಿಮಾ ಯೋಜನೆಗಳು ರದ್ದಾಗಲಿವೆ ಮತ್ತು ಹೊಸ ರೂಪದಲ್ಲಿ ಜಾರಿಯಾಗಲಿವೆ. ಸೇವಾ ತೆರಿಗೆಯನ್ನು ಎಲ್‌ಐಸಿ ಮತ್ತು ಖಾಸಗಿ ಕಂಪನಿಗಳ ವಿಮೆ ಯೋಜನೆಗಳಿಗೆ ಕೊಡಲೇಬೇಕು. ವಿಮೆ ಖರೀದಿ ಮತ್ತು ಮೆಚ್ಯುರಿಟಿ ವೇಳೆ ತೆರಿಗೆ ಪಾವತಿ ಮಾಡಲೇಬೇಕು.

**ಎರಡು ವರ್ಷ ಹಳೆಯದ್ದು:**

ವಿಮಾ ಕ್ಷೇತ್ರಕ್ಕೆ ಸೇವಾ ತೆರಿಗೆ ವಿಧಿಸಬೇಕು ಎಂಬ ವಿಚಾರ ಎರಡು ವರ್ಷ ಹಳೆಯದ್ದು. ವಿಮಾ ಏಜೆಂಟರ ಮತ್ತು ಇತರರ ವಿರೋಧದ ಹಿನ್ನೆಲೆಯಲ್ಲಿ ವಿಚಾರ ಅಂತಿಮವಾಗಿರಲಿಲ್ಲ. ಕೇಂದ್ರ ಸಂಪುಟದಲ್ಲಿ ಮತ್ತು ಸಂಸತ್‌ನಲ್ಲಿ ಈ ಬಗ್ಗೆ ಚರ್ಚೆ ನಡೆದಿತ್ತು.

ವಿಮಾ ಉತ್ಪನ್ನಗಳಿಗೆ ಶೇ.3.09ರಷ್ಟು ಸೇವಾ ತೆರಿಗೆ ನೀಡುವ ಬಗ್ಗೆ ನಿರ್ಧಾರಕ್ಕೆ ಬರಲಾಗಿತ್ತು. ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರ ಈ ವರ್ಷದ ಫೆಬ್ರವರಿಯಲ್ಲಿ ಗೆಜೆಟ್ ಪ್ರಕಟಣೆ ಹೊರಡಿಸಿತ್ತು.

**ಯಾವುದಕ್ಕೆ ಅನ್ವಯ?**

ಹಳೆಯ ಪಾಲಿಸಿಗಳಿಗೆ ಅಂದರೆ, ವಿಮೆಗಳಿಗೆ ಈ ನಿಯಮ ಅನ್ವಯ ಆಗುವುದಿಲ್ಲ. ಹೊಸತಾಗಿ ಯಾರು ವಿಮೆ ಹೊಂದಲು ಬಯಸುತ್ತಾರೋ ಅವರಿಗೆ ಅದು ಅನ್ವಯ ಆಗುತ್ತದೆ.

**ಲೆಕ್ಕಾಚಾರ ಹೇಗೆ?**

ಪಾಲಿಸಿ ಖರೀದಿಸಿದಾಗ ಮತ್ತು ಮೆಚ್ಯುರಿಟಿ ಹೊಂದಿದಾಗ ಶೇ.3.09ರಷ್ಟು ಸೇವಾ ತೆರಿಗೆ ನೀಡಬೇಕಾಗುತ್ತದೆ. ಉದಾಹರಣೆಗೆ ಒಂದು ಲಕ್ಷ ಮೌಲ್ಯದ ವಿಮೆ ಮಾಡುವ ವೇಳೆ ಶೇ.3.09ರಷ್ಟು ಅಂದರೆ 3,090 ರು. ಅನ್ನು ತೆರಿಗೆಯಾಗಿ ಕೊಡಬೇಕು. ಹಾಗೆಯೇ ಅದೇ ವಿಮೆ ಮೆಚ್ಯುರಿಟಿಗೆ ಬಂದಾಗ ಅಷ್ಟೇ ಮೊತ್ತವನ್ನು ಸೇವಾ ತೆರಿಗೆಯಾಗಿ ನೀಡಬೇಕು.

**ಗ್ರಾಹಕರಿಗೆ ಹೊರೆಯೇ?**

- ವಿಮೆ ಖರೀದಿ ಮತ್ತು ಅದನ್ನು ಮತ್ತೆ ಹಿಂಪಡೆಯುವ ವೇಳೆ ತೆರಿಗೆ ವಿಧಿಸುವ ಕೇಂದ್ರ ಸರ್ಕಾರದ ಪ್ರಸ್ತಾಪ ಹಲವು ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗುವಂತೆ ಮಾಡಿವೆ.
- ವಿಮೆಗೆ ಸೇವಾ ತೆರಿಗೆ ವಿಧಿಸುವ ಅಗತ್ಯ ಇರಲಿಲ್ಲ. ಇದರಿಂದಾಗಿ ಅನಗತ್ಯ ವೆಚ್ಚವನ್ನು ಪಾಲಿಸಿದಾರನ ಮೇಲೆ ಹೇರಿದಂತಾಗುತ್ತದೆ.
- ಭಾರತೀಯ ಜೀವ ವಿಮಾ ನಿಗಮ ಶೇ.80ರಷ್ಟು ವಹಿವಾಟು ಹೊಂದಿದೆ. ಶೇ.20ರಷ್ಟು ಮಾತ್ರ ಖಾಸಗಿ ಕಂಪನಿಗಳು ಮತ್ತು ಇತರ ವಿಮಾ ಕ್ಷೇತ್ರದಲ್ಲಿ ವ್ಯವಹಾರ ಮಾಡುತ್ತಿವೆ.
- ಎಲ್‌ಐಸಿಯ ಮಾರುಕಟ್ಟೆ ವಶಪಡಿಸಿಕೊಳ್ಳಲು ಕೇಂದ್ರದ ಮೇಲೆ ಪ್ರಭಾವ ಬೀರಿ ಖಾಸಗಿ ಕಂಪನಿಗಳ ಒತ್ತಡದ ಹಿನ್ನೆಲೆಯಲ್ಲಿ ಈ ಕ್ಷೇತ್ರಕ್ಕೆ ತೆರಿಗೆ ವಿಧಿಸಿದೆ.
- ತೆರಿಗೆ ಪ್ರಸ್ತಾಪದಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ವಿಮೆ ಮಾಡಿಸುವವರ ಸಂಖ್ಯೆಯಲ್ಲಿ ಇಳಿಮುಖವಾಗಲಿದೆ. ಗ್ರಾಮೀಣ ಪ್ರದೇಶಗಳಿಗೆ ತೆರಳಿದಾಗ ಸೇವಾ ತೆರಿಗೆ ಇದೆ ಎಂಬ ನೆಪವೊಡ್ಡಿ ವಿಮೆ ಖರೀದಿಸಲು ಬಾರದೆ ಇರಬಹುದು.
- ಪಾಲಿಸಿದಾರರಿಂದ ಸಂಗ್ರಹಿಸಿದ ಮೊತ್ತವನ್ನು ಷೇರುಪೇಟೆಯಲ್ಲಿ ಹೂಡುವುದರಿಂದ ಲಾಭ-ನಷ್ಟ ಎರಡರ ಸಾಧ್ಯತೆಯೂ ಇದೆ.

**ಸರ್ಕಾರಕ್ಕೇನು ಲಾಭ?**

ವಿಮಾ ಉತ್ಪನ್ನಗಳಿಗೆ ತೆರಿಗೆ ವಿಧಿಸುವುದರಿಂದ ಸರ್ಕಾರಕ್ಕೆ ಕೋಟ್ಯಂತರ ರು. ಆದಾಯ ಬರುತ್ತದೆ. ಏಕೆಂದರೆ ವಿದೇಶಿ ಬಂಡವಾಳಗಾರರಿಗೆ ಕೆಂಪು ಹಾಸಿನ ಸ್ವಾಗತ ಕೋರಿರುವ ಸರ್ಕಾರದ ಪ್ರಸ್ತಾವನೆಗೆ ನಿರೀಕ್ಷಿತ ಪ್ರತಿಕ್ರಿಯೆ ಏನೂ ವ್ಯಕ್ತವಾಗಿಲ್ಲ. ಹೀಗಾಗಿ ತೆರಿಗೆಯಿಂದ ಬರುವ ಹಣವನ್ನು ಮೂಲಸೌಕರ್ಯ ಮತ್ತು ಇತರ ಯೋಜನೆಗಳಿಗೆ ಬಳಕೆ ಮಾಡಬಹುದು ಎನ್ನುವುದು ಸರ್ಕಾರದ ಲೆಕ್ಕಾಚಾರ.

**ಯಾಕೆ ಹೀಗೆ?**

ಸದ್ಯ ಇರುವ ನಿಯಮದಲ್ಲಿ ನಿಗದಿತ ಅವಧಿಗಿಂತ ಮೊದಲೇ ಪಾಲಿಸಿಯನ್ನು ಸರಂಡರ್ ಮಾಡಿದಾಗ ಪಾಲಿಸಿದಾರನಿಗೆ ಸಿಗುವ ಮೊತ್ತ ಕಡಿಮೆಯಾಗುತ್ತದೆ. ಹೊಸ ನಿಯಮ ಪ್ರಕಾರ ಇಂಥ ಸಂದರ್ಭದಲ್ಲಿ ಸಿಗುವ ಮೊತ್ತ ಹೆಚ್ಚಾಗಿರುತ್ತದೆ. ವಿಮಾ ಉತ್ಪನ್ನಗಳನ್ನು ಮತ್ತಷ್ಟು ಗ್ರಾಹಕ ಸ್ನೇಹಿಯಾಗಿಸಬೇಕು. ಹೊಸ ನಿಯಮ ಪ್ರಕಾರ ಜೀವ ವಿಮೆಯ ಕನಿಷ್ಠ ಅವಧಿ ಹತ್ತು ವರ್ಷ ಆಗಲಿದೆ. ಪಾಲಿಸಿದಾರ ಆಯ್ಕೆ ಮಾಡಿದ ವಿಮೆಯಂತೆ ಹಾಗೂ ಆತ ಎಷ್ಟು ವರ್ಷ ಕಾಲ ವಿಮೆಯ ಕಂತು ಪಾವತಿಸಿದ್ದಾನೆ ಎಂಬ ಆಧಾರದ ಮೇಲೆ ವಿಮೆ ಸರಂಡರ್ ಮಾಡಿದಾಗ ಬಾಕಿ ಮೊತ್ತ ಸಿಗುತ್ತದೆ. ವಿಮೆ ಅವಧಿ 10 ವರ್ಷ ಮತ್ತು ಅದಕ್ಕಿಂತ ಹೆಚ್ಚಾಗಿದ್ದಾಗ ಪಾಲಿಸಿಯನ್ನು ಸರಂಡರ್ ಮಾಡಬೇಕಾದರೆ ಮೂರು ವರ್ಷಗಳ ಪ್ರೀಮಿಯಂ ಪಾವತಿಸಬೇಕು. ಒಟ್ಟು ಎಷ್ಟು ಪ್ರೀಮಿಯಂ ಪಾವತಿಸಿರುತ್ತೇವೆಯೋ ಅದರ ಶೇ.30ರಷ್ಟು ಮೊತ್ತ ಪಾಲಿಸಿದಾರನಿಗೆ ಸಿಗುತ್ತದೆ.

## ವಿಜ್ಞಾನ-ತಂತ್ರಜ್ಞಾನ

### ಚಂದ್ರನ ಅಧ್ಯಯನಕ್ಕೆ ಮಾನವ ರಹಿತ ನೌಕೆ ಉಡಾಯಿಸಿದ "ನಾಸಾ"

ಚಂದ್ರನ ಮೇಲ್ಮೈ ವಾತಾವರಣವನ್ನು ಇನ್ನಷ್ಟು ಆಳವಾಗಿ ಅಧ್ಯಯನ ನಡೆಸುವ ಸಲುವಾಗಿ ಅಮೆರಿಕಾದ ಬಾಹ್ಯಕಾಶ ಸಂಸ್ಥೆ ನಾಸಾ ವು ಮಾನವರಹಿತ ಗಗನನೌಕೆಯೊಂದನ್ನು ವರ್ಜೀನಿಯಾದಿಂದ ಉಡ್ಡಾಯಿಸಿದೆ.

- "LADEE" ಎಂಬ ಹೆಸರಿನ ಈ ಮಾನವ ರಹಿತ ಗಗನನೌಕೆಯು ಉಡ್ಡಾವಣೆ ವೇಳೆ ಕೆಲವು ತಾಂತ್ರಿಕ ದೋಷ ಅನುಭವಿಸಿತಾದರೂ ಸುರಕ್ಷಿತವಾಗಿ ನಿಗದಿತ ಕಕ್ಷೆಯನ್ನು ತಲುಪಲಿದೆ ಎಂದು ನಾಸಾ ಹೇಳಿದೆ.
- ಚಂದ್ರನ ವಾತಾವರಣವನ್ನು ಅಧ್ಯಯನ ನಡೆಸಲೆಂದೇ ಈ ಗಗನನೌಕೆಯನ್ನು ಉಡಾಯಿಸಲಾಗಿದೆ. ಅಪೋಲೊ ನೌಕೆ ನಂತರ ಚಂದ್ರನ ವಾತಾವರಣ ಅಧ್ಯಯನ ನಡೆಸಲು ನಾಸಾ ಈ ಗಗನನೌಕೆಯನ್ನು ಉಡಾಯಿಸುತ್ತಿರುವುದು ವಿಶೇಷ.
- LADEE (Lunar Atmosphere and Dust Environment Explorer or LADEE) ಗಗನನೌಕೆಯು ಕಾರಿನಷ್ಟು ಗಾತ್ರದಾಗಿದ್ದು, 380 ಕೆ.ಜಿ ತೂಕವಿದೆ. ಅಕ್ಟೋಬರ್ 6 ರ ವೇಳೆಗೆ ಚಂದ್ರನನ್ನು ತಲುಪಲಿದ್ದು, ಆರು ತಿಂಗಳ ಕಾಲ ಚಂದ್ರನ ಮೇಲಿನ ಧೂಳು ಸೇರಿದಂತೆ ವಾತಾವರಣವನ್ನು ಸೂಕ್ಷ್ಮವಾಗಿ ಈ ನೌಕೆ ಅಧ್ಯಯನ ನಡೆಸಲಿದೆ.

### ಛತ್ತೀಸಗರ್ ನಲ್ಲಿ ದೇಶದ ಮೊದಲ ಜಿಯೋ ಥರ್ಮಲ್ ಪವರ್ ಪ್ರಾಜೆಕ್ಟ್

ದೇಶದಲ್ಲೇ ಮೊದಲೆನಿಸಿರುವ ಜಿಯೋ ಥರ್ಮಲ್ (Geo-Thermal (ಭೂಗರ್ಭ ಉಷ್ಣದಿಂದ ತಯಾರಿಸುವ ವಿದ್ಯುತ್)) ಪವರ್ ಪ್ರಾಜೆಕ್ಟ್ ಛತ್ತೀಸಗರ್ ನ ಹೊಸ ಜಿಲ್ಲೆ "ರಾಮನ್ ಗುಂಜ್-ಬಲರಾಂಪುರ" ನ "ತಾತಪಣಿ" ಯಲ್ಲಿ ಸ್ಥಾಪಿಸಲಾಗುತ್ತಿದೆ.

- ತಾತಪಣಿಯಲ್ಲಿ ಬಿಸಿನೀರಿನ ಬುಗ್ಗೆಗಳನ್ನು ಹಬೆ ತಯಾರಿಕೆಗೆ ಬಳಸಿಕೊಳ್ಳಲಾಗುವ ಮೂಲಕ ಜಿಯೋ ಥರ್ಮಲ್ ವಿದ್ಯುತ್ ನ್ನು ಉತ್ಪಾದಿಸಲಾಗುವುದೆಂದು ಛತ್ತೀಸಗರ್ ನ ಮುಖ್ಯಮಂತ್ರಿ ರಮಣ್ ಸಿಂಗ್ ಹೇಳಿದ್ದಾರೆ.
- ಈಗಾಗಲೇ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಶನ್ ನೊಂದಿಗೆ ಛತ್ತೀಸಗರ್ ಸರ್ಕಾರ ಸಹಿ ಹಾಕಿದ್ದು, ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು.

### ವಿಶ್ವದ ಅತ್ಯಂತ ಅಗ್ಗದ ರಾಕೆಟ್ ಅನ್ನು ಯಶಸ್ವಿಯಾಗಿ ಉಡಾಯಿಸಿದ ಜಪಾನ್

ಜಪಾನ್ ಏರೋಸ್ಪೇಸ್ ಎಕ್ಸಪ್ಲೊರೇಶನ್ ಏಜೆನ್ಸಿ (JAXA) ವಿಶ್ವದ ಅತ್ಯಂತ ಅಗ್ಗದ ರಾಕೆಟ್ ಅನ್ನು ಯಶಸ್ವಿಯಾಗಿ ಉಡಾಯಿಸಿತು. ಅಗ್ಗದ ರಾಕೆಟ್ ಎನಿಸಿದ್ದರೂ ದಕ್ಷತೆಯಲ್ಲಿ ಈ ರಾಕೆಟ್ ತನ್ನದೇ ಆದ ಸಾಮರ್ಥ್ಯವನ್ನು ಹೊಂದಿದೆ ಎನ್ನಲಾಗಿದೆ.

- ಎಪ್ಸಿಲಾನ್ (Epsilon) ಹೆಸರಿನ ಈ ರಾಕೆಟ್ ಮೂರು ಹಂತದ್ದಾಗಿದ್ದು, ಘನ ಇಂಧನವನ್ನು ಬಳಸಿಲಾಗಿದೆ.

- ಜಪಾನ್ ದಕ್ಷಿಣ ಪ್ರಾಂತ್ಯದ ಕ್ಯುಶು ದ್ವೀಪ ಪ್ರದೇಶದಿಂದ ಈ ರಾಕೆಟ್ ನ್ನು ನಭಕ್ಕೆ ಕಳುಹಿಸಲಾಯಿತು. ಈ ಮೂಲಕ ರಾಕೆಟ್ ಉಡಾವಣೆ ಬಹುತೇಕ ಯಶಸ್ವಿ ಎನಿಸಿದೆ.
- ಸ್ಪ್ರಿಂಟ್-ಎ (Sprint-A) ಎಂಬ ದೂರದರ್ಶಕವನ್ನು ಈ ರಾಕೆಟ್ ನಲ್ಲಿ ಅಳವಡಿಸಲಾಗಿದೆ. ಇದರಿಂದ ಇತರೆ ಗ್ರಹಗಳ ವೀಕ್ಷಣೆಯನ್ನು ಮಾಡಬಹುದು.
- ಈ ರಾಕೆಟ್ ನ ವೆಚ್ಚ $ 40 ಮಿಲಿಯನ್. ಕೇವಲ ಒಂದೇ ಲ್ಯಾಪ್ ಟಾಪ್ ನಿಂದ ಇದನ್ನು ನಿಯಂತ್ರಿಸಬಹುದು.

## ಮಂಗಳನ ಮೇಲೆ ಸ್ವತಂತ್ರಯಾನ ಆರಂಭಿಸಿದ 'ಕ್ಯೂರಿಯಾಸಿಟಿ ರೋವರ್'

ಮಂಗಳ ಗ್ರಹದ ಮೇಲ್ಮೈ ಅಧ್ಯಯನಕ್ಕಾಗಿ ನಾಸಾ ಕಳುಹಿಸಿರುವ `ಕ್ಯೂರಿಯಾಸಿಟಿ' ರೋವರ್ ಮೊದಲ ಬಾರಿಗೆ ಕೆಂಪು ಗ್ರಹದ ಮೇಲೆ ಸ್ವತಂತ್ರ ಯಾನ ಆರಂಭಿಸಿದೆ. ಕೆಂಪು ಗ್ರಹದ ಮೇಲೆ ಸುರಕ್ಷಿತ ಯಾನವನ್ನು ಕೈಗೊಳ್ಳುವುದರ ಬಗ್ಗೆ ಸ್ವತಂತ್ರ ತೀರ್ಮಾನವನ್ನು ಸ್ವತಃ ರೋವರ್ ತೆಗೆದುಕೊಳ್ಳಲಿದೆ.

**ಉದ್ದೇಶವೇನು?**

- ಮಂಗಳದ ಮೇಲೆ ಇನ್ನಷ್ಟೇ ಪ್ರಯಾಣ ಕಂಡುಕೊಳ್ಳಬೇಕಾದ ಮಾರ್ಗದತ್ತ ಇದು ತೆರಳಿದೆ. ಇದರಿಂದಾಗಿ ಶತಮಾನಗಳ ಹಿಂದೆ ಮಂಗಳನ ಪರಿಸರದಲ್ಲಿ ಉಂಟಾದ ಬದಲಾವಣೆ ಸೇರಿದಂತೆ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲಲಿದೆ ಎಂದು ನಾಸಾ ತಿಳಿಸಿದೆ.
- ಕೆಂಪು ಗ್ರಹದ ಮೇಲೆ ಈಗಲೂ ಕ್ರಿಯಾಶೀಲವಾಗಿರುವ ನಾಸಾದ ರೋವರ್ `ಅಪರ್ಚ್ಯುನಿಟಿ'ಗೆ ಅಳವಡಿಸಿದ ತಂತ್ರಾಂಶವನ್ನೆ ಗಾತ್ರದಲ್ಲಿ ಬೃಹತ್ತಾಗಿರುವ ಮತ್ತು ಅಷ್ಟೇ ಸೂಕ್ಷ್ಮವಾಗಿರುವ `ಕ್ಯೂರಿಯಾಸಿಟಿ' ರೋವರ್‌ಗೆ ಎಂಜಿನಿಯರ್‌ಗಳು ಅಳವಡಿಸಿಕೊಂಡಿದ್ದಾರೆ.
- ಸ್ವತಂತ್ರವಾಗಿ ಸುರಕ್ಷಿತ ಯಾನ ಕೈಗೊಳ್ಳುವುದರ ಜೊತೆಗೆ ಛಾಯಾಚಿತ್ರಗಳನ್ನು ತೆಗೆದು ಅದರ ಬಗ್ಗೆ ವಿಶ್ಲೇಷಿಸಲಿದೆ.
- ಮನುಷ್ಯ ನಿಯಂತ್ರಣದಿಂದ ಚಲಿಸುವ ರೋವರ್‌ಗಳಷ್ಟೇ ಸುರಕ್ಷಿತವಾಗಿ ಪ್ರಯಾಣ ಮುಂದುವರೆಸಲಿದೆ ಎಂದು ನಾಸಾ ವಿಜ್ಞಾನಿಗಳು ತಿಳಿಸಿದ್ದಾರೆ.
- ಆಗಸ್ಟ್ 27ರಿಂದ `ಕ್ಯೂರಿಯಾಸಿಟಿ' ರೋವರ್ ಯಶಸ್ವಿಯಾಗಿ ಯಾನ ಆರಂಭಿಸಿದೆ. ದುರ್ಗಮ ಸ್ಥಳಗಳಲ್ಲಿ ಸುರಕ್ಷಿತವಾಗಿ ಚಲಿಸುತ್ತಿರುವುದರ ಜೊತೆಗೆ ಅಲ್ಲಿನ ಛಾಯಾಚಿತ್ರಗಳನ್ನು ರವಾನಿಸಿದೆ' ಎಂದು ಕ್ಯಾಲಿಫೋರ್ನಿಯಾ ಪಸೆಡೇನಾ ನಾಸಾ ಕೇಂದ್ರದ ಎಂಜಿನಿಯರ್ ಮಾರ್ಕ್ ಮೈಮೋನ್ ತಿಳಿಸಿದ್ದಾರೆ.

## ನಾಸಾದ ಅತಿ ಚಿಕ್ಕ ಮಾನವರಹಿತ ಬಾಹ್ಯಕಾಶ ನೌಕೆ ಚಂದ್ರನೆಡೆಗೆ ಪಯಣ

ಚಂದ್ರನ ಮೇಲಿನ ವಾತಾವರಣ, ಮಣ್ಣನ್ನು ಅಧ್ಯಯನ ಮಾಡಲಿರುವ ನಾಸಾದ ಅತಿ ಚಿಕ್ಕ ಮಾನವರಹಿತ ಬಾಹ್ಯಾಕಾಶ ನೌಕೆ ಶುಕ್ರವಾರ ವ್ಯಾಲೋಪ್ಸ್ ಐಲ್ಯಾಂಡ್‌ನಿಂದ ಪ್ರಯಾಣ ಆರಂಭಿಸಲಿದೆ. ಇದು ಸದ್ಯಕ್ಕೆ ನಾಸಾ ಹಾಕಿಕೊಂಡಿರುವ ಕೊನೆಯ ಯೋಜನೆ ಎನ್ನಲಾಗಿದೆ. ಹಾಗಾಗಿ ನಾಸಾದ ಮುಂದಿನ ಯೋಜನೆಗಳೇನು ಎಂಬ ಬಗ್ಗೆ ಕುತೂಹಲ ಮೂಡಿದೆ.

**ನೌಕೆಯ ಬಗ್ಗೆ:**

- ಸಣ್ಣ ಕಾರಿನ ಗಾತ್ರದ ಬಾಹ್ಯಾಕಾಶ ನೌಕೆಯು 30 ದಿನಗಳ ಪಯಣದ ಬಳಿಕ ಚಂದ್ರನ ಕಕ್ಷೆ ಸೇರಲಿದೆ.
- ನಂತರದ 30 ದಿನ ಅದರ ಸಲಕರಣೆಗಳ ಪರೀಕ್ಷೆಯಲ್ಲಿ ತೊಡಗಲಿದ್ದು, ಬಳಿಕ 100 ದಿನ ತನ್ನ ವೈಜ್ಞಾನಿಕ ಅಧ್ಯಯನ ಕೈಗೊಳ್ಳಲಿದೆ.
- ಚಂದ್ರನ ವಾತಾವರಣದಲ್ಲಿರುವ ನೀರಿನ ಕಣಗಳು, ಧೂಳಿನ ಕಣಗಳ ಬಗೆಗಿನ ಕುತೂಹಲಕಾರಿ ಮಾಹಿತಿಗಳನ್ನು ಸಂಗ್ರಹಿಸಲಿದೆ.
- ಈ ಬಾಹ್ಯಾಕಾಶ ನೌಕೆಯು ನೀಡುವ ವರದಿಯು ಚಂದ್ರನಲ್ಲಿಗೆ ಮಾನವನನ್ನು ಕಳುಹಿಸುವ ಮುಂದಿನ ಯೋಜನೆಗಳಿಗೆ ಸಹಕಾರಿಯಾಗಲಿದೆ.
- ಇದೇ ವೇಳೆ, ಚಂದ್ರನಲ್ಲಿಗೆ ಮಾನವನನ್ನು ಕಳುಹಿಸುವಂತೆ ನಾಸಾದ ಮೇಲೆ ಅಮೆರಿಕ ಕಾಂಗ್ರೆಸ್‌ನ ಕೆಲವು ಸದಸ್ಯರು ಒತ್ತಡ ಹೇರುತ್ತಲೇ ಇದ್ದಾರೆ. ಆದರೆ, ನಾಸಾ ವಿಜ್ಞಾನಿಗಳು ಮಾತ್ರ ಮಾನವರಹಿತ ಬಾಹ್ಯಾಕಾಶ ನೌಕೆಯನ್ನೇ ಚಂದ್ರನಲ್ಲಿಗೆ ಕಳುಹಿಸುವುದನ್ನು ಮುಂದುವರಿಸಿದೆ.

## ಭಾರತದ ಮಹತ್ವಾಕಾಂಕ್ಷಿ ಮಂಗಳಯಾನ ಯೋಜನೆ ಅಕ್ಟೋಬರ್ ನಲ್ಲಿ:

ಭಾರತದ ಮಹತ್ವಾಕಾಂಕ್ಷಿ ಮಂಗಳಯಾನ ಯೋಜನೆ ಸಾಕಾರಗೊಳ್ಳುವ ದಿನ ಸಮೀಪಿಸುತ್ತಿದೆ. ಅಂಗಾರಕನ ಅಂಗಳದಲ್ಲಿ ಜೀವ ಕಣ ಪತ್ತೆಗೆ ಆದ್ಯತೆ ನೀಡಲಿರುವ ಯೋಜನೆ ಹಲವು ಪ್ರಥಮಗಳಿಗೆ ಸಾಕ್ಷಿಯಾಗಲಿದೆ. ಉಪಗ್ರಹ ಹೊತ್ತೊಯ್ಯುವ ಬಾಹ್ಯಾಕಾಶ ನೌಕೆಯ ನಿರ್ಮಾಣ ಪೂರ್ಣಗೊಂಡಿದ್ದು, ತಪಾಸಣೆ ಕಾರ್ಯ ಅಂತಿಮ ಹಂತದಲ್ಲಿದೆ. ಹವಾಮಾನ ಆಧರಿಸಿ ಅ.21 ರಿಂದ ನ.19 ರ ವರೆಗಿನ ಸೂಕ್ತ ದಿನದಂದು ಉಡಾವಣೆ ಮಾಡಲಾಗುತ್ತದೆ. ನೌಕೆ ಒಯ್ಯುವ ಪಿಎಸ್‌ಎಲ್‌ವಿ-ಸಿ25, ವಾಹಕ ಉಡಾವಣೆ ಸ್ಥಳವಾದ ಶ್ರೀಹರಿಕೋಟಾದಿಂದ ನಭಕ್ಕೆ ಹಾರಲು ಸಜ್ಜಾಗಿ ನಿಂತಿದೆ. ಉಪಗ್ರಹದ ಕೊನೆ ಕ್ಷಣದ ತಪಾಸಣೆ ಬೆಂಗಳೂರಿನ ಇಸ್ರೋದ ಐಸೆಕ್ ಕೇಂದ್ರದಲ್ಲಿ ನಡೆದಿದ್ದು, ಈ ತಿಂಗಳ 27ರಂದು ಶ್ರೀಹರಿಕೋಟಾಗೆ ರವಾನೆಯಾಗಲಿದೆಯೋಜನೆಗೆ ಒಪ್ಪಿಗೆ ದೊರೆತ ಬಳಿಕ ಕೇವಲ

**ಮಂಗಳಯಾನ ಯೋಜನೆ ಬಗ್ಗೆ:**

ಒಂದೇ ವರ್ಷದಲ್ಲಿ ಉಪಗ್ರಹ ಸಹಿತ ಎಲ್ಲ ಅಗತ್ಯ ಪರಿಕರಗಳು ಸಿದ್ಧಗೊಂಡಿವೆ. ವಿಶ್ವದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ಮಂಗಳಯಾನ ಯೋಜನೆ ರೂಪಿಸಿರುವ ಹೆಗ್ಗಳಿಕೆಗೆ ಪಾತ್ರವಾಗಿರುವ 'ಇಸ್ರೊ' ವಿಜ್ಞಾನಿಗಳು ದೇಶದ ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲುಗಲ್ಲು ಸಾಧಿಸಲು ತುದಿಗಾಲ ಮೇಲೆ ನಿಂತಿದ್ದಾರೆ. ಮಂಗಳಯಾನ ಯೋಜನೆಯ ನಿರ್ದೇಶಕ ಡಾ.ಎಸ್.ಅರುಣನ್ ಮಾತನಾಡಿ "ಉಪಗ್ರಹದಲ್ಲಿ ತಪ್ಪು ನುಸುಳಿದರೆ ಅದನ್ನು ಸ್ವತಂತ್ರವಾಗಿ ಸರಿಪಡಿಸುವ ದೋಷ ಪತ್ತೆ ಹಾಗೂ ಮಾರ್ಗ ನಿರೂಪಣೆ ವಿನ್ಯಾಸಕ್ಕೆ ಒತ್ತು ನೀಡಲಾಗಿದೆ. ರಾಕೆಟ್‌ನಿಂದ ಬೇರ್ಪಟ್ಟ ಬಳಿಕ ಉಪಗ್ರಹ ಹೆಚ್ಚಿನ ಕಾಲ ಬಾಹ್ಯಾಕಾಶದಲ್ಲಿ ಸಂಚರಿಸಲು ಸ್ವಂತ ಬಲದ 'ಲಿಕ್ವಿಡ್ ಮೋಟಾರ್' ಬಳಸಿಕೊಳ್ಳುವ ತಂತ್ರಜ್ಞಾನವನ್ನು ವಿಶ್ವದಲ್ಲೆ ಮೊದಲ ಬಾರಿಗೆ ಬಳಸಿಕೊಳ್ಳಲಾಗಿದೆ," ಎಂದರು. ಮಂಗಳಯಾನವನ್ನು ಇತರೆ ದೇಶಗಳು ಕೈಗೊಂಡಿದ್ದರೂ ಭಾರತದ ಯೋಜನೆ ವಿಶೇಷವಾಗಿದೆ. ನಾಸಾ ಸಂಸ್ಥೆಯ ಸಹಕಾರ ಪಡೆದಿದ್ದರೂ, ದೇಶಕ್ಕೆ ಅಗತ್ಯ ಇರುವ ಹಾಗೂ ಸ್ವತಂತ್ರ ಪರಿಕಲ್ಪನೆಗೆ ಆದ್ಯತೆ ದೊರೆತಿದೆ. ಹಾಲಿ ಲಭ್ಯವಿರುವ ಉಪಕರಣದ ಜತೆಗೆ ದೇಶಿ ವಿನ್ಯಾಸ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡಲಾಗಿದೆ. ಉಪಗ್ರಹ ನಿಯಂತ್ರಣಕ್ಕೆ ಬ್ಯಾಳಾಲು ಕೇಂದ್ರದ ಜತೆ ವಿಶ್ವದ ಇನ್ನಿತರ ಕೇಂದ್ರಗಳ ಸಹಕಾರ ಪಡೆಯಲಾಗುವುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

**ವಿಜ್ಞಾನಿಗಳಿಗೆ ಇದು ಸವಾಲು:**

ಉಪಗ್ರಹ ರೂಪಿಸುವಲ್ಲಿ ಇಸ್ರೊ ಸಿಬ್ಬಂದಿ ಹಗಲು-ರಾತ್ರಿ ಕಾರ್ಯ ನಿರ್ವಹಿಸಿದ್ದಾರೆ. ನಾನಾ ಹಂತಗಳಲ್ಲಿ ವಿಜ್ಞಾನಿಗಳು ಕಾರ್ಯನಿರ್ವಹಿಸಿ ಯೋಜನೆಯನ್ನು ಯಶಸ್ವಿ ಹಂತಕ್ಕೆ ತಂದಿದ್ದಾರೆ. ಮಂಗಳಯಾನ ಸವಾಲಿನ ಯೋಜನೆ ಆಗಿದ್ದು, ಇದು ಸಫಲತೆ ಕಂಡಲ್ಲಿ ದೇಶದ ಇತರ ಬಾಹ್ಯಾಕಾಶ ಕಾರ್ಯ್ಯಕ್ರಮಗಳಿಗೆ ಹೆಚ್ಚಿನ ಬಲ ಬರಲಿದೆ.

**ಅಂಗಾರಕ ಪ್ರಯೋಗ**

ಬಾಹ್ಯಾಕಾಶ ನೌಕೆ ಮೂಲಕ ಹಾರಿಬಿಡುವ ಉಪಗ್ರಹವು ಭೂಮಿಯ ಆಚೆ 372 ಕಿ.ಮೀ. ದೂರದಲ್ಲಿ ಸಂಚರಿಸುತ್ತ ಮಂಗಳನತ್ತ ಹೆಜ್ಜೆ ಹಾಕಲಿದೆ. ಮಂಗಳ ಕಕ್ಷೆಯಲ್ಲಿ 272 ಕಿ.ಮೀ.ನಿಂದ 80 ಸಾವಿರ ಕಿ.ಮೀ. ಅಂತರದಲ್ಲಿ ಪರಿಭ್ರಮಿಸುವ ಉಪಗ್ರಹ ತನ್ನ ಮೊದಲ ಪೂರ್ಣ ಪ್ರಮಾಣದ ಚಿತ್ರವನ್ನು 9 ತಿಂಗಳ ಬಳಿಕ(ಸೆ.21, 2014) ಭೂಮಿಗೆ ರವಾನಿಸಲಿದೆ. ಉಪಗ್ರಹದ ಕನಿಷ್ಠ ಆಯುಷ್ಯ 6 ತಿಂಗಳಾಗಿದ್ದರೂ , ಹೆಚ್ಚಿನ ಸಮಯ ಕಾರ್ಯ್ಯನಿರ್ವಹಿಸುವ ಕಾರ್ಯಕ್ಷಮತೆ ಹೊಂದುವಲ್ಲಿ ಇಸ್ರೊ ವಿಜ್ಞಾನಿಗಳು ಗಮನ ಹರಿಸಿದ್ದಾರೆ.

**450 ಕೋಟಿ ರೂ. ಯೋಜನೆ:**

ಈ ಯೋಜನೆಯ ಒಟ್ಟು ವೆಚ್ಚ 450 ಕೋಟಿ ರೂಪಾಯಿ. ಈ ಪೈಕಿ 150 ಕೋಟಿ ರೂ. ಬಾಹ್ಯಾಕಾಶ ನೌಕೆ ನಿರ್ಮಾಣಕ್ಕೆ, 110 ಕೋಟಿ ರೂ. ಉಡಾವಣಾ ವಾಹಕಕ್ಕೆ ಬಳಸಿಕೊಳ್ಳಲಾಗಿದೆ. ಉಳಿದ ಹಣ ತಂತ್ರಜ್ಞಾನ, ಭೂ ಸ್ಥಿರ ಕಕ್ಷೆ ಹಾಗೂ ನೌಕೆ ಹಾದುಹೋಗುವ ಪಥ ಪತ್ತೆ ಇತ್ಯಾದಿ ಕಾರ್ಯ್ಯಕ್ಕೆ ಬಳಕೆಯಾಗಿದೆ. ಅನ್ಯ ದೇಶಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ ವೆಚ್ಚದ ಯೋಜನೆ

**ಐದು ಉಪಕರಣ ಅಳವಡಿಕೆ**

ಅಂಗಾರಕನ ಅಂಗಳದಲ್ಲಿ ಜೀವ ಕಣದ ಕುರಿತು ಖಚಿತಪಡಿಸಿಕೊಳ್ಳಲು ನೆರವಾಗುವ ಮಿಥೇನ್ ಇರುವಿಕೆ ಪತ್ತೆಗೆ ಎಂಎಸ್ಎಂ ಹೆಸರಿನ ವೈಜ್ಞಾನಿಕ ಉಪಕರಣವನ್ನು ಉಪಗ್ರಹದಲ್ಲಿ ಪ್ರಧಾನವಾಗಿ ಅಳವಡಿಸಲಾಗಿದೆ. ಮಂಗಳದ ಮೇಲ್ಮೈ ರಚನೆ ಸೆರೆ ಹಿಡಿಯಲು ಕ್ಯಾಮೆರಾ(ಎಂಸಿಸಿ), ಟಿಐಎಸ್, ಎಲ್ಎಪಿ ಹಾಗೂ ಎಂಇಎನ್‌ಸಿಎ ಉಪಕರಣ ಕೂಡ ಉಪಗ್ರಹ ಹೊಂದಿದ್ದು, ಇವುಗಳ ಒಟ್ಟು ತೂಕ 15 ಕೆ.ಜಿ.

**ಉಪಗ್ರಹದ ತೂಕ 1340 ಕೆ.ಜಿ.**

ಮಂಗಳಯಾನಕ್ಕೆ ಸಿದ್ಧಗೊಂಡಿರುವ ಉಪಗ್ರಹದ ತೂಕ 1,340 ಕೆ.ಜಿ. ಇದು ಮಂಗಳನ ಕಕ್ಷೆಗೆ ಸೇರಿದಾಗ 582 ಕೆ.ಜಿ.ಗೆ ಕುಗ್ಗಲಿದೆ. ಮಂಗಳನ ಮೇಲ್ಮೈನಿಂದ ಸಂಕೇತಗಳು ಭೂಮಿಗೆ ತಲುಪಲು 20 ನಿಮಿಷ(ಚಂದ್ರಯಾನ ಯೋಜನೆಯಲ್ಲಿ ಇದು ಮೂರು ಸೆಕೆಂಡ್ ಆಗಿತ್ತು) ಬೇಕು. ಉಪಗ್ರಹ ಪ್ರತಿ ಮೂರು ದಿನಕ್ಕೊಮ್ಮೆ ಮಂಗಳನ ಸುತ್ತ ಪರಿಭ್ರಮಿಸುತ್ತದೆ.

ಸ್ವಂತ ನಿರ್ಧಾರ ತೆಗೆದುಕೊಳ್ಳುವ ರೋವರ್ ಗಳನ್ನು ಆವಿಷ್ಕರಿಸಿದ ವಿಜ್ಞಾನಿಗಳು

ಇತರೆ ಗ್ರಹಗಳಿಗೆ ಹೋಗುವ ರೋವರ್‌ಗಳು ಇನ್ನು ಮುಂದೆ ತಮ್ಮ ನಿರ್ಧಾರವನ್ನು ತಾವೇ ತೆಗೆದುಕೊಂಡು ಬೇರೆ ಗ್ರಹಗಳಲ್ಲಿ ಪರ್ಯಟನೆ ಮಾಡಲಿವೆ. ಅಲ್ಲದೇ, ಭೂಮಿಯಿಂದ ಯಾವುದೇ ಸೂಚನೆಯನ್ನು ಪಡೆಯದೆ ಅಲ್ಲಿನ ಚಿತ್ರಗಳನ್ನು ತೆಗೆದು, ಅವುಗಳನ್ನು ವೈಜ್ಞಾನಿಕ ವಿಶ್ಲೇಷಣೆಗೂ ಒಳಪಡಿಸಿ ಮಾಹಿತಿ ನೀಡಲಿವೆ. ಇದು ನಾಸಾ ಆವಿಷ್ಕರಿಸಿದ ನೂತನ ಸ್ಮಾರ್ಟ್ ಕ್ಯಾಮೆರಾ ವ್ಯವಸ್ಥೆಯಿಂದ ಸಾಧ್ಯ ವಾಗಲಿದೆ ಎನ್ನುವುದು ಸಂಶೋಧಕರ ಅಭಿಪ್ರಾಯ.

**ಆವಿಷ್ಕಾರ:**

ನೂತನ ರೋವರ್‌ಗಳು ಬೇರೆ ಗ್ರಹಗಳಿಗೆ ಹೋದ ತಕ್ಷಣ ಅಲ್ಲಿನ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳುವುದಲ್ಲದೇ, ಅವುಗಳ ಅರ್ಥವೇನು ಎಂಬುದನ್ನೂ ವಿವರಿಸಲಿವೆ ಎಂದು ಸಂಶೋಧಕರು ತಿಳಿಸಿದ್ದಾರೆ. ಕ್ಯುರಿಯಾಸಿಟಿ ರೋವರ್ ಸದ್ಯ ಮಂಗಳಗ್ರಹದಲ್ಲಿ ಉತ್ತಮ ಕೆಲಸ ನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ಜಗತ್ತಿನ ಇತರ ಕಡೆಗಳಲ್ಲಿ ಮಾಹಿತಿ ಕಲೆ ಹಾಕಲು ರೋವರ್‌ಗಳಿಗೆ ಇನ್ನೂ ಮುಂದುವರಿದ ತಂತ್ರಜ್ಞಾನದ ಅವಶ್ಯಕತೆ ಇದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಭವಿಷ್ಯದಲ್ಲಿ ರೋವರ್ ಮತ್ತು ಅಂತರಿಕ್ಷ ಉಪಗ್ರಹ ಗಳು ಭೂಮಿಯಿಂದ ಸೂಚನೆ ಪಡೆ ಯುವುದಕ್ಕೆ ಕಡಿಮೆ ಸಮಯ ಹಿಡಿಯ ಲಿದೆ ಎಂದು ಹಿರಿಯ ಸಂಶೋಧಕಿ ಕಿರಿ ವಾಗ್‌ಸ್ಟಫ್ ಮತ್ತು ಅವರ ಸಹೋದ್ಯೋಗಿಗಳು ತಿಳಿಸಿದ್ದಾರೆ.

**ನೂತನ ರೋವರ್ ವ್ಯವಸ್ಥೆ:**

- ಎರಡು ಮಸೂರ (ಲೆನ್ಸ್) ಒಳ ಗೊಂಡ ಆಧುನಿಕ ಕ್ಯಾಮೆರಾವನ್ನು ಆವಿಷ್ಕರಿಸಿದ್ದಾರೆ. ಇದಕ್ಕೆ ಟೆಕ್ಸ್‌ಚ್ಯೂರ್ ಕ್ಯಾಮ್ ಎಂದು ಹೆಸರಿಟ್ಟಿದ್ದಾರೆ.
- ಕ್ಯುರಿಯಾಸಿಟಿ ಮತ್ತು ಇತರೆ ರೋವರ್ ಈಗಾಗಲೇ ಚಿತ್ರಗಳನ್ನು ತೆಗೆಯುತ್ತಿವೆ. ಆದರೆ ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲು ಭೂಮಿಗೆ ಕಳುಹಿಸಲೇಬೇಕು. ಇದಕ್ಕೆ ಕೆಲ ಸಮಯ ಬೇಕಾಗುತ್ತಿದೆ. ಅಲ್ಲದೇ, ಅದಕ್ಕೆ ಕೆಲ ಅಡೆತಡೆಗಳೂ ಇವೆ.
- ಉದ್ದೇಶಿತ ಟೆಕ್ಸ್‌ಚ್ಯೂರ್ ಕ್ಯಾಮ್ ಚಿತ್ರದ ವಿಶ್ಲೇಷಣೆಯನ್ನು ತಾನೇ ಮಾಡಿ, ಭೂಮಿಗೆ ಮಾಹಿತಿ ಕಳುಹಿಸಲಿದೆ ಎಂದು ಸಂಶೋಧಕರು ತಿಳಿಸಿದ್ದಾರೆ. ಬೇರೆ ಗ್ರಹದಲ್ಲಿರುವ ರೋವರ್ ಗಳಿಗೆ ವಿಜ್ಞಾನಿಗಳು ಪ್ರತಿನಿತ್ಯ ದಿನದ ಸೂಚಿಗಳನ್ನು ಅವುಗಳಿಗೆ ರವಾನಿಸುತ್ತಿದ್ದರು.
- ನಂತರ ಅವುಗಳು ಸ್ವತಂತ್ರ್ಯವಾಗಿ ಅನೇಕ ಮೀಟರ್‌ಗಳ ದೂರ ಪರ್ಯಟನೆ ಮಾಡಿ ಚಿತ್ರಗಳನ್ನು ತೆಗೆಯುತ್ತಿ ದ್ದವು, ಮಣ್ಣಿನ ಮಾದರಿ ಗಾಗಿ ಭೂಮಿಯನ್ನು ಅಗೆಯುತ್ತಿದ್ದವು ನಂತರ ಮುಂದೆ ಸಾಗುತ್ತಿದ್ದವು.
- ಇತರೆ ಗ್ರಹದಲ್ಲಿರುವ ರೋವರ್ ಗಳಿಗೆ ಭೂಮಿಯಿಂದ ಮಾಹಿತಿ ರವಾನಿಸಲು ಸುಮಾರು 20 ನಿಮಿಷ ಬೇಕಾಗುತ್ತಿತ್ತು. ಅದರಿಂದ ಉತ್ತರ ಪಡೆಯಲು 20 ನಿಮಿಷ ಕಾಯ ಬೇಕಾಗಿತ್ತು. ಈ ಸಮಯದಲ್ಲಿ ರೋವರ್ ಅನ್ನು ನಿಯಂತ್ರಿಸುವುದೇ ಅಸಾಧ್ಯವಾಗುತ್ತಿತ್ತು.
- ಇತರೆ ಗ್ರಹಗಳ ಮೇಲಿರುವ ರೋವರ್‌ಗೆ ಮಾಹಿತಿ ಕಳುಹಿಸಲು, ಪಡೆದುಕೊಳ್ಳಲು ಒಂದು ಕಕ್ಷೆಯಲ್ಲಿ ನಿಲ್ಲಿಸಿ ಉಪಗ್ರಹದ ಸಹಾಯದಿಂದ ಸಂಪರ್ಕಿಸಲಾಗುತ್ತಿತ್ತು. ಇದಕ್ಕಾಗಿ ಕೆಲ ಸಮಯ ಕಳೆಯಲಾಗುತ್ತಿತ್ತು. ಮಂಗಳ ಗ್ರಹದ ಮೇಲಿರುವ ಕ್ಯುರಿಯಾಸಿಟಿ ರೋವರ್ ಸಹ ಇದೇ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ಇದರಿಂದ ಚಿತ್ರಗಳನ್ನು ಪಡೆದು ಕೊಳ್ಳಲು ಕೆಲ ಅಡೆತಡೆಗಳಿವೆ.

- ವಿಜ್ಞಾನಿಗಳ ನಿರ್ದೇಶನವಿಲ್ಲದೇ ರೋವರ್ ಇತರೆ ಗ್ರಹದಲ್ಲಿರುವ ವಿಶೇಷ ವಿಷಯದ ಬಗ್ಗೆ ಗ್ರಹಿಸಿಕೊಂಡಲ್ಲಿ ಅದು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಅನೇಕ ಚಿತ್ರಗಳನ್ನು ತೆಗೆದು ಕಳುಹಿಸಕೊಡಲಿದೆ. ಇದರಿಂದ ವಿಜ್ಞಾನಿಗಳು ಊಹಿಸಿದಕ್ಕಿಂತಲೂ ಹೆಚ್ಚಿನ ಮಾಹಿತಿಯನ್ನು ರೋವರ್ ನಿಂದ ತಿಳಿದುಕೊಳ್ಳಬಹುದಾಗಿದೆ

**ಎಚ್.ಐ.ವಿ. ನಿರ್ಮೂಲನೆಗೆ ಲಸಿಕೆ ಅಭಿವೃದ್ಧಿಪಡಿಸಿರುವ ವಿಜ್ಞಾನಿಗಳು**

ಎಚ್ಐವಿ ನಿರ್ಮೂಲನೆಗೆ ನೂತನ ಏಡ್ಸ್ ಲಸಿಕೆ ಅಭಿವೃದ್ಧಿ ಪಡಿಸಲಾಗಿದ್ದು, ಇದು, ಎಚ್ಐವಿ ಸೋಂಕನ್ನು ದೇಹದಿಂದ ಹೊರಹಾಕುತ್ತದೆ ಎಂದು ವಿಜ್ಞಾನಿಗಳು ಹೇಳಿಕೊಂಡಿದ್ದಾರೆ.

**ಲಸಿಕೆ ಅಭಿವೃದ್ಧಿ ಹೇಗೆ?**

- ಒರೆಗಾನ್ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯ ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದ್ದು, ಸಸ್ತನಿಗಳ ಮೇಲೆ ಪ್ರಯೋಗಿಸಲಾಗಿದೆ. ಈ ಪ್ರಯೋಗದಲ್ಲಿ ಏಡ್ಸ್‌ಗೆ ಕಾರಣವಾಗುವ ವೈರಸ್ ಅನ್ನು ಲಸಿಕೆ ಸಂಪೂರ್ಣವಾಗಿ ನಿಯಂತ್ರಿಸುವಲ್ಲಿ ಯಶಸ್ವಿಯಾಗಿದೆ ಎನ್ನಲಾಗಿದೆ.
- ಮಂಗಗಳಲ್ಲಿ ಏಡ್ಸ್‌ಗೆ ಕಾರಣವಾಗುವ ಎಸ್ಐವಿ (ಸಿಮನ್ ಇಮುನೊಡಿಫಿಷಿಯೆನ್ಸಿ ವೈರಸ್) ಮೇಲೆ ನೂತನ ಲಸಿಕೆ ಪ್ರಯೋಗಿಸಿದಾಗ ಸಿವ್ ವೈರಸ್ ಅನ್ನು ನಿರ್ಮೂಲನೆ ಮಾಡುವಲ್ಲಿ ಲಸಿಕೆ ಯಶಸ್ವಿಯಾಗಿದೆ.
- ಮನುಷ್ಯನಲ್ಲಿ ಕಂಡು ಬರುವ ಎಚ್ಐವಿಯಂತೆಯೇ ಸಸ್ತನಿ (ಮನುಷ್ಯನನ್ನು ಹೊರತುಪಡಿಸಿ)ಗಳಲ್ಲಿ ಎಸ್ಐವಿ ವೈರಸ್ ಏಡ್ಸ್‌ಗೆ ಕಾರಣವಾಗುತ್ತದೆ.
- ಸಸ್ತನಿಗಳಲ್ಲಿ ಯಶಸ್ವಿಯಾಗಿರುವ ನೂತನ ಲಸಿಕೆ ಮನುಷ್ಯನಲ್ಲೂ ಯಶಸ್ವಿಯಾಗುವ ಭರವಸೆಯನ್ನು ವಿಜ್ಞಾನಿಗಳು ಹೊಂದಿದ್ದು, ಶೀಘ್ರದಲ್ಲೇ ಈ ಲಸಿಕೆಯನ್ನು ಮನುಷ್ಯರ ಮೇಲೂ ಪ್ರಯೋಗಿಸಲಾಗುವುದು ಎಂದು ಒರೆಗಾನ್ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯದ ಸಹಾಯಕ ನಿರ್ದೇಶಕ ಲೂಯಿಸ್ ಪಿಕರ್ ತಿಳಿಸಿದ್ದಾರೆ.

**ಅಂತರ ನಕ್ಷತ್ರೀಯ ವಾತಾವರಣಕ್ಕೆ ಪ್ರವೇಶಿಸಿದ ವೋಯಜರ್-1 ಗಗನನೌಕೆ**

ಮೂವತ್ತಾರು ವರ್ಷಗಳ ಹಿಂದೆ ಉಡಾವಣೆ ಮಾಡಲಾಗಿದ್ದ ಅಮೆರಿಕದ ನಾಸಾದ ವೋಯಜರ್-1 ಗಗನನೌಕೆ ಈಗ ಸೂರ್ಯನಿಂದ 1,900 ಕೋಟಿ ಕಿ.ಮೀನಷ್ಟು ದೂರದಲ್ಲಿ ಇದ್ದು, ಅಂತರನಕ್ಷತ್ರೀಯ ವಾತಾವರಣ ಪ್ರವೇಶಿಸಿರುವ ಮೊದಲ ಮಾನವ ನಿರ್ಮಿತ ವ್ಯೋಮನೌಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ವೋಯಜರ್ ಸಂಶೋಧನೆ?**

- ವೋಯಜರ್-1 ಕಳುಹಿಸಿರುವ ಹೊಸ ಮತ್ತು ಅನಿರೀಕ್ಷಿತವಾದ ದತ್ತಾಂಶಗಳು ಒಂದು ವರ್ಷದಿಂದ ಉಪಕರಣವು ಎರಡು ನಕ್ಷತ್ರಗಳ ನಡುವೆ ಕಂಡು ಬರುವ ಪ್ಲಾಸ್ಮಾ ಅಥವಾ ಅಯಾನೀಕೃತ ಅನಿಲದ ಮೂಲಕ ಸಂಚರಿಸಿರುವುದು ತಿಳಿದುಬಂದಿದೆ.
- ಹೊಸ ದತ್ತಾಂಶಗಳಿಂದಾಗಿ ಅಂತರನಕ್ಷತ್ರೀಯ ವಾತಾವರಣದಲ್ಲಿ ಮನುಕುಲದ ಐತಿಹಾಸಿಕ ನೆಗೆತ ಇದು ಎಂದು ನಂಬಿರುವುದಾಗಿ ವೋಯಜರ್ ಯೋಜನೆಯ ವಿಜ್ಞಾನಿ ಎಡ್ ಸ್ಟೋನ್ ತಿಳಿಸಿದ್ದಾರೆ.
- ಸೂರ್ಯನ ಪ್ರಭಾವವಿಲ್ಲದ ಅಂತರನಕ್ಷತ್ರೀಯ ವಾತಾವರಣಕ್ಕೆ ವೋಯಜರ್ ಯಾವಾಗ ಪ್ರವೇಶಿಸಲಿದೆ ಎಂಬ ಬಗ್ಗೆ ವಿಜ್ಞಾನಿಗಳಿಗೆ ಇನ್ನೂ ತಿಳಿದಿಲ್ಲ ಎಂದು ಹೇಳಿದರು.
- ಸದ್ಯ ವೋಯಜರ್ ಸೌರಮಂಡಲದ ಪರಿಧಿಯ ಹೊರಭಾಗದಲ್ಲಿದ್ದು, ಆ ಪ್ರದೇಶದಲ್ಲಿ ಸೂರ್ಯನ ಪ್ರಭಾವ ಇನ್ನೂ ಇದೆ. ವೋಯಜರ್-1 ಗಗನನೌಕೆ ಅಂತರನಕ್ಷತ್ರೀಯ ವಾತಾವರಣಕ್ಕೆ ಪ್ರವೇಶಿಸಿರುವುದನ್ನು ತಿಳಿದು ಸಂತೋಷವಾಯಿತು ಎಂದು ಮತ್ತೋರ್ವ ವಿಜ್ಞಾನಿ ಡಾನ್ ಗನೆರ್ಟ್ ತಿಳಿಸಿದರು.

**<u>ಭಾರತದ ಶಸ್ತ್ರಾಸ್ತ್ರ ಬತ್ತಳಿಕೆಯ ಬಹುದೊಡ್ಡ ಅಸ್ತ್ರವಾಗಲಿರುವ ಅಗ್ನಿ-5 ಯಶಸ್ವಿ ಉಡಾವಣೆ</u>**

5 ಸಾವಿರ ಕಿ.ಮೀ. ವರೆಗೆ ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯಬಲ್ಲ ಅಗ್ನಿ - 5 ಅನ್ನು ಭಾರತ ಎರಡನೇ ಬಾರಿಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ. 2012ರ ಏ. 19 ರಂದು ಯಶಸ್ವಿ ಉಡಾವಣೆ ಮಾಡಿ ಅಮೆರಿಕ, ರಷ್ಯಾ, ಫ್ರಾನ್ಸ್, ಬ್ರಿಟನ್ ಮತ್ತು ಚೀನಾ ಸಾಲಿಗೆ ಸೇರಿದ್ದ ಭಾರತ, ಇದೀಗ ಚಲನೆಯಲ್ಲಿರುವಾಗ ಕ್ಷಿಪಣಿಯನ್ನು ಉಡಾಯಿಸಬಲ್ಲ ಸಾಮರ್ಥ್ಯವನ್ನು ಪರೀಕ್ಷಿಸಿಕೊಂಡಿದೆ.

**ಅಗ್ನಿ-5 ವಿಶೇಷತೆಗಳು:**

- ಚೀನಾ ಮತ್ತು ಯುರೋಪ್‌ನ ಯಾವುದೇ ಪ್ರದೇಶಕ್ಕೂ ಈ ಕ್ಷಿಪಣಿ 1000 ಕೆಜಿ ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯಬಲ್ಲುದಾಗಿದೆ.
- ಈ ಬಾರಿ ಇದನ್ನು ರಸ್ತೆಯಲ್ಲಿ ಚಲಿಸುವ ವಾಹನ ಮತ್ತು ರೈಲಿನಿಂದ ಉಡಾವಣೆ ಮಾಡಲಾಗಿದೆ. ಇದರ ಉದ್ದೇಶ ರೈಲಿನಲ್ಲಿ ರಹಸ್ಯವಾಗಿ ಈ ಕ್ಷಿಪಣಿಯನ್ನು ತೆಗೆದುಕೊಂಡು ಹೋಗಿ ಟಾರ್ಗೆಟ್ ಮೇಲೆ ದಾಳಿ ಮಾಡುವುದಾಗಿದೆ.
- 5 ಸಾವಿರ ಕಿ.ಮೀ. ವರೆಗೆ ಸಾಗುವ ಸಾಮರ್ಥ್ಯವಿರುವ ಈ ಕ್ಷಿಪಣಿ ಭಾರತಕ್ಕೆ ಬಲಾಢ್ಯ ಶಕ್ತಿ ತಂದುಕೊಟ್ಟಿದೆ.
- ಇದು ಬುಲೆಟ್‌ಗಿಂತ ವೇಗವಾಗಿ ಸಾಗುವ ಶಕ್ತಿ ಹೊಂದಿದ್ದು, ಮೊಬೈಲ್ ವಾಹನಗಳ ಮೂಲಕವೂ ಉಡಾವಣೆ ಮಾಡಬಹುದಾಗಿದೆ.
- ಇದನ್ನು ಸ್ಯಾಟ್‌ಲೈಟ್‌ಗಳನ್ನು ಅಂತರಿಕ್ಷ ಕಕ್ಷೆಗೆ ಸೇರಿಸುವುದಕ್ಕೂ ಬಳಸಿಕೊಳ್ಳಬಹುದು.

**ಅಗ್ನಿ ಸರಣಿಯ ಕ್ಷಿಪಣಿಗಳ ದೂರ ಸಾಮರ್ಥ್ಯ :**

**ಅಗ್ನಿ- 1:** 700 ಕಿ.ಮೀ. **ಅಗ್ನಿ- 2:** 2000 ಕಿ.ಮೀ. **ಅಗ್ನಿ-3** ಮತ್ತು **4:** 2500 ರಿಂದ 3500 ಕಿ.ಮೀ. **ಅಗ್ನಿ- 5:** 5000 ಕಿ.ಮೀ. ಅಗ್ನಿ ಸಾಮರ್ಥ್ಯ ಉದ್ದ- 17 ಮೀಟರ್, ಅಗಲ- 2 ಮೀಟರ್, ತೂಕ- 50 ಟನ್, ಅಣ್ವಸ್ತ್ರ- 1 ಟನ್, ಶಬ್ದಕ್ಕಿಂತ ಹೆಚ್ಚು ವೇಗ- 20 ಪಟ್ಟು

**ರೊಬೊಟ್ ಮೆದುಳು ಸೃಷ್ಟಿಸಿದ ಭಾರತೀಯ ಮೂಲದ ವಿಜ್ಞಾನಿ**

ವಿಜ್ಞಾನಿಗಳು ಎಷ್ಟೆಲ್ಲಾ ಕಷ್ಟಪಟ್ಟು ರೊಬೊಟ್ ಅಭಿವೃದ್ಧಿಪಡಿಸಿದ್ದರೂ ಅವು ಹೇಗೆ ಕೆಲಸ ಮಾಡಬೇಕು ಎಂಬುದನ್ನು ನಿಯಂತ್ರಿಸಬೇಕಾಗಿರುವುದು ಮಾನವರೇ. ಆದರೆ ಇನ್ನು ಮುಂದೆ ಆ 'ಜವಾಬ್ದಾರಿ' ತಪ್ಪುವ ಸಾಧ್ಯತೆ ಇದೆ. ಏಕೆಂದರೆ, ಮಾನವರ ಅಲ್ಪ ಉಸ್ತುವಾರಿಯಲ್ಲಿ ರೊಬೊಟ್‌ಗಳು ತನ್ನಿಂತಾನೇ ಕಾರ್ಯ ನಿರ್ವಹಿಸುವಂತಹ ವ್ಯವಸ್ಥೆಯನ್ನು ಭಾರತೀಯ ಮೂಲದ ಅಮೆರಿಕ ವಿಜ್ಞಾನಿಯೊಬ್ಬರು ಸಂಶೋಧಿಸಿದ್ದಾರೆ. ಇದನ್ನು ರೊಬೊಟ್ 'ಮೆದುಳು' ಎಂದೇ ಬಣ್ಣಿಸಲಾಗುತ್ತಿದೆ.

**ಹೊಸ ವ್ಯವಸ್ಥೆ ಏನು?**

- ರೊಬೊಟ್‌ಗಳು ತಮ್ಮಷ್ಟಕ್ಕೆ ತಾವೇ ಯೋಚಿಸಿ, ಕಲಿತು, ಅಳವಡಿಸಿಕೊಂಡು ಮಾನವರ ನಿರ್ವಹಣೆ ಇಲ್ಲದಿದ್ದರೂ ಕೆಲಸ ಮಾಡಲು ಹೊಸ ವ್ಯವಸ್ಥೆ ಅನುಕೂಲ ಮಾಡಿಕೊಡುತ್ತದೆ.
- ಮಿಸೌರಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಡಾ| ಜಗನ್ನಾಥನ್ ಸಾರಂಗಪಾಣಿ ಅವರು ಈ ರೊಬೊಟ್ 'ಮೆದುಳು' ಸೃಷ್ಟಿಕರ್ತರು.
- ಒಂದು ಕೆಲಸವನ್ನು ಯಾವುದೇ ತೊಡಕು ಇಲ್ಲದೆ ಮಾಡುವಂತೆ, ತೊಡಕು ಎದುರಾದರೂ ಅದರಿಂದ ಬಚಾವಾಗುವ ವಿಧಾನ ಹೊಸ ವ್ಯವಸ್ಥೆಯಲ್ಲಿದೆ.
- ಒಂದು ವೇಳೆ, ಹಲವು ರೊಬೊಟ್‌ಗಳ ನೇತೃತ್ವ ವಹಿಸಿರುವ ಮುಖ್ಯ ರೊಬೊಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡರೆ, ಅದರ ಹಿಂದೆ ಬರುವ ರೊಬೊಟ್ ನಾಯಕನ ಸ್ಥಾನವನ್ನು ಹೊತ್ತುಕೊಳ್ಳುವಂತೆ ಈ ವ್ಯವಸ್ಥೆ ಮಾಡುತ್ತದೆ.
- ನಾಯಕ ರೊಬೊಟ್‌ನನ್ನು ಹಲವು ರೊಬೊಟ್‌ಗಳು ಹಿಂಬಾಲಿಸುವಂತೆ ಮಾಡಲು ಸೋನಾರ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ

**ಟೊಮ್ ಟಾಟೊ (TomTato): ಟಮೊಟೊ ಮತ್ತು ಆಲೂಗಡ್ಡೆ ಒಂದೇ ಗಿಡದಲ್ಲಿ**

ಒಂದೇ ಗಿಡದಲ್ಲಿ ಟೊಮೊಟೊ ಮತ್ತು ಆಲೂಗಡ್ಡೆ, ಹೌದು ಆಶ್ಚರ್ಯವಾದರೂ ಇದು ಸತ್ಯ. ಟೊಮ್ ಟಾಟೋ ಒಂದೇ ಗಿಡದಲ್ಲಿ ಆಲೂಗಡ್ಡೆ ಮತ್ತು ಟಮೊಟೊ ಬಿಡುವ ಸಸ್ಯವನ್ನು ಯು.ಕೆ.ಯಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ಟೊಮ್ ಟಾಟೊ ಎಂದು ಹೆಸರಿಡಲಾದ ಈ ಸಸ್ಯವೂ 500 ಕ್ಕೂ ಹೆಚ್ಚು ಟೊಮೊಟೊ ಮತ್ತು ಬಿಳಿ ಆಲೂಗಡ್ಡೆಯನ್ನು ಬಿಡುವ ಮೂಲಕ ವಿಶ್ವದಲ್ಲಿ ಅಚ್ಚರಿ ಮೂಡಿಸುವಂತೆ ಮಾಡಿದೆ.

- ಟೊಮ್ ಟಾಟೊ ಅಭಿವೃದ್ಧಿಪಡಿಸಿರುವ ಥಾಮ್ಸನ್ & ಮೊರ್ಗನ್ ಸಂಸ್ಥೆಯ ಪ್ರಕಾರ ಇದೊಂದು ಕುಲಾಂತರಿ ತಳಿ ಅಲ್ಲ ಎಂದಿದೆ. ಈ ಹಿಂದೆಯೇ ಈ ಸಸ್ಯವನ್ನು ಅಭಿವೃದ್ಧಿಪಡಿಸಿತ್ತಾದರೂ ವಾಣಿಜ್ಯ ಮಟ್ಟದಲ್ಲಿ ಅಭಿವೃದ್ಧಿ ಪಡಿಸಿರುವುದು ಇದೇ ಮೊದಲು.
- ಈ ಸಸ್ಯಗಳನ್ನು ತುಂಬು ಮಡಿಕೆ ಅಥವಾ ಚೀಲದಲ್ಲಿ ಬೆಳೆಯಬಹುದಾಗಿದೆ. ಸುಮಾರು 15 ವರ್ಷಗಳ ಸಂಶೋಧನೆಯ ಫಲವಾಗಿ ಎರಡು ಪ್ರಮುಖ ತರಕಾರಿಗಳನ್ನು ಒಂದೇ ಗಿಡದಡಿ ದೊರೆಕಿಸುವ ವಿಜ್ಞಾನಿಗಳ ಕನಸು ನನಸಾಗಿದೆ.

**ಶನಿಯ ಉಪಗ್ರಹ "ಟೈಟಾನ್" ನಲ್ಲಿ ಪ್ಲಾಸ್ಟಿಕ್ ನಲ್ಲಿ ಬಳಸುವ ರಾಸಾಯನಿಕ ವಸ್ತು ಪತ್ತೆ**

ನಾಸಾದ ಕ್ಯಾಸಿನಿ ಬಾಹ್ಯಾಕಾಶ ನೌಕೆಯು ಪ್ಲಾಸ್ಟಿಕ್ ತಯಾರಿಕೆಯಲ್ಲಿ ಪ್ರಮುಖವಾಗಿ ಬಳಸುವ "ಪ್ರೊಪಿಲಿನ್ (Propelyne)" ಎಂಬ ರಾಸಾಯನಿಕವನ್ನು ಪತ್ತೆ ಹಚ್ಚಿದೆ. ಇದೇ ಮೊದಲ ಬಾರಿಗೆ ಇಂತಹ ರಾಸಾಯನಿಕವನ್ನು ಬಾಹ್ಯಾಕಾಶದಲ್ಲಿ ಪತ್ತೆಹಚ್ಚಿರುವುದಾಗಿ ನಾಸಾ ವಿಜ್ಞಾನಿಗಳು ತಿಳಿಸಿದ್ದಾರೆ,

- ಪ್ರೊಪಿಲಿನ್ ರಾಸಾಯನಿಕ ವಸ್ತುವನ್ನು ಆಹಾರ ಶೇಖರಣೆ ಡಬ್ಬಗಳ ತಯಾರಿಕೆ, ಕಾರಿನ ಬಂಪರ್ ಮತ್ತು ಇತರೆ ಗ್ರಾಹಕ ಬಳಕೆ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.
- ಸಣ್ಣ ಪ್ರಮಾಣದ ಪ್ರೊಪಿಲಿನ್ ಅನ್ನು ಶನಿಯ ಉಪಗ್ರಹ ಟೈಟಾನ್ ನ ಕೆಳಸ್ತರ ವಾತಾವರಣದಲ್ಲಿ ಕ್ಯಾಸಿನಿ ಕಾಂಪೊಸಿಟ್ ಇನ್ಫ್ರರೆಡ್ ಸ್ಪೆಕ್ಟ್ರೋಮೀಟರ್ ನಿಂದ ಪತ್ತೆಹಚ್ಚಲಾಗಿದೆ,
- ಪ್ರೊಪಿಲಿನ್ ರಾಸಾಯನಿಕವು ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಹೇರಳವಾಗಿ ಕಂಡುಬರುತ್ತದೆ ಆದರೆ ಟೈಟಾನ್ ನಲ್ಲಿ ಪತ್ತೆಯಾಗಿರುವುದು ವಿಜ್ಞಾನಿಗಳ ಸಂಶೋಧನೆಗೆ ಮತ್ತಷ್ಟು ಹುರುಪು ನೀಡಿದೆ.

## ಪರಿಸರ

### ಫೆಸಿಫಿಕ್ ಸರೋವರದಲ್ಲಿ ವಿಶ್ವದ ಅತಿ ದೊಡ್ಡ ಜ್ವಾಲಾಮುಖಿ ಪತ್ತೆ

ವಿಶ್ವದಲ್ಲೇ ಅತ್ಯಂತ ದೊಡ್ಡ ಹಾಗೂ ಸೌರವ್ಯೂಹದಲ್ಲಿ ಅತಿ ದೊಡ್ಡದೆನಿಸಿರುವ ಜ್ವಾಲಾಮುಖಿ ಫೆಸಿಫಿಕ್ ಸರೋವರದ ತಳಭಾಗದಲ್ಲಿ ಪತ್ತೆಹಚ್ಚಲಾಗಿದೆ. ಜಪಾನ್ ಕರಾವಳಿ ತೀರದಿಂದ 1,600 ಕಿ.ಮೀ ದೂರದಲ್ಲಿರುವ ಶಾಟ್ಸ್ಕಿ ರೈಸ್ ಎಂಬಲ್ಲಿ ಈ ಜ್ವಾಲಾಮುಖಿಯನ್ನು ಗುರುತಿಸಲಾಗಿದೆ.

- ಸುಮಾರು 145 ಮಿಲಿಯನ್ ವರ್ಷಗಳ ಉಕ್ಕಿ ಹರಿದಿದೆ ಎನ್ನಲಾದ ಲಾವಾದಿಂದ ಜ್ವಾಲಾಮುಖಿ ರೂಪುಗೊಂಡಿರುವುದಾಗಿ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.
- 119000 ಚದರ ಕಿ.ಮೀಯಷ್ಟಿರುವ ಈ ಜ್ವಾಲಾಮುಖಿಗೆ ತಮು (TAMU) ಎಂದು ಹೆಸರಿಡಲಾಗಿದೆ. ಮಂಗಳ ಗ್ರಹದ ಮೇಲಿರುವ ಒಲಂಪಿಸ್ ಜ್ವಾಲಾಮುಖಿಯಷ್ಟೇ ತಮು ದೊಡ್ಡದಾಗಿದೆ.
- TAMU ಎಂದರೆ Texas A & M University ಎಂದರ್ಥ.
- ಇದುವರೆಗೂ ಹವಾಯಿ ಮೌನ ಲೊನ ಜ್ವಾಲಾಮುಖಿ ವಿಶ್ವದ ಅತಿದೊಡ್ಡ ಜ್ವಾಲಾಮುಖಿ ಎನಿಸಿತ್ತು.

### ಸೆಪ್ಟೆಂಬರ್ 16: ಅಂತರರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನ

ಅಂತರರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನವನ್ನು ಸೆಪ್ಟೆಂಬರ್ 16 ರಂದು ಪ್ರತಿವರ್ಷ ಆಚರಿಸಲಾಗುತ್ತದೆ. ಓಝೋನ್ ಸಂರಕ್ಷಣೆ ಮತ್ತು ಅದಕ್ಕೆ ಅಗತ್ಯವಿರುವ ಕ್ರಮವನ್ನು ಕೈಗೊಳ್ಳುವ ಸಲುವಾಗಿ ವಿಶ್ವದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

- ಸೆಪ್ಟೆಂಬರ್ 16 "ಮಾಂಟ್ರೆಯಲ್ ಪ್ರೊಟಕಲ್ (Montreal Protocol)"ಗೆ ಸಹಿಹಾಕಿದ ದಿನ. ಆಗಾಗಿ ಈ ದಿನವನ್ನು ಅಂತರರಾಷ್ಟ್ರೀಯ ಓಝೋನ್ ಸಂರಕ್ಷಣಾ ದಿನವೆಂದು ಆಚರಿಸಲಾಗುತ್ತಿದೆ.
- ವಿಶ್ವಸಂಸ್ಥೆ 1994 ರಲ್ಲಿ ಕೈಗೊಂಡ ನಿರ್ಣಯದ ಮೂಲಕ ಪ್ರತಿ ವರ್ಷ ಸೆಪ್ಟೆಂಬರ್ 16 ರಂದು ಓಝೋನ್ ಪದರ ಸಂರಕ್ಷಣಾ ದಿನವೆಂದು ಘೋಷಿಸಿದೆ.
- ಈ ವರ್ಷದ ಥೀಮ್: A Healthy atmosphere, the Future We Want.

**ಓಝೋನ್ ಪದರ**:

- ಓಝೋನ್ ಪದರ ವಾತಾವರಣದ ಸ್ಟ್ರಾಟೋಸ್ಪೀಯರ್ ನಲ್ಲಿ ಕಂಡುಬರುವ ಅತ್ಯಂತ ಸೂಕ್ಷ್ಮ ಪದರ. ಓಝೋನ್ ನ ರಾಸಾಯನಿಕ ಹೆಸರು $O_3$.

- ಭೂಮಿಯ ಮೇಲೆ ಸುಮಾರು 10 ಕಿ.ಮೀ ಯಿಂದ 40 ಕಿ.ಮೀ ಯ ವ್ಯಾಪ್ತಿಯಲ್ಲಿ ಕಂಡು ಬರುವ ಓಝೋನ್ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಸೂರ್ಯನಿಂದ ಹೊರ ಬರುವ ಅತಿ ನೇರಳಾತೀತ ಕಿರಣಗಳನ್ನು ವಾತಾವರಣದಲ್ಲಿ ಹೀರಿಕೊಳ್ಳುವ ಮೂಲಕ ಪ್ರಾಣಿ ಸಂಕುಲದ ಮೇಲಾಗುವ ದುಷ್ಪರಿಣಾಮವನ್ನು ತಡೆಯುವಲ್ಲಿ ಓಝೋನ್ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದೆ.

**ಮಾಂಟ್ರಿಯಲ್ ಪ್ರೋಟೊಕಲ್**:

- ಮಾನವ ಪ್ರೇರಿತ ಚಟುವಟಿಕೆಗಳಿಂದ ಓಝೋನ್ ಪದರ ಅತಿ ವೇಗವಾಗಿ ಹಾಳುಗುತ್ತಿರುವುದನ್ನು ವಿಜ್ಞಾನಿಗಳು ಪತ್ತೆಹಚ್ಚಿದ ಮೇಲೆ ಓಝೋನ್ ಪದರದ ಸಂರಕ್ಷಣೆ ಬಗ್ಗೆ ವಿಶ್ವದ ಪ್ರಮುಖ ರಾಷ್ಟ್ರಗಳು ಮುಕ್ತವಾಗಿ ಚರ್ಚಿಸಲು ಮುಂದಾದವು. ಅದರ ಹಿನ್ನಲೆಯಲ್ಲಿ ಜಾರಿಗೆ ಬಂದಿದೆ ಮಾಂಟ್ರಿಯಲ್ ಪ್ರೋಟೊಕಲ್.
- ಓಝೋನ್ ಪದರವನ್ನು ಹಾಳು ಮಾಡಬಲ್ಲ ಕ್ಲೋರೋ ಫ್ಲೋರೋ ಕಾರ್ಬನ್ ನಂತಹ ಹಾನಿಕಾರಕ ಅನಿಲಗಳ ಬಳಕೆಯನ್ನು ಕಾಲಕ್ರಮೇಣ ಕಡಿಮೆಗೊಳಿಸುವುದು ಈ ಪ್ರೋಟೊಕಲ್ ನ ಮುಖ್ಯ ಉದ್ದೇಶ.
- ಮಾಂಟ್ರಿಯಲ್ ಪ್ರೋಟೊಕಲ್ ಅನ್ನು ಸೆಪ್ಟೆಂಬರ್ 16, 1987 ರಲ್ಲಿ ಸಹಿ ಹಾಕಲಾಯಿತು. ಜನವರಿ 1, 1989 ರಿಂದ ಜಾರಿಗೆ ಬಂದಿದೆ.

**“777 ದಿನ ನಂಬಲಾಗದ ಭಾರತದ ಹಿಮಾಲಯ (777 Days of Incredible Indian Himalaya)” ಆಂದೋಲನಕ್ಕೆ ಚಾಲನೆ**

ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ (ಸೆಪ್ಟೆಂಬರ್ 21) ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು “777 ದಿನ ನಂಬಲಾಗದ ಭಾರತದ ಹಿಮಾಲಯ” ಎಂಬ ಆಂದೋಲನಕ್ಕೆ ಚಾಲನೆ ನೀಡಿತು. ವಿಶ್ವ ಪ್ರವಾಸೋದ್ಯಮ ನಕ್ಷೆಯಲ್ಲಿ ಹಿಮಾಲಯವನ್ನು ಹೆಮ್ಮೆಯಿಂದ ಬಿಂಬಿಸುವಂತೆ ಮಾಡುವುದು ಈ ಆಂದೋಲನದ ಮುಖ್ಯ ಗುರಿ.

- ಆಂದೋಲನಕ್ಕೆ ಚಾಲನೆ ನೀಡಿದ ಪ್ರವಾಸೋದ್ಯಮ ಸಚಿವ ಚಿರಂಜೀವಿ ಅವರು 777 ದಿನಗಳ ಪರ್ವತಾರೋಹಣ ವೇಳೆ ತಗಲುವ ವೆಚ್ಚದ ಶೇ 50 ರಷ್ಟನ್ನು ಪ್ರವಾಸೋದ್ಯಮ ಸಚಿವಾಲಯ ಭರಿಸುವುದಾಗಿ ಹೇಳಿದರು.
- ಭಾರತದಲ್ಲಿ ಶೇ 73 ರಷ್ಟು ಭಾಗ ಹರಡಿಕೊಂಡಿರುವ ಹಿಮಾಲಯದ ಬಗ್ಗೆ ವಿಶ್ವದಾದ್ಯಂತ ಅರಿವು ಮೂಡಿಸಿ ಪ್ರವಾಸಿಗರನ್ನು ಸೆಳೆಯುವುದಾಗಿದೆ.
- ಇದೇ ವೇಳೆ ಚಿರಂಜೀವಿಯವರು ಹಿಮಾಲಯದ ನಕ್ಷೆ ಮತ್ತು ಈ ಆಂದೋಲನದಡಿ ಕೈಗೊಳ್ಳಲಿರುವ ವಿವಿಧ ಕಾರ್ಯಕ್ರಮಗಳ ಮಾಹಿತಿ ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.
- “ಗ್ರೇಟೆಸ್ಟ್ ಶೋ ಆನ್ ದಿ ಅರ್ಥ್” ಮತ್ತು ಲೈಫ್ ಅಲ್ಟರಿಂಗ್ ಜರ್ನಿ” ಎಂಬ ಎರಡು ಹಿಮಾಲಯ ಕುರಿತಾದ ಟೆಲಿ ಸಿನಿಮಾಗಳನ್ನು ಬಿಡುಗಡೆಗೊಳಿಸಲಾಯಿತು.

**ಭೂ ಮೇಲ್ಮೈ ಜೀವ ರಕ್ಷಕ ಓಝೋನ್ ಪದರ: ಒಂದು ನೋಟ**

ಓಝೋನ್ ಪದರದ ರಾಸಾಯನಿಕ ವಸ್ತುಗಳ ಅತಿ ಬಳಕೆಯಿಂದ ತನ್ನ ಗಟ್ಟಿತನ ಕಳೆದುಕೊಂಡಿದ್ದ ಓಝೋನ್ ಪದರದ ಸಾಮರ್ಥ್ಯ ಹೆಚ್ಚಿ, ಮೊದಲಿನಂತಾಗಲೂ ಇನ್ನೂ ಕನಿಷ್ಠ 60 ವರ್ಷ ಬೇಕು. ರಾಸಾಯನಿಕ ವಸ್ತುಗಳಲ್ಲಿನ ಕಣಗಳು ಪ್ರತಿನಿತ್ಯ ಪರಿಸರಕ್ಕೆ ಸೇರುತ್ತಿರುವುದರಿಂದ ತಾಪಮಾನದಲ್ಲಿ ಸಾಕಷ್ಟು ವೈಪರೀತ್ಯ ಉಂಟಾಗಿದ್ದು, ವೈಪರೀತ್ಯ ಮುಂದುವರಿಯಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಿದ್ದಾರೆ.

**ಓಝೋನ್ ಪದರಕ್ಕೆ ಕ್ಷೀಣ:**

ಓಝೋನ್ ಪದರದ ಗುಣಮಟ್ಟ ಮೊದಲಿನಂತಾಗಲೂ ವಿಶ್ವದ ಸಾಕಷ್ಟು ರಾಷ್ಟ್ರಗಳು ಶ್ರಮಿಸುತ್ತಿವೆ. ಆದರೆ, ಜನರಲ್ಲಿ ಮಾತ್ರ ಈ ಬಗ್ಗೆ ಅರಿವಿಲ್ಲದಿರುವುದರಿಂದ ಸಮಸ್ಯೆ ನಿವಾರಣೆಯಾಗಿಲ್ಲ. ಈ ಸಮಸ್ಯೆ ಕ್ರಮೇಣವಾಗಿ ನಿವಾರಣೆಯಾಗಲಿದ್ದು, ಇನ್ನೂ 50 ರಿಂದ 60 ವರ್ಷಗಳು ಬೇಕಾಗಬಹುದು. ಅದುವರೆಗೂ ಪ್ರಕೃತಿಯಲ್ಲಿ ಏರುಪೇರುಗಳು ಉಂಟಾಗುತ್ತಲೇ ಇರುತ್ತವೆ. ಕಾಲಕ್ಕೆ ಮಳೆ ಬರದಿರುವುದು, ಸಮುದ್ರದಲ್ಲಿ ಅಲೆಗಳು ಉಂಟಾಗುವುದು, ಬೇಸಿಗೆಯಲ್ಲಿ ಮಳೆ ಬರುವುದು, ಚಂಡಮಾರುತ, ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳುವುದು ಸೇರಿದಂತೆ ಹಲವು ವೈಪರೀತ್ಯಗಳು ಮುಂದುವರಿಯುತ್ತವೆ ಎನ್ನುತ್ತಾರೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು.

**ಜನರಲ್ಲಿ ಅರಿವಿಲ್ಲ:**

ಓಝೋನ್ ಪದರ ಹಾಗೂ ಅದಕ್ಕೆ ಆಗಿರುವ ಅನಾಹುತದ ಬಗ್ಗೆ ಜನರಲ್ಲಿ ಅರಿವಿಲ್ಲ. ಕೈಗಾರಿಕೋದ್ಯಮ, ಕಾರ್ಖಾನೆಗಳು ಹೆಚ್ಚುತ್ತಲೇ ಇವೆ. ಮತ್ತೊಂದೆಡೆ ಗೃಹೋಪಯೋಗಿ, ದಿನಬಳಕೆ ವಸ್ತುಗಳಲ್ಲಿ ಬಿಡುಗಡೆಯಾಗುವ ರಾಸಾಯನಿಕ ವಸ್ತುಗಳ ಕಣಗಳು (ಮಾಲಿಕ್ಯೂಲ್) ಗಾಳಿಯಲ್ಲಿ ಸೇರಿ ಓಝೋನ್ ಪದರ ಹಾಳುಮಾಡುತ್ತಿವೆ. (10 ವರ್ಷಕ್ಕೆ 4 ಪಟ್ಟಷ್ಟು ಓಝೋನ್ ಪದರ ಕಡಿಮೆಯಾಗುತ್ತಿತ್ತು) ಅದನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರ ವಿವಿಧ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ವೇಳೆ ಹೆಚ್ಚು ರಾಸಾಯನಿಕ ವಸ್ತುಗಳನ್ನು ಬಳಸದೆ ಹಾಗೂ ಅವುಗಳಿಂದ ವಿಷಕಾರಿಕ ಅಣು ಬಿಡುಗಡೆ ಆಗದಂತೆ ಎಚ್ಚರ ವಹಿಸಿದೆ.

**350 ಡಬ್ಸಿನ್ ಇರಬೇಕು:**

ಓಝೋನ್ ಪದರ ಸುಮಾರು 250 ರಿಂದ 305 ಡಾಬ್ಸನ್ ಯುನಿಟ್ ನಷ್ಟು ದಪ್ಪ (ಗಟ್ಟಿ) ಇರಬೇಕು. ಆದರೆ, ಈ ಹಿಂದೆ ಓಝೋನ್ ಪದರ ರಂಧ್ರವಾಗಿದೆ, ಅದರ ಸಾಂದ್ರತೆ ಕಡಿಮೆಯಾಗಿದೆ ಎಂದು ತಿಳಿದಾಗ ಕೇವಲ 90 ಡಬ್ಸಿನ್‌ನಷ್ಟಿತ್ತು. ಓಝೋನ್ ಪದರ ತೆಳುವಾದರೆ ಸೂರ್ಯನ ಕಿರಣ ನೇರವಾಗಿ ಭೂಮಿಗೆ ತಲುಪಿ ಅದರಲ್ಲಿನ ಯುವಿ ಕಿರಣಗಳಿಂದ (ಅಲ್ಟ್ರಾವೈಯಲೆಟ್ ಕಿರಣಗಳು) ಮಾನವ, ಪ್ರಾಣಿ, ಪಕ್ಷಿ ಹಾಗೂ ಸಸ್ಯ ಸಂಕುಲಕ್ಕೆ ತೊಂದರೆಯಾಗುತ್ತದೆ. ಹಾಗಾಗಿ ಓಝೋನ್ ಪದರದ ಸಾಂದ್ರತೆ ಕಾಪಾಡಲು ವಿಶ್ವದ ಎಲ್ಲಾ ರಾಷ್ಟ್ರಗಳು ಮುಂದಾಗಿವೆ.

**ಯಾವಾಗ ಆಚರಣೆ, ಏಕೆ:**

1985ರಲ್ಲಿ ಓಝೋನ್ ಪದರದಲ್ಲಿ ರಂಧ್ರ ಹಾಗೂ ಪದರ ತೆಳುವಾಗಿರುವುದು ಕಂಡುಬಂದಿದೆ. ಇದರಿಂದುಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿತ ವಿವಿಧ ದೇಶಗಳ ಸರ್ಕಾರದ ಮುಖ್ಯಸ್ಥರು ಒಟ್ಟಾಗಿ ಸೇರಿ ಓಝೋನ್ ಪದರ ರಕ್ಷಿಸಲು ಮುಂದಾದರು. 1995ರಲ್ಲಿ ಈ ಆಚರಣೆ ಜಾರಿಗೆ ಬಂತು. ಪ್ರತಿ ವರ್ಷ ಸೆಪ್ಟಂಬರ್ 16ರಂದು ವಿಶ್ವ ಓಝೋನ್ ದಿನವನ್ನಾಗಿ ಆಚರಿಸಲು ವಿವಿಧ ರಾಷ್ಟ್ರಗಳು ಸಮ್ಮತಿ ಸೂಚಿಸಿ, ಸಹಿ ಹಾಕಿವೆ. ಅಂದಿನಿಂದ ಪ್ರತಿ ವರ್ಷ ಸೆ.16ರಂದು ಈ ದಿನಾಚರಣೆ ಜಾರಿಗೆ ಬಂತು. ಪ್ರತಿವರ್ಷ ಆಚರಣೆ ವೇಳೆ ಮಾತ್ರ ಓಝೋನ್ ಪದರ ಹಾಗೂ ಅದರಿಂದಾಗುವ ಅನಾಹುತದ ಬಗ್ಗೆ ಅರಿವು ಮೂಡಿಸಲಾಗುತ್ತದೆ.

**ಹವಾಮಾನ ಬದಲಾವಣೆ : ಜಂಟಿ ಕಾರ್ಯಪಡೆ ರಚಿಸಲು ಅಮೆರಿಕಾ ಮತ್ತು ಭಾರತ ನಿರ್ಧಾರ**

ಹವಾಮಾನ ಬದಲಾವಣೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಅಮೆರಿಕಾ ಮತ್ತು ಭಾರತ ಹವಾಮಾನ ಬದಲಾವಣೆಯನ್ನು ತಡೆಯುವ ಸಲುವಾಗಿ ಜಂಟಿ ಕಾರ್ಯಪಡೆಯನ್ನು ರಚಿಸಲು ಮುಂದಾಗಿವೆ, ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಅಮೆರಿಕಾ ಅಧ್ಯಕ್ಷ ಬರಾಕ್ ಒಬಾಮ ಅವರು ಜಂಟಿಯಾಗಿ ಈ ಬಗ್ಗೆ ಹೇಳಿಕೆ ನೀಡಿದ್ದಾರೆ,

- ಹವಾಮಾನ ಬದಲಾವಣೆ ಕುರಿತಾಗಿ ತುರ್ತಾಗಿ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದ್ದು, 2020 ರ ವೇಳೆಗೆ ಸಾಧ್ಯವಾದಷ್ಟು ಶಮನಗೊಳಿಸಲು ಈ ಕಾರ್ಯಪಡೆ ಸಹಾಯಕಾರಿಯಾಗಲಿದೆ ಎಂಬ ವಿಶ್ವಾಸವನ್ನು ಉಭಯ ರಾಷ್ಟ್ರಗಳ ನಾಯಕರು ವಿಶ್ವಾಸ ವ್ಯಕ್ತಪಡಿಸಿದರು,

**ಹೈಡ್ರೋಫ್ಲೋರೋಕಾರ್ಬನ್ಸ್ ಬಳಕೆಗೆ ತಡೆ:**

- ಓಝೋನ್ ಪದರಕ್ಕೆ ಅತ್ಯಂತ ಹಾನಿ ಉಂಟು ಮಾಡುವ ಹೈಡ್ರೋಫ್ಲೋರೋಕಾರ್ಬನ್ಸ್ (HFCs) ಬಳಕೆಯನ್ನು ತಡೆಯುವ ಬಗ್ಗೆಯು ಸಹ ಚರ್ಚಿಸಲಾಯಿತು. ಕಾರ್ಬನ್ ಡೈ ಆಕ್ಸೈಡ್ ಗಿಂತಲೂ ಹೆಚ್ಚು ಅಪಾಯಕಾರಿಯಾಗಿದ ಇದರ ಬಳಕೆಯನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡಲು ಉಭಯ ದೇಶಗಳು ಒಪ್ಪಿಗೆ ಸೂಚಿಸಿವೆ. ಹೈಡ್ರೋಫ್ಲೋರೋಕಾರ್ಬನ್ಸ್ ಅನ್ನು ವಿಶ್ವ ಸಂಸ್ಥೆಯ ಹವಾಮಾನ ಕುರಿತಾದ ಸಮ್ಮೇಳನ (UNFCC) ಪರಿಮಿತಿಯಡಿ ತರಲು ಸಮ್ಮತಿಸಿದವು.

**ಶುದ್ಧ ಇಂಧನ ಬಗ್ಗೆ:**

- ಶುದ್ಧ ಇಂಧನ ಬಳಕೆ ಮತ್ತು ತಯಾರಿಕೆ ಬಗ್ಗೆ 2009 ರಲ್ಲಿ ಎರಡು ದೇಶಗಳು ಸಹಿ ಹಾಕಿದ್ದು ಇದರ ಬಗೆಯೂ ಸಹ ಚರ್ಚಿಸಲಾಯಿತು. ಶುದ್ಧ ಇಂಧನ ಬಳಕೆಯಿಂದ ಭಾರತದ ಮಿಲಿಯನ್ ಮನೆಗಳು ಬೆಳಗಲಿದ್ದು, ಇದರ ಸಮರ್ಪಕ ಬಳಕೆಗೆ ಯೋಜನೆಯನ್ನು ರೂಪಿಸಲು ಬದ್ಧರಿರುವುದಾಗಿ ಹೇಳಿವೆ.

## ಕ್ರೀಡೆ

**2020 ಒಲಂಪಿಕ್ಸ್ ಕ್ರೀಡಾಕೂಟ ಅತಿಥ್ಯವಹಿಸಲಿರುವ "ಟೊಕಿಯೊ"**

2020 ರಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡಾಕೂಟದ ಅತಿಥ್ಯವನ್ನು ಯಾವ ನಗರ ವಹಿಸಲಿದೆ ಎಂಬು ಕುತೂಹಲಕ್ಕೆ ಕೊನೆಗೂ ತೆರೆಬಿದ್ದಿದೆ. ಜಪಾನ್ ರಾಜಧಾನಿ "ಟೊಕಿಯೊ" 2020 ರಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡಾಕೂಟದ ಅತಿಥ್ಯವನ್ನು ವಹಿಸಲಿದೆ.

- ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿ ನಡೆಸಿದ ರಹಸ್ಯ ಮತದಾನದಲ್ಲಿ ಟೊಕಿಯೊ ಪರ 60 ಮತ ಬಿದ್ದರೆ ಇಸ್ತಾಂಬುಲ್ 36 ಮತಗಳನ್ನು ಪಡೆದುಕೊಂಡಿತು.
- ಫುಕುಶಿಮಾ ಅಣು ಘಟಕದಿಂದ ವಿಕಿರಣ ಸೋರಿಕೆಯಾಗುತ್ತಿರುವುದು ಟೊಕಿಯೊ ಅತಿಥ್ಯವಹಿಸಲು ಅಡ್ಡಿಯಾಗಲಿದೆ ಎನ್ನಲಾಗಿತ್ತು. ಆದರೆ ಜಪಾನ್ ಪ್ರಧಾನಿ ಶಿಂಝೊ ಅಬೆ ವಿಕಿರಣ ಸೋರಿಕೆಯನ್ನು ಸಂಪೂರ್ಣವಾಗಿ ತಡೆಯುವ ಭರವಸೆ ನೀಡಿದ ಕಾರಣ ಒಲಂಪಿಕ್ಸ್ ಕ್ರೀಡಾಕೂಟದ ನೇತೃತ್ವ ವಹಿಸುವ ಜಪಾನ್ ಕನಸು ಸುಗಮವಾಯಿತು.
- 1964 ರಲ್ಲಿ ಜಪಾನ್ ಕೊನೆಯ ಬಾರಿಗೆ ಒಲಂಪಿಕ್ಸ್ ನೇತೃತ್ವವನ್ನು ವಹಿಸಿತ್ತು. ಅಂತರರಾಷ್ಟ್ರೀಯ ಒಲಂಪಿಕ್ಸ್ ಸಮಿತಿಯ ಈ ನಿರ್ಣಯ ಜಪಾನ್ ಪ್ರಜೆಗಳಲ್ಲಿ ಸಂತಸ ಮೂಡಿಸಿದೆ.

**ಯು.ಎಸ್ ಓಪನ್ ಟೆನ್ನಿಸ್ ಚಾಂಪಿಯನ್ ಷಿಪ್- 2013 ಸೆರೆನಾಗೆ ಪ್ರಶಸ್ತಿಯ ಗರಿ**

**ಸೆರೆನಾಗೆ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ**: ತೀವ್ರ ಕುತೂಹಲ ಮೂಡಿಸಿದ್ದ ಮಹಿಳೆಯ ಸಿಂಗಲ್ಸ್ ಪ್ರಶಸ್ತಿಯಲ್ಲಿ ಅಮೆರಿಕಾದ ಸೆರೆನಾ ವಿಲಿಯಮ್ಸ್ ಅವರು ಎಲ್ಲರ ನಿರೀಕ್ಷೆಯಂತೇ ಜಯಭೇರಿ ಬಾರಿಸಿದರು. ಬೆಲಾರಸ್ ನ ವಿಕ್ಟೋರಿಯಾ ಅಝುರೆಂಕಾ ಅವರನ್ನು 7-5, 6-7, 6-1 ನೇರ ಸೆಟ್ ಗಳಿಂದ ಮಣಿಸುವ ಮೂಲಕ ಸೆರೆನಾ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಸೆರೆನಾಗೆ ಇದು ಐದನೇ ಯು.ಎಸ್ ಟೆನ್ನಿಸ್ ಚಾಂಪಿಯನ್ ಪ್ರಶಸ್ತಿ ಹಾಗೂ 17 ನೇ ಗ್ರಾಂಡ್ ಸ್ಲಾಮ್ ಪ್ರಶಸ್ತಿಯಾಗಿದೆ.

**ಲಿಯಾಂಡರ್ ಪೇಸ್ ಜೋಡಿಗೆ ಪುರುಷರ ಡಬ್ಬಲ್ಸ್**: ಭಾರತದ ಲಿಯಾಂಡರ್ ಪೇಸ್ ಮತ್ತು ಚೆಝ್ ನ ರಡೆಕ್ ಸ್ಟೆಪನೆಕ್ ಜೋಡಿ ಪುರುಷರ ಡಬ್ಬಲ್ಸ್ ನಲ್ಲಿ ಪ್ರಶಸ್ತಿಯನ್ನು ಬಾಚಿಕೊಂಡಿತು. ಆಸ್ಟ್ರೇಲಿಯಾದ ಅಲೆಕ್ಸಾಂಡರ್ ಪೆಯಾ ಮತ್ತು ಬ್ರೆಜಿಲ್ ನ ಬ್ರುನೊ ಸೊರೆಸ್ ಜೋಡಿಯನ್ನು 6-1, 6-3 ರಲ್ಲಿ ಮಣಿಸುವ ಮೂಲಕ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಪೇಸ್ ಗೆ ಇದು 30 ನೇ ಗ್ರಾಂಡ್ ಸ್ಲಾಮ್ ಪಂದ್ಯ. ಈಗಾಗಲೇ ಲಿಯಾಂಡರ್ ಪೇಸ್ 2006 ರಲ್ಲಿ ಮತ್ತು 2009 ರಲ್ಲಿ ಪ್ರಶಸ್ತಿಯನ್ನು ಗೆದ್ದಿದ್ದಾರೆ.

**ರಾಫಲ್ ನಡಾಲ್ ಗೆ ಪ್ರತಿಷ್ಠಿತ ಯು.ಎಸ್. ಓಪನ್ ಟೆನ್ನಿಸ್ ಚಾಂಪಿಯನ್ ಶಿಪ್**

ಸ್ಪೇನ್ ನ ಟೆನಿಸ್ ಆಟಗಾರ ಹಾಗೂ ವಿಶ್ವ ಟೆನ್ನಿಸ್ ನ 2ನೇ ಶ್ರೇಯಾಂಕ ಹೊಂದಿರುವ ರಾಫಲ್ ನಡಾಲ್ ಅವರು ಪ್ರತಿಷ್ಠಿತ ಯುಎಸ್ ಓಪನ್ ಚಾಂಪಿಯನ್ ಶಿಪ್ ಗೆದ್ದುಕೊಂಡಿದ್ದಾರೆ. ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಅವರು ಸರ್ಬಿಯಾದ

ಆಟಗಾರ ನೊವಾಕ್ ಜೋಕೊವಿಚ್ ಅವರ ವಿರುದ್ಧ 6-2, 3-6, 6-4, 6-1ಅಂತರದಲ್ಲಿ ಗೆಲವು ಸಾಧಿಸಿ, ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

**17ನೇ ಗ್ರ್ಯಾಂಡ್ ಸ್ಲಾಂ ಪ್ರಶಸ್ತಿ:**

ಇದು ಅವರ ವೃತ್ತಿಜೀವನದಲ್ಲಿ 17ನೇ ಗ್ರ್ಯಾಂಡ್ ಸ್ಲಾಂ ಆಗಿದೆ. 27ರ ಪ್ರಾಯದ ನಡಾಲ್ ಅವರು ಈ ಹಿಂದೆ 2010ರಲ್ಲಿ ಇದೇ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದರು. ಇದೀಗ, ಮತ್ತೆ ಈ ಪ್ರಶಸ್ತಿಯನ್ನು ಗೆಲ್ಲುವುದರೊಂದಿಗೆ ಅವರು 3.6 ಮಿಲಿಯನ್ ಅಮೆರಿಕನ್ ಡಾಲರ್ ಮೊತ್ತವನ್ನು ಜೇಬಿಗಿಳಿಸಿದ್ದಾರೆ. ಅಲ್ಲದೇ, ಈ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಅವರು, ಅತಿ ಹೆಚ್ಚು ಬಾರಿ ಪ್ರಮುಖ ಪಂದ್ಯಾವಳಿಗಳನ್ನು ಗೆದ್ದ ರೋಜರ್ ಫೆಡರರ್ (17 ಪ್ರಶಸ್ತಿ) ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಇಲ್ಲಿ ನಡೆದ ಯುಎಸ್ ಓಪನ್ನ ಅಂತಿಮ ಸಮರ ನಡಾಲ್ ಹಾಗೂ ಜೋಕೊವಿಚ್ ನಡುವಿನ 37ನೇ ಮುಖಾಮುಖಿಯಾಗಿತ್ತು. ಅದಕ್ಕೂ ಮುನ್ನ ನಡೆದಿದ್ದ 36 ಪಂದ್ಯಗಳ ಮುಖಾಮುಖಿಯಲ್ಲಿ ನಡಾಲ್ 21 ಬಾರಿ ಗೆದ್ದಿದ್ದರೆ, ಜೋಕೊವಿಚ್ 15 ಬಾರಿ ಜಯ ಗಳಿಸಿದ್ದರು.

**ಫಿಫಾ ಶ್ರೇಣಿ 155 ನೇ ಸ್ಥಾನಕ್ಕೆ ಕುಸಿದ ಭಾರತ**

ಫಿಫಾ ಫುಟ್ ಬಾಲ್ ಶ್ರೇಣಿಯಲ್ಲಿ ಭಾರತ ಮತ್ತೊಮ್ಮೆ ಮುಖಭಂಗ ಅನುಭವಿಸಿದೆ. ಇತ್ತೀಚೆಗೆ ಬಿಡುಗಡೆಗೊಳಿಸಿದ ಫಿಫಾ ಫುಟ್ ಬಾಲ್ ಶ್ರೇಣಿಯಲ್ಲಿ ಭಾರತ 10 ಸ್ಥಾನ ಕುಸಿತ ಕಂಡಿದ್ದು, 155 ನೇ ಸ್ಥಾನ ಪಡೆದುಕೊಂಡಿದೆ.

- ಇತ್ತೀಚೆಗಷ್ಟೇ SAFF ಫುಟ್ ಬಾಲ್ ಚಾಂಪಿಯನ್ ಷಿಪ್ ನಲ್ಲಿ ಆಫ್ಘಾನಿಸ್ತಾನದ ವಿರುದ್ಧ 0-2 ರಲ್ಲಿ ಭಾರತ ಸೋಲನ್ನು ಅನುಭವಿಸಿತ್ತು. ಪ್ರಸ್ತುತ ಫಿಫಾ ಶ್ರೇಣಿಯಲ್ಲಿ 10 ಸ್ಥಾನ ಕುಸಿತಗೊಂಡಿರುವುದು ಭಾರತಕ್ಕೆ ಮತ್ತೊಂದು ಆಘಾತ ನೀಡಿದೆ. ಆಪ್ಘಾನಿಸ್ತಾನ 133 ನೇ ಸ್ಥಾನ ಪಡೆದುಕೊಂಡು ಭಾರತಕ್ಕಿಂತ ಮುಂದಿದೆ.
- ಪ್ರಸ್ತುತ ವಿಶ್ವ ಚಾಂಪಿಯನ್ ಆಗಿರುವ ಸ್ಪೇನ್ ಶ್ರೇಣಿಯಲ್ಲಿ ಮೊದಲ ಸ್ಥಾನದಲ್ಲಿದೆ. ಅರ್ಜೇಂಟಿನಾ ಎರಡನೇ ಸ್ಥಾನದಲ್ಲಿ, ಜರ್ಮನಿ ಮೂರನೇ ಸ್ಥಾನದಲ್ಲಿ ಮತ್ತು ಇಟಲಿ ನಾಲ್ಕನೇ ಸ್ಥಾನದಲ್ಲಿವೆ.

**"ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿ (IOC)" ಅಧ್ಯಕ್ಷರಾಗಿ "ಥಾಮಸ್ ಬಾಚ್ (Thomas Bach)"**

ಜರ್ಮನಿಯ ಥಾಮಸ್ ಬಾಚ್ ಅವರು ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿ (International Olympic Committee) ಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ಜಾಕಸ್ ರೊಗ್ ಅವರ ಅಧಿಕಾರ ಅವಧಿ ಮುಗಿದ ಹಿನ್ನಲೆಯಲ್ಲಿ ಈ ಸ್ಥಾನ ತೆರವಾಗಿತ್ತು. ರೊಗ್ 12 ವರ್ಷಗಳ ಕಾಲ ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿಯ ಅಧ್ಯಕ್ಷರಾಗಿದ್ದರು,

- ಜರ್ಮನಿ ಮೂಲದ ಥಾಮಸ್ ಅವರು ವೃತ್ತಿಯಲ್ಲಿ ವಕೀಲರು. 59 ವರ್ಷ ವಯಸ್ಸಿನ ಥಾಮಸ್ ಅವರು ಸ್ಪರ್ಧೆಯಲ್ಲಿ ಇದ್ದ ಇತರೆ ಐದು ಸ್ಪರ್ಧಿಗಳನ್ನು ಮಣಿಸಿ ಈ ಶ್ರೇಷ್ಠ ಸ್ಥಾನವನ್ನು ಪಡೆಯುವಲ್ಲಿ ಯಶಸ್ವಿಯಾದರು.

- ಒಲಂಪಿಕ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಥಾಮಸ್ 59 ಮತಗಳನ್ನು ಪಡೆದರೆ ಇವರಿಗೆ ತೀವ್ರ ಪ್ರತಿಸ್ಪರ್ಧೆ ಒಡ್ಡಿದ್ದ ರಿಚರ್ಡ್ ಕಾರಿನ್ ಕೇವಲ 29 ಮತಗಳನ್ನು ಪಡೆದರು.
- ಬಾಚ್ ಮುಂದಿನ ಎಂಟು ವರ್ಷಗಳ ಕಾಲ ಅಂದರೆ 2021 ರ ವರೆಗೆ ಈ ಹುದ್ದೆಯಲ್ಲಿ ಮುಂದುವರೆಯಲ್ಲಿದ್ದಾರೆ. ಅನಂತರ ಕೂಡ ಚುನಾವಣೆಯಲ್ಲಿ ಸ್ಪರ್ಧಿಸಲು ಇವರು ಅರ್ಹರಾಗಿರುತ್ತಾರೆ.
- ಬಾಚ್ ಈ ಹಿಂದೆ ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. 1996-2004 ರ ವರೆಗೆ ಸಮಿತಿಯ ಕಾರ್ಯಕಾರಿ ಸದಸ್ಯರಾಗಿದ್ದರು, 2006 ರಿಂದ ಉಪಾಧ್ಯಕರಾಗಿಯೂ ಸಹ ಕಾರ್ಯನಿರ್ವಹಿಸಿದ್ದರು.
- 2006 ರಿಂದ “ಜರ್ಮನ್ ಒಲಂಪಿಕ್ ಸ್ಪೋರ್ಟ್ಸ್ ಕಾನಫೆಢರೇಶನ್” ಅಧ್ಯಕ್ಷರೂ ಸಹ ಆಗಿದ್ದಾರೆ.

**ಬ್ರಿಟನ್ ನ ಗ್ಯಾರೆಥ್ ಫ್ರಾಂಕ್ ಬೆಲ್ ಅನ್ನು ವಿಶ್ವದ ಅತ್ಯಂತ ದುಬಾರಿ ಫುಟ್ಬಾಲ್ ಆಟಗಾರ**

ಸ್ಪೇನ್‌ನ "ರಿಯಲ್ ಮ್ಯಾಡ್ರಿಡ್' ಫುಟ್‌ಬಾಲ್ ತಂಡ ಗ್ಯಾರೆಥ್ ಫ್ರಾಂಕ್ ಬೇಲ್ ಎಂಬ 24ರ ಹರೆಯದ ಆಟಗಾರನನ್ನು 100 ದಶಲಕ್ಷ ಯುರೋ (85ಮಿಲಿಯನ್ ಪೌಂಡ್) ಅಂದರೆ ಸುಮಾರು 875 ಕೋಟಿ ರೂ.ಗೆ ಖರೀದಿಸಿದೆ. ಇದರೊಂದಿಗೆ ಗ್ಯಾರೆಥ್, ವಿಶ್ವದಲ್ಲಿಯೇ ಅತ್ಯಂತ ದುಬಾರಿ ಫುಟ್ಬಾಲ್ ಆಟಗಾರ ಎಂಬ ವಿಶ್ವದಾಖಲೆಗೆ ಪಾತ್ರರಾಗಿದ್ದಾರೆ.

**ಫ್ರಾಂಕ್ ಬೆಲ್:**

- ಬ್ರಿಟನ್‌ನ ವೇಲ್ಸ್ ಮೂಲದ ಗ್ಯಾರೆಥ್, ಇದುವರೆಗೆ ಇಂಗ್ಲೆಂಡ್‌ನ ಟೋಟನ್‌ಹ್ಯಾಮ್ ಹಾಟ್‌ಸ್ಪುರ್ ತಂಡದ ಪರ ಮುನ್ಪಡೆ ಆಟಗಾರರಾಗಿ ಆಡುತ್ತಿದ್ದರು. ಕಳೆದ ಮೂರು- ನಾಲ್ಕು ವರ್ಷಗಳಲ್ಲಿ ತನ್ನ ಅತ್ಯದ್ಭುತ ಪ್ರತಿಭೆಯಿಂದ ಇಡೀ ಫುಟ್ಬಾಲ್ ಜಗತ್ತಿನ ಗಮನ ಸೆಳೆದಿದ್ದ ಈ ಯುವಕನ ಮೇಲೆ ಸ್ಪೇನ್ ಸೇರಿದಂತೆ ಯುರೋಪ್‌ನ ಹಲವು ಶ್ರೀಮಂತ ಫುಟ್ಬಾಲ್ ತಂಡಗಳು ಕಣ್ಣಿಟ್ಟಿದ್ದವು.
- ಆದರೆ ಈ ಬಿಕರಿ ಹಣಾಹಣಿಯಲ್ಲಿ ಗ್ಯಾರೆಥ್ ಮುಂದೆ ಹಣದ ಕೊಪ್ಪರಿಗೆಯನ್ನೇ ಒಡ್ಡಿರುವ ಜಗತ್ತಿನ ಅತಿ ಶ್ರೀಮಂತ ತಂಡಗಳ ಪೈಕಿ ಒಂದಾದ ರಿಯಲ್ ಮ್ಯಾಡ್ರಿಡ್, ಯುವ ಫುಟ್ಬಾಲ್ ಆಟಗಾರನನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದೆ.
- ಈ ಹಿಂದೆ ರಿಯಲ್ ಮ್ಯಾಡ್ರಿಡ್ ತಂಡ 80ಮಿಲಿಯನ್ ಪೌಂಡ್ ಅಂದರೆ ಸುಮಾರು 820 ಕೋಟಿ ರೂ. ತೆತ್ತು ಕ್ರಿಸ್ಟಿಯಾನೊ ರೋನಾಲ್ಡೊ ಅವರನ್ನು ಖರೀದಿ ಮಾಡಿದ್ದೇ ದಾಖಲೆಯಾಗಿತ್ತು.

**ಬೇಲ್‌ಗೆ ಏಕಿಷ್ಟು ಬೆಲೆ?**

2011 ಮತ್ತು 2013ರಲ್ಲಿ ಪಿಎಫ್‌ಎ ವರ್ಷದ ಆಟಗಾರ ಎಂಬ ಗೌರವಕ್ಕೆ ಗ್ಯಾರೆಥ್ ಪಾತ್ರನಾಗಿದ್ದ. - 2011ರಲ್ಲಿ ವರ್ಷದ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ತಂಡದ ಸದಸ್ಯನಾಗಿದ್ದ. - 2012-13ರಲ್ಲಿ ಪಿಎಫ್‌ಎ ವರ್ಷದ ಯುವ ಆಟಗಾರ, ಎಫ್.ಡಬ್ಲ್ಯು.ಎ ವರ್ಷದ ಫುಟ್ಬಾಲ್ ತಾರೆ ಎಂಬ ಹಿರಿಮೆಗೆ ಪಾತ್ರನಾಗಿದ್ದರು.

**ಎಸ್. ಶ್ರೀಶಾಂತ್ ಮತ್ತು ಅಂಕಿತ್ ಚವಾಣ್ ಗೆ ಆಜೀವ ನಿಷೇಧ ಹೇರಿದ ಬಿಸಿಸಿಐ**

ಐಪಿಎಲ್ ಆರನೇ ಆವೃತ್ತಿಯ ವೇಳೆ ಸ್ಪಾಟ್ ಫಿಕ್ಸಿಂಗ್ ನಡೆಸಿದ ರಾಜಸ್ತಾನ ರಾಯಲ್ಸ್ ತಂಡದ ವೇಗಿ ಎಸ್. ಶ್ರೀಶಾಂತ್ ಮತ್ತು ಅಂಕಿತ್ ಚವಾಣ್ ವಿರುದ್ಧ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕೊನೆಗೂ ಕಠಿಣ ಕ್ರಮ ಕೈಗೊಂಡಿದ್ದು, ಇಬ್ಬರೂ ಆಟಗಾರರ ಮೇಲೆ ಆಜೀವ ನಿಷೇಧ ಹೇರಿದೆ.

**ಬಿಸಿಸಿಐ ಸಭೆ:**

- ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದ್ದ ಬಿಸಿಸಿಐ ಶಿಸ್ತು ಸಮಿತಿ ಸಭೆ ಈ ಮಹತ್ವದ ನಿರ್ಧಾರ ತೆಗೆದುಕೊಂಡಿತು.
- ಈ ಪ್ರಕರಣದಲ್ಲಿ ಕಳಂಕ ಹೊತ್ತಿರುವ ಅಮಿತ್ ಸಿಂಗ್‌ಗೆ ಐದು ವರ್ಷ ಮತ್ತು ಗುಜರಾತ್‌ನ ಸಿದ್ಧಾರ್ಥ್ ತ್ರಿವೇದಿಗೆ ಒಂದು ವರ್ಷ ನಿಷೇಧ ಶಿಕ್ಷೆ ಹೇರಲಾಗಿದೆ.
- ಎನ್. ಶ್ರೀನಿವಾಸನ್ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು.
- ರಾಯಲ್ಸ್ ತಂಡದ ಮಾಜಿ ಆಟಗಾರ ಹಾಗೂ ಎಡಗೈ ಸ್ಪಿನ್ನರ್ ಹರ್ಮಿತ್ ಸಿಂಗ್‌ಗೆ ಎಚ್ಚರಿಕೆ ನೀಡಿ ಅವರನ್ನು ಖುಲಾಸೆ ಗೊಳಿಸಲಾಗಿದೆ. ದಾಖಲೆಗಳು ಲಭ್ಯವಾಗದ ಕಾರಣ ಹರ್ಮಿತ್ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.
- ಸ್ಪಾಟ್ ಫಿಕ್ಸಿಂಗ್‌ನಲ್ಲಿ ಭಾಗಿಯಾದ ಇನ್ನೊಬ್ಬ ಆಟಗಾರ ರಾಯಲ್ಸ್ ತಂಡದ ಅಜಿತ್ ಚಾಂಡಿಲ ಮೇಲೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಇನ್ನಷ್ಟು ವಿಚಾರಣೆ ನಡೆಯಲಿದೆ ಎಂದು ಬಿಸಿಸಿಐ ಶಿಸ್ತು ಸಮಿತಿ ತಿಳಿಸಿದೆ.
- ಅಜಿತ್ ಚಾಂಡಿಲ ಸದ್ಯಕ್ಕೆ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. 'ಸ್ಪಾಟ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿ ಕ್ರಿಕೆಟ್‌ಗೆ ಕಳಂಕ ತಂದಿರುವ ಶ್ರೀಶಾಂತ್ ಮತ್ತು ಅಂಕಿತ್ ಚವಾಣ್ ಮೇಲೆ ಆಜೀವ ನಿಷೇಧ ಶಿಕ್ಷೆ ಹೇರುವ ತೀರ್ಮಾನ ಕೈಗೊಳ್ಳಲಾಯಿತು' ಎಂದು ಬಿಸಿಸಿಐ ಉಪಾಧ್ಯಕ್ಷ ನಿರಂಜನ್ ಷಾ ಸಭೆಯ ಬಳಿಕ ಮಾಧ್ಯಮದವರಿಗೆ ತಿಳಿಸಿದರು.

**ಐಪಿಎಲ್ ಟಿ-20 ಜನಕ ಲಲಿತ್ ಮೋದಿಗೆ ಆಜೀವ ನಿಷೇಧ ವಿಧಿಸಿದ ಬಿಸಿಸಿಐ**

ಭಾರತೀಯ ಕ್ರಿಕೆಟ್‌ಗೆ ವಾಣಿಜ್ಯದ ಬಣ್ಣ ನೀಡಿ ಐಪಿಎಲ್ ಟಿ-20 ಹುಟ್ಟುಹಾಕಿದ ಲಲಿತ್ ಮೋದಿಗೆ ನಿರೀಕ್ಷೆಯಂತೆ ಬಿಸಿಸಿಐ ಆಜೀವ ನಿಷೇಧ ವಿಧಿಸಿದೆ. ಅಶಿಸ್ತು ಮತ್ತು ನಿಯಮ ಉಲ್ಲಂಘನೆಗೆ ಸಂಬಂಧಿಸಿ 8 ರೋಪಗಳಲ್ಲಿ ಮೋದಿ ತಪ್ಪಿತಸ್ಥ ಎಂದು ಬಿಸಿಸಿಐ ಶಿಸ್ತು ಸಮಿತಿ ತೀರ್ಮಾನಿಸಿದೆ.

**ವರದಿಯಲ್ಲೇನಿತ್ತು?**

- ಅರುಣ್ ಜೇಟ್ಲಿ, ಜ್ಯೋತಿರಾದಿತ್ಯ ಸಿಂಧ್ಯಾ ಅವರನ್ನೊಳಗೊಂಡ ಶಿಸ್ತು ಸಮಿತಿ ಮೋದಿ ವಿರುದ್ಧ ಜುಲೈನಲ್ಲಿ 134 ಪುಟಗಳ ವರದಿ ನೀಡಿತ್ತು. ಇದರಲ್ಲಿ ಮೋದಿ ಹಣ ದುರುಪಯೋಗ, ಅಶಿಸ್ತು ಸೇರಿದಂತೆ 8 ವಿಷಯಗಳಲ್ಲಿ ತಪ್ಪಿತಸ್ಥ ಎಂದು ಹೇಳಿದ್ದು ಆಜೀವ ನಿಷೇಧಕ್ಕೆ ಶಿಫಾರಸು ಮಾಡಿತ್ತು.
- ಬಿಸಿಸಿಐ ವಿಶೇಷ ಸಾಮಾನ್ಯ ಸಭೆಯಲ್ಲಿ ಶಿಸ್ತು ಸಮಿತಿ ನೀಡಿದ್ದ ಶಿಫಾರಸು ಕುರಿತು ದೀರ್ಘ ಚರ್ಚೆ ನಡೆಯಿತು. ನಿಯಮ ಉಲ್ಲಂಘಿಸಿದ 49 ವರ್ಷದ ಮೋದಿ ವಿರುದ್ಧ ನಿಯಮ 32 (4) ಪ್ರಕಾರ ಕ್ರಮ ಕೈಗೊಳ್ಳಲಾಗಿದೆ ಬಿಸಿಸಿಐ ವಿವರಿಸಿದೆ.
- ಮೋದಿ ಅಶಿಸ್ತು ಮತ್ತು ನಿಯಮ ಉಲ್ಲಂಘನೆಯಂಥ ಗಂಭೀರವಾದ ಆರೋಪಗಳಲ್ಲಿ ತಪ್ಪಿತಸ್ಥರು ಎಂದು ಶಿಸ್ತು ಸಮಿತಿ ವರದಿ ನೀಡಿದೆ.
- ಬಿಸಿಸಿಐ ತನ್ನ ಅಧಿಕಾರವನ್ನು ಬಳಸಿಕೊಂಡು ಆಜೀವ ನಿಷೇಧದಂಥ ಕಠಿಣ ಕ್ರಮ ಕೈಗೊಂಡಿದೆ.

## ಪ್ರಶಸ್ತಿಗಳು

### ಓಡಿಯಾ ಸಾಹಿತಿ ಹರಪ್ರಸಾದ್ ದಾಸ್ ಗೆ ಮೂರ್ತಿ ದೇವಿ ಪ್ರಶಸ್ತಿ

ಖ್ಯಾತ ಓಡಿಯಾ ಸಾಹಿತಿ ಹರಪ್ರಸಾದ್ ದಾಸ್ ರವರನ್ನು 2012ನೇ ಸಾಲಿನ ಪ್ರತಿಷ್ಠಿತ ಮೂರ್ತಿದೇವಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

- ಹರಪ್ರಸಾದ್ ಅವರ ಸಮಕಾಲೀನ ಮಹಾಭಾರತದ ಪದ್ಯರೂಪವಾದ "ವಂಶ" ಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಪ್ರತಿಭಾ ರೇ ನಂತರ ಈ ಪ್ರಶಸ್ತಿಯನ್ನು ಪಡೆಯುತ್ತಿರುವ ಎರಡನೇ ಓಡಿಯಾ ಸಾಹಿತಿ ಹರಪ್ರಸಾದ್ ದಾಸ್ ಆಗಿದ್ದಾರೆ.

**ಪ್ರಶಸ್ತಿಯ ಬಗ್ಗೆ:**

- ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ನೀಡಲಾಗುತ್ತಿದೆ.
- ಭಾರತೀಯ ಜ್ಞಾನಪೀಠ ಫೌಂಡೇಶನ್ ಈ ಪ್ರಶಸ್ತಿಯನ್ನು ನೀಡುತ್ತಿದೆ.
- ಪ್ರಶಸ್ತಿಯು ಎರಡು ಲಕ್ಷ ನಗದು ಬಹುಮಾನ, ಸರಸ್ವತಿ ವಿಗ್ರಹ, ಫಲಕ ಮತ್ತು ಶಾಲುವನ್ನು ಒಳಗೊಂಡಿದೆ.

### ಅಮಿತಾಬ್ ಬಚ್ಚನ್ ಗೆ "ಗ್ಲೋಬಲ್ ಡೈವರ್ಸಿಟಿ ಆವಾರ್ಡ್ (Global Diversity Award)"

ಬಾಲಿವುಡ್ ನ ಮೇರುನಟ, ಮೆಗಾಸ್ಟಾರ್ ಅಮಿತಾಬ್ ಬಚ್ಚನ್ ಅವರನ್ನು ಗ್ಲೋಬಲ್ ಡೈವರ್ಸಿಟಿ ಆವಾರ್ಡ್ ಗೆ ಆಯ್ಕೆಮಾಡಲಾಗಿದೆ. ಚಿತ್ರರಂಗಕ್ಕೆ ಈ ಮೇರುನಟ ನೀಡಿರುವ ಗಣನೀಯ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಗೆ ಅಮಿತಾಬ್ ಅವರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಬುಧವಾರ ನವದೆಹಲಿಯಲ್ಲಿ ವಿತರಿಸಲಾಗುವುದು. ಇದೇ ವೇಳೆ ಅಮಿತಾಬ್ ಸಂಸತ್ ಭವನಕ್ಕೂ ಭೇಟಿ ನೀಡಲಿದ್ದಾರೆ.

- 1984 ರಲ್ಲಿ ಅಮಿತಾಬ್ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. 2001 ರಲ್ಲಿ ಪದ್ಮ ಭೂಷಣ ಪ್ರಶಸ್ತಿಯನ್ನು ಸಹ ಅಮಿತಾಬ್ ಅವರಿಗೆ ನೀಡಲಾಗಿದೆ.
- 1999 ರಲ್ಲಿ ಬಿಬಿಸಿ ಚಾನೆಲ್ ನಡೆಸಿದ ಆನ್ ಲೈನ್ ಸಮೀಕ್ಷೆಯಲ್ಲಿ ಅಮಿತಾಬ್ ಅವರನ್ನು "ಗ್ರೇಟೆಸ್ಟ್ ಸ್ಟಾರ್ ಆಫ್ ದ ಸ್ಕ್ರೀನ್ ಅಥವಾ ಸ್ಟೇಜ್ ಆಫ್ ದಿ ಮಿಲೇನಿಯಂ" ಎಂಬ ಶ್ರೇಯಕ್ಕೂ ಒಳಗಾಗಿದ್ದರು.
- ಸುಮಾರು 180 ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಬಚ್ಚನ್ ಅವರಿಗೆ ಕೇವಲ ರಾಷ್ಟ್ರ ಮಟ್ಟ ಪ್ರಶಸ್ತಿಯಲ್ಲದೇ ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಚಿತ್ರರಂಗಕ್ಕೆ ಬಚ್ಚನ್ ನೀಡಿರುವ ಸೇವೆಯನ್ನು ಗುರುತಿಸಿ ಫ್ರೆಂಚ್ ಸರ್ಕಾರದ ಅತ್ಯುನ್ನತ್ತ ಪ್ರಶಸ್ತಿಯಾದ "ನೈಟ್ ಆಫ್ ದಿ ಲಿಜನ್ ಆಫ್ ಹಾನರ್" ಪ್ರಶಸ್ತಿಯನ್ನು 2007 ರಲ್ಲಿ ನೀಡಿದೆ.
- ಅಮಿತಾವ್ ಅವರ ಮೇಣದ ಪ್ರತಿಮೆಯನ್ನು ಮೆಡಮ್ ಟುಸ್ಸಾಡ್ಸ್ ಸೇರಿದಂತೆ, ನ್ಯೂಯಾರ್ಕ್, ಹಾಂಕ್ ಕಾಂಗ್ ಮತ್ತು ಬ್ಯಾಕಾಂಕ್ ನಲ್ಲೂ ಸ್ಥಾಪಿಸಲಾಗಿದೆ.

- 2012 ರಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟದ ರಿಲೇ ವೇಳೆ ಒಲಂಪಿಕ್ ಜ್ಯೋತಿಯನ್ನು ಬಚ್ಚನ್ ಹಿಡಿಯುವ ಮೂಲಕ ವಿಶ್ವದ ಗಮನ ಸೆಳೆದಿದ್ದರು.

**ಎನ್ ಟಿಪಿಸಿ ಗೆ ಇಂದಿರಾ ಗಾಂಧಿ ರಾಜಭಾಷ ಪ್ರಶಸ್ತಿ**

ಹಿಂದಿ ಭಾಷೆ ಪ್ರೋತ್ಸಾಹಿಸಿದಕ್ಕಾಗಿ ನೀಡಲಾಗುವ ಇಂದಿರಾ ಗಾಂಧಿ ರಾಜಭಾಷ ಪ್ರಶಸ್ತಿಯನ್ನು ರಾಷ್ಟ್ರೀಯ ಥರ್ಮಲ್ ಪವರ್ ಕಾರ್ಪೋರೇಷನ್ ಗೆ ನೀಡಲಾಗಿದೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಈ ಪ್ರಶಸ್ತಿಯನ್ನು ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ವಿತರಿಸಿದರು. ಎನ್.ಟಿ.ಪಿ.ಸಿ. ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಅರುಪ್ ರಾಯ್ ಚೌಧರಿ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

- ಇಂದಿರಾ ಗಾಂಧಿ ರಾಜಭಾಷ ಪ್ರಶಸ್ತಿಯನ್ನು ಹಿಂದಿ ದಿವಸ್ ರಂದು ನೀಡಲಾಗುತ್ತದೆ.
- ಹಿಂದಿ ಭಾಷೆಯನ್ನು ಪ್ರೋತ್ಸಾಹಿಸುವುದಕ್ಕೆ ಶ್ರಮಿಸುವ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ರಾಷ್ಟ್ರೀಯ ಭಾಷೆಯನ್ನು ಉತ್ತೇಜಿಸುವ ಸಂಸ್ಥೆಗಳಿಗೆ ಒಟ್ಟು ಐದು ವರ್ಗಗಳಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅವುಗಳೆಂದರೆ:
  - ಸಚಿವಾಲಯ/ ಸರ್ಕಾರಿ ಇಲಾಖೆಗಳು
  - ಬ್ಯಾಂಕ್ ಮತ್ತು ಇತರೆ ಹಣಕಾಸು ಸಂಸ್ಥೆಗಳು
  - ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು
  - ಕೇಂದ್ರ ಸರ್ಕಾರದ ನೌಕರರು ಹಿಂದಿಯಲ್ಲಿ ಬರೆಯಲಾಗುವ ಪುಸ್ತಕಗಳಿಗೆ
  - ಸ್ವಾಯುತ್ತ ಮಂಡಳಿ, ಟ್ರಸ್ಟ್ ಮತ್ತು ಸೊಸೈಟಿಗಳು

**ಮಲಾಲ ಯೂಸಫ್ ಝೈ ಗೆ ಆಮ್ನಸ್ಟಿ ಅತ್ಯುತ್ತಮ ಪ್ರಶಸ್ತಿ**

ಪಾಕಿಸ್ತಾನದ ಬಾಲಕಿ ಮತ್ತು ಮಹಿಳ ಶಿಕ್ಷಣ ಹೋರಾಟಗಾರ್ತಿ ಹಾಗೂ ಅಮೆರಿಕಾದ ಖ್ಯಾತ ಗಾಯಕಿ, ಮಾನವ ಮತ್ತು ಸಾಮಾಜಿಕ ಹಕ್ಕು ಹೋರಾಟಗಾರ್ತಿ ಹ್ಯಾರಿ ಬೆಲಫೊಂಟೆ ಅವರಿಗೆ ಜಂಟಿಯಾಗಿ "ಅಮ್ನೆಸ್ಟಿ ಇಂಟರ್ ನ್ಯಾಷನಲ್ ಅಂಬಾಸಿಡರ್ ಆಫ್ ಕನ್ ಸೈನ್ಸ್ ಅವಾರ್ಡ್ 2013 (Amnesty International Ambassador of Conscience Award 2013)" ಆಯ್ಕೆಮಾಡಲಾಗಿದೆ.

- ಅಂಬಾಸಿಡರ್ ಆಫ್ ಕನ್ ಸೈನ್ಸ್ ಪ್ರಶಸ್ತಿಯು ಮಾನವ ಹಕ್ಕು ರಕ್ಷಣೆಗಾಗಿ ಶ್ರಮಿಸುವ ವ್ಯಕ್ತಿಗಳಿಗೆ ನೀಡಲಾಗುವ ಈ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಪ್ರಶಸ್ತಿಯಾಗಿದೆ.

- ಪಾಕಿಸ್ತಾನದಲ್ಲಿ ಮಹಿಳೆಯರ ಪರ ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯಲು ಹೋರಾಟ ಮಾಡಿ ತಾಲಿಬಾನ್ ಅವರಿಂದ ಗುಂಡೇಟು ತಿಂದ 16 ವರ್ಷದ ಮಲಾಲ ಹಾಗೂ ಮಾನವ ಹಕ್ಕು ಹೋರಾಟಕ್ಕೆ ತಮ್ಮನ್ನೇ ಮುಡಿಪಾಗಿಸಿಕೊಂಡಿರುವ ಹ್ಯಾರಿ ಇತರರಿಗೆ ಮಾದರಿಯಾಗಿದ್ದು, ಈ ಪ್ರಶಸ್ತಿಗೆ ಅರ್ಹರೆಂದು ಅಮ್ನೆಸ್ಟಿ ಸಂಸ್ಥೆ ಹೇಳಿದೆ.
- ಈ ಹಿಂದೆ ಚೆಝ್ ರಿಪಬ್ಲಿಕ್ ನ ಮಾಜಿ ಅಧ್ಯಕ್ಷ ವಕ್ಲವ್ ಹ್ಯಾವೆಲ್, ದಕ್ಷಿಣಾ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ, ಮಯನ್ಮಾರ್ ವಿರೋಧ ಪಕ್ಷದ ನಾಯಕಿ ಆಂಗ್ ಸನ್ ಸೂಕಿ ಈ ಪ್ರಶಸ್ತಿಯನ್ನು ಪಡೆದ ಇತರರು.

**ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪ್ರಕಟ**

ಕೌನ್ಸಿಲ್ ಆಫ್ ಸೈಂಟಿಫಿಕ್ ರಿಸರ್ಚ್ (ಸಿಎಸ್ಐಆರ್) ಸಂಸ್ಥಾಪನೆಯ ದಿನದ ಅಂಗವಾಗಿ ನೀಡಲಾಗುವ ಪ್ರತಿಷ್ಠಿತ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ-2013 ಅನ್ನು ಪ್ರಕಟಿಸಲಾಗಿದೆ. ಡಾ.ಸಮೀರ್ ಬ್ರಹ್ಮಚಾರಿ, ಡೈರೆಕ್ಟರ್ ಜನರಲ್, ಸಿಎಸ್ಐಆರ್ ಅವರು ಸಂಸ್ಥೆಯ 71 ನೇ ಸಂಸ್ಥಾಪನ ದಿನದ ಅಂಗವಾಗಿ ಪ್ರಶಸ್ತಿಯನ್ನು ಪ್ರಕಟಿಸಿದರು. ಈ ಪ್ರಶಸ್ತಿಯನ್ನು ಪ್ರಧಾನ ಮಂತ್ರಿಗಳು ವಿತರಣೆ ಮಾಡಲಿದ್ದಾರೆ.

**ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ**

- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ಯುವ ವಿಜ್ಞಾನಿಗಳಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯನ್ನು 1957 ರಲ್ಲಿ ಸ್ಥಾಪಿಸಲಾಗಿದೆ. ಕೌನ್ಸಿಲ್ ಆಫ್ ಸೈಂಟಿಫಿಕ್ ರಿಸರ್ಚ್ ನ ಸಂಸ್ಥಾಪನ ನಿರ್ದೇಶಕರು ಹಾಗೂ ಈ ಸಂಸ್ಥೆ ಸ್ಥಾಪನೆಗೊಳ್ಳಲು ರೂವಾರಿಗಳಾದ ವಿಜ್ಞಾನಿ ಶಾಂತಿ ಸ್ವರೂಪ್ ಭಟ್ನಾಗರ್ ಅವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಸದ್ಯ ಇದುವರೆಗೆ 450 ಕ್ಕೂ ಹೆಚ್ಚು ವಿಜ್ಞಾನಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿಯು ನಗದು ಬಹುಮಾನ, ಫಲಕ ಮತ್ತು ಉಲ್ಲೇಖವನ್ನು ಒಳಗೊಂಡಿದೆ.
- ಪ್ರಸಕ್ತ ಸಾಲಿಗೆ ಆಯ್ದ ಎಂಟು ಪ್ರತಿಭಾವಂತ ವಿಜ್ಞಾನಿಗಳನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಜೀವವಿಜ್ಞಾನ ಕ್ಷೇತ್ರ:** ಡಾ.ಸತೀಶ್ ಚುಕ್ಕುರುಂಬಿ ರಾಘವನ್

**ರಾಸಾಯನಿಕ ವಿಜ್ಞಾನ ಕ್ಷೇತ್ರ:** ಡಾ ಯಮುನ ಕೃಷ್ಣನ್

**ಎಂಜಿನಿಯರಿಂಗ್:** ಡಾ.ಬಿಕ್ರಮಜಿತ್ ಬಸು ಮತ್ತು ಸುಮನ್ ಚಕ್ರಭಾರ್ತಿ

**ಗಣಿತ ಕ್ಷೇತ್ರ:** ಏಕಾಂತ್ ಪ್ರಭಾಕರ್ ಘಾಟೆ

**ವೈದ್ಯಕೀಯ ಕ್ಷೇತ್ರ:** ಡಾ ಪುಷ್ಕರ್ ಶರ್ಮಾ

**ಭೌತಶಾಸ್ತ್ರ: ಡಾ ಅಮೋಲ್ ದಿಗೆ ಮತ್ತು ಡಾ ವಿ ಬಿ ಶೆಣೈ**

**ಭಾರತೀಯ ಮೂಲದ ಪರಿಸರ ತಜ್ಞನಿಗೆ "ಕ್ಲಿಂಟನ್ ಗ್ಲೋಬಲ್ ಸಿಟಿಜನ್" ಪ್ರಶಸ್ತಿ**

ಭಾರತ ಮೂಲದ ಪರಿಸರವಾದಿ ಬಂಕರ್ ರಾಯ್ ಮತ್ತು ಪಾಕಿಸ್ತಾನದ ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕುಗಾಗಿ ಹೋರಾಟ ನಡೆಸಿ ವಿಶ್ವದ ಮನೆ ಮಾತಾಗಿರುವ ಪಾಕಿಸ್ತಾನದ ಯುವತಿ ಮಲಾಲ ಯೂಸಫ್ ಝೈ ಅವರನ್ನು ಪ್ರಸ್ತಕ ಸಾಲಿನ "ಕ್ಲಿಂಟನ್ ಗ್ಲೋಬಲ್ ಸಿಟಿಜನ್" ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

- ರಾಯ್ ಅವರು "ಬೆರ್ ಪೂಟ್ (Bare Foot)" ಶಾಲೆಯ ಸಂಸ್ಥಾಪಕರು. ಈ ಸಂಸ್ಥೆ ಸುಮಾರು 40 ವರ್ಷಗಳಿಂದ ಗ್ರಾಮೀಣ ಭಾಗದಲ್ಲಿ ತಲೆದೂರುವ ನೀರಿನ ಸಮಸ್ಯೆಗೆ ಸ್ಪಂದಿಸಿ ನೀರಿನ ಬವಣೆಯನ್ನು ದೂರ ಮಾಡಿದೆ.
- ಬೆರ್ ಪೂಟ್ ಸಂಸ್ಥೆಯ ಶ್ಲಾಘನೀಯ ಕಾರ್ಯದಿಂದಾಗಿ ಸುಮಾರು 1 ಮಿಲಿಯನ್ ಲೀಟರ್ ಗೂ ಹೆಚ್ಚು ಮಳೆ ನೀರನ್ನು ಸಂಗ್ರಹಿಸುವ ಮೂಲಕ 239,000 ವಿದ್ಯಾರ್ಥಿಯರಿಗೆ ನೀರಿನ ದಾಹವನ್ನು ನೀಗಿಸಿದ್ದಾರೆ.
- ದಿ ಗಾರ್ಡಿಯನ್ ಪತ್ರಿಕೆ ಹೊರತಂದಿದ್ದ ಪರಿಸರವನ್ನು ಸಂರಕ್ಷಿಸಬಲ್ಲ ವಿಶ್ವದ 50 ಪ್ರಮುಖ ಪರಿಸರ ತಜ್ಞರ ಪಟ್ಟಿಯಲ್ಲಿ ರಾಯ್ ಅವರು ಸ್ಥಾನ ಪಡೆದಿದ್ದರು, ಅಲ್ಲದೇ ಟೈಮ್ಸ್ ನ ಪ್ರಭಾವಿ ನೂರು ವ್ಯಕ್ತಿಗಳ ಪಟ್ಟಿಯಲ್ಲೂ ಸ್ಥಾನ ಪಡೆದಿದ್ದರು. ರಾಯ್ ಸೌರ ಶಕ್ತಿ ಬಳಸಿ ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸುವ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ.

**ಭಾರತ ಮೂಲದ ನೀನಾ ದಾವುಲೂರಿಗೆ 2014 ನೇ ಸಾಲಿನ ಮಿಸ್ ಅಮೆರಿಕ ಪ್ರಶಸ್ತಿ**

ಆಂಧ್ರಪ್ರದೇಶದ ವಿಜಯವಾಡ ಮೂಲದ ನೀನಾ ದಾವುಲೂರಿ, 2014ನೇ ಸಾಲಿನ ಮಿಸ್ ಅಮೆರಿಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಮಿಸ್ ಅಮೆರಿಕ ಫೈನಲ್ ಸ್ಪರ್ಧೆಯಲ್ಲಿ ಕ್ರಿಸ್ಟಲ್ ಲೀ ಮತ್ತು ಕೆಸ್ಲೆ ಗ್ರಿಸ್‌ವೋಲ್ಡ್ ಅವರನ್ನು ಕ್ರಮವಾಗಿ 2 ಮತ್ತು 3ನೇ ಸ್ಥಾನಕ್ಕೆ ತಳ್ಳಿದ ನೀನಾ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

**ಭಾರತೀಯ ಮೂಲ:**

- ಭಾರತೀಯ ಮೂಲದವರೊಬ್ಬರು ಮಿಸ್ ಅಮೆರಿಕ ಪ್ರಶಸ್ತಿಗೆ ಭಾಜನರಾಗಿದ್ದು ಇದೇ ಮೊದಲು.
- ಮಿಸ್ ಅಮೆರಿಕ ಸ್ಪರ್ಧೆಗೆ ಪ್ರವೇಶ ಪಡೆಯುವ ಮುನ್ನ ಮಿಸ್ ನ್ಯೂಯಾರ್ಕ್ ಆಗಿ ಆಯ್ಕೆಯಾಗಿದ್ದ ನೀನಾ, ನ್ಯೂಯಾರ್ಕ್ ರಾಜ್ಯವನ್ನು ಸ್ಪರ್ಧೆಯಲ್ಲಿ ಪ್ರತಿನಿಧಿಸಿದ್ದರು.
- ಪ್ರಶಸ್ತಿ ಪಡೆದ ಬಗ್ಗೆ ಅತೀವ ಸಂತಸ ವ್ಯಕ್ತಪಡಿಸಿರುವ ನೀನಾ, ಪ್ರಶಸ್ತಿ ಆಯ್ಕೆಯಲ್ಲಿ ವೈವಿಧ್ಯತೆಯನ್ನು ಪರಿಗಣಿಸಿದ ತೀರ್ಪುಗಾರರಿಗೆ ಅಭಿನಂದನೆ ಸಲ್ಲಿಸಿದ್ದಾರೆ.
- ಪ್ರಶಸ್ತಿಯ ಬಹುಮಾನದ ಮೊತ್ತವಾಗಿ ನೀನಾ ಕನಿಷ್ಠ 30 ಲಕ್ಷ ರೂ.ಗಳನ್ನು ಸ್ಕಾಲರ್‌ಶಿಪ್ ರೂಪದಲ್ಲಿ ಪಡೆಯಲಿದ್ದಾರೆ.

- ನೀನಾಗೆ ಜನಾಂಗೀಯ ನಿಂದನೆ ಆದರೆ ನೀನಾ ಆಯ್ಕೆಗೆ ಅಮೆರಿಕ ಮೂಲದ ಹಲವು ಜನ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.
- ಟ್ವೀಟರ್ ಸೇರಿದಂತೆ ಆನ್‌ಲೈನ್ ಸಾಮಾಜಿಕ ತಾಣಗಳಲ್ಲಿ ಈ ಕುರಿತು ಯಥೇತ್ಥವಾಗಿ ಟೀಕೆಗಳು ವ್ಯಕ್ತವಾಗಿವೆ.

**ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ "ರಘುರಾಮ್ ರಂಜನ್" ಗೆ ಡಾಯ್ಸ್ಚೆ ಟ್ ಬ್ಯಾಂಕ್ (Deutschet Bank) ಪ್ರಶಸ್ತಿ**

ಭಾರತೀಯ ರಿಸರ್ವ್ ಬ್ಯಾಂಕ್ ನ ನೂತನ ಗವರ್ನರ್ ರಘುರಾಮ್ ಜಿ ರಂಜನ್ ಅವರನ್ನು ಡಾಯ್ಸ್ಚೆ ಟ್ ಬ್ಯಾಂಕ್ ಫೈನಾನ್ಸಿಯಲ್ ಎಕಾನಮಿಕ್ಸ್-2013 ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಅರ್ಥಶಾಸ್ತ್ರದಲ್ಲಿ ರಘುರಾಮ್ ರಂಜನ್ ಮಾಡಿರುವ ಮಹತ್ವದ ಸಂಶೋಧನೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ರಂಜನ್ ಅವರು ಅರ್ಥಶಾಸ್ತ್ರದಲ್ಲಿ ಕೈಗೊಂಡಿದ್ದ ಸಂಶೋಧನೆ ವಿಶ್ವದ ಹಣಕಾಸು ಮತ್ತು ಬೃಹತ್ ಅರ್ಥವ್ಯವಸ್ಥೆಯ ಮೇಲೆ ಸಾಕಷ್ಟು ಪರಿಣಾಮ ಬೀರಿದೆ.

**ಪ್ರಶಸ್ತಿಯ ಬಗ್ಗೆ:**

- ಡಾಯ್ಸ್ಚೆ ಟ್ ಬ್ಯಾಂಕ್ ಡೊನೇಷನ್ ನಿಧಿಯಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಸೆಂಟರ್ ಫಾರ್ ಫೈನಾನ್ಸಿಯಲ್ ಸ್ಟಡೀಸ್ ಮತ್ತು ಗೋಥೆ ಯೂನಿವರ್ಸಿಟಿ ಫ್ರಾಂಕ್ ಪರ್ಟ್ ಜಂಟಿಯಾಗಿ ಈ ಪ್ರಶಸ್ತಿಯನ್ನು ಎರಡು ವರ್ಷಗಳಿಗೊಮ್ಮೆ ವಿತರಿಸುತ್ತಿವೆ.
- ಪ್ರಶಸ್ತಿಯು 50,000 ಯುರೋ ವನ್ನು ಒಳಗೊಂಡಿದೆ.
- ಈ ಪ್ರತಿಷ್ಠಿತ ಪ್ರಶಸ್ತಿಗೆ ಅರ್ಥಶಾಸ್ತ್ರಜ್ಞರು ಸೇರಿದಂತೆ ವಿವಿಧ ದೇಶಗಳ ಬ್ಯಾಂಕಿನ ಅಧಿಕಾರಿಗಳು ಸೇರಿ ಸುಮಾರು 260 ಜನರನ್ನು ನಾಮನಿರ್ದೇಶನ ಮಾಡಲಾಗಿತ್ತು. ಆದರೆ ಇವರೆಲ್ಲರನ್ನು ಹಿಂದಿಕ್ಕಿ ರಂಜನ್ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಸುದ್ಧಿಯಲ್ಲಿರುವ ವ್ಯಕ್ತಿಗಳು

### ದೇಶದ ಮೊದಲ ಮಹಿಳಾ ಮುಖ್ಯ ಮಾಹಿತಿ ಕಮೀಷನರ್ ಆಗಿ ದೀಪಕ್ ಸಂಧು ನೇಮಕ

ದೇಶದ ಮೊದಲ ಮಹಿಳಾ ಮುಖ್ಯ ಮಾಹಿತಿ ಕಮೀಷನರ್ (Chief Information Commissioner) ಆಗಿ ದೀಪಕ್ ಸಂಧು ಅವರು ನೇಮಕಗೊಂಡಿದ್ದಾರೆ. ಇತ್ತೀಚೆಗೆ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ದೀಪಕ್ ಸಂಧು ಅವರಿಗೆ ಪ್ರಮಾಣ ವಚನ ಭೋದಿಸಿದರು.

- ಭಾರತೀಯ ಮಾಹಿತಿ ಸೇವೆಯ 1971 ನೇ ಬ್ಯಾಚ್ ನ ಅಧಿಕಾರಿಯಾಗಿರುವ ಸಂಧು ಅವರು ಕಳೆದ ನಾಲ್ಕು ವರ್ಷಗಳಿಂದ ಮಾಹಿತಿ ಆಯೋಗದ ಕಮೀಷನರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಈಗ ಮುಖ್ಯ ಮಾಹಿತಿ ಕಮೀಷನರ್ ಆಗಿ ನೇಮಕಗೊಂಡಿದ್ದು, ಈ ಹುದ್ದೆಯನ್ನು ಏರಿದ ದೇಶದ ಮೊದಲ ಮಹಿಳೆ ಎನಿಸಿದ್ದಾರೆ.
- ಸಂಧು ಅವರು ಸತ್ಯೇಂದ್ರ ಮಿಶ್ರ ಅವರ ಉತ್ತರಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. 64 ವರ್ಷ ವಯಸ್ಸಿನ ಇವರ ಅಧಿಕಾರ ಅವಧಿ ಕೇವಲ ಮೂರು ತಿಂಗಳ ಕಾಲವಿರಲಿದ್ದು, ಇತ್ಯರ್ಥವಾಗದೇ ಉಳಿದಿರುವ ಸುಮಾರು 30,000 ಪ್ರಕರಣಗಳನ್ನು ಶೀಘ್ರವೇ ವಿಲೇವಾರಿ ಮಾಡುವ ಗುರಿ ಇವರ ಮುಂದಿದೆ.

**ಮಾಹಿತಿ ಆಯೋಗ:**

ಕೇಂದ್ರ ಮಾಹಿತಿ ಆಯೋಗವನ್ನು ಕೇಂದ್ರ ಸರ್ಕಾರ ಗೆಜೆಟ್ ಅಧಿವೇಶನದ ಮೂಲಕ ಸ್ಥಾಪಿಸಿದೆ. ಮಾಹಿತಿ ಆಯೋಗವು ಒಬ್ಬ ಮುಖ್ಯ ಮಾಹಿತಿ ಕಮೀಷನರ್ ಹಾಗೂ 10 ಮಾಹಿತಿ ಕಮೀಷನರ್ ಗಳನ್ನು ಒಳಗೊಂಡಿದೆ. ಮಾಹಿತಿ ಕಮೀಷನರ್ ಗಳಿಗೆ ರಾಷ್ಟ್ರಪತಿಗಳು ಪ್ರಮಾಣವಚನವನ್ನು ಬೋಧಿಸುತ್ತಾರೆ. ಇದರ ಕೇಂದ್ರ ಕಚೇರಿಯು ನವ ದೆಹಲಿಯಲ್ಲಿದೆ.

**ಮಾಹಿತಿ ಅಧಿಕಾರಿ/ಕಮೀಷನರ್ ಅರ್ಹತೆ:**

- ಮುಖ್ಯ ಮಾಹಿತಿ/ಮಾಹಿತಿ ಅಧಿಕಾರಿಯಾಗುವ ವ್ಯಕ್ತಿಯು ಕಾನೂನು, ವಿಜ್ಞಾನ-ತಂತ್ರಜ್ಞಾನ, ಸಾಮಾಜಿಕ ಸೇವೆ, ಪತ್ರಿಕೋದ್ಯಮ, ಮಾಧ್ಯಮ ಸಂಬಂಧಿತ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿರಬೇಕು.
- ಸಂಸತ್ತಿನ ಅಥವಾ ಯಾವುದೇ ರಾಜ್ಯ/ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯ ಸದಸ್ಯರಾಗಿರಬಾರದು.

**ನೇಮಕ:**

- ಆಯ್ಕೆ ಸಮಿತಿಯು ಪ್ರಧಾನ ಮಂತ್ರಿ, ವಿರೋಧ ಪಕ್ಷದ ನಾಯಕರು ಹಾಗೂ ಪ್ರಧಾನ ಮಂತ್ರಿ ಅವರಿಂದ ನೇಮಿಸಲ್ಪಟ್ಟ ಕೇಂದ್ರ ಸಚಿವ ಸಂಪುಟದ ಒಬ್ಬ ಸಚಿವರನ್ನು ಒಳಗೊಂಡಿರುತ್ತದೆ.

**ಅಧಿಕಾರವಧಿ:**

- ಮುಖ್ಯ ಮಾಹಿತಿ ಕಮೀಷನರ್ ಅವರ ಅಧಿಕಾರ ಅವಧಿಯು ಅಧಿಕಾರ ಸ್ವೀಕರಿಸಿದ ದಿನದಿಂದ ಐದು ವರ್ಷಗಳ ಕಾಲ ಅಥವಾ 65 ವರ್ಷ ತುಂಬುವವರೆಗೂ, ಯಾವುದು ಮುಂಚಿತವೊ ಅದು ಎಂದು ಭಾವಿಸತಕ್ಕದ್ದು.
- ಮುಖ್ಯ ಮಾಹಿತಿ ಕಮೀಷನರ್ ಅವರು ಮರು ನೇಮಕಾತಿಗೆ ಅರ್ಹರಾಗಿರುವುದಿಲ್ಲ. ಇವರ ವೇತನವೂ ಮುಖ್ಯ ಚುನಾವಣಾ ಅಧಿಕಾರಿಯವರ ವೇತನಕ್ಕೆ ಸಮನಾಗಿರುತ್ತದೆ.

**ರಾಜ್ಯ ಮಾಹಿತಿ ಆಯೋಗ:**

- ಕೇಂದ್ರ ಸರ್ಕಾರದ ಮಾದರಿಯಲ್ಲೇ ರಾಜ್ಯದಲ್ಲೂ ರಾಜ್ಯ ಮಾಹಿತಿ ಆಯೋಗವನ್ನು ಸ್ಥಾಪಿಸಬೇಕಾಗಿದ್ದು, ಆಯೋಗವೂ ಒಬ್ಬ ಮುಖ್ಯ ಮಾಹಿತಿ ಕಮೀಷನರ್ ಮತ್ತು 10 ಮಾಹಿತಿ ಕಮೀಷನರ್ ಗಳನ್ನು ಒಳಗೊಂಡಿರುತ್ತದೆ.
- ರಾಜ್ಯ ಸರ್ಕಾರವು ಗೆಜೆಟ್ ನೋಟಿಫಿಕೇಷನ್ ಮುಖಾಂತರ ಈ ಆಯೋಗವನ್ನು ರಚಿಸಬೇಕು. ಆಯೋಗದ ಕೇಂದ್ರ ಕಚೇರಿಯು ರಾಜ್ಯ ಸರ್ಕಾರ ನಿರ್ಧರಿಸಿದ ಸ್ಥಳದಲ್ಲಿ ಇರಲಿದೆ.

**2013ನೇ ಸಾಲಿನ ಮ್ಯಾನ್ ಬುಕರ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಝುಂಪಾ ಲಾಹಿರಿಯವರ ಕಾದಂಬರಿ**

ಭಾರತ ಮೂಲದ ಅಮೆರಿಕದ ಲೇಖಕಿ ಝುಂಪಾ ಲಾಹಿರಿ ಅವರ ಹೊಸ ಕಾದಂಬರಿಯು 2013ನೇ ಸಾಲಿನ ಮ್ಯಾನ್ ಬುಕರ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾಗಿದೆ. ಪುಲಿಟ್ಜರ್ ಪುರಸ್ಕೃತರಾದ ಲಾಹಿರಿ ಅವರ 'ದಿ ಲೋಲಾಯಂಡ್' ಈಗ ಅಂತಿಮ ಸುತ್ತಿನಲ್ಲಿರುವ ಕೃತಿಯಾಗಿದೆ.

**ಅಂತಿಮ ಸುತ್ತಿಗೆ ಯಾವ ಕಾದಂಬರಿಗಳು?**

1960ರ ದಶಕದಲ್ಲಿನ ಕೋಲ್ಕತ್ತಾದ ಹೊರವಲಯಗಳ ಜನಜೀವನದ ಚಿತ್ರಣ ಈ ಕೃತಿಯಲ್ಲಿದೆ. 'ದಿ ಲೋಲ್ಯಾಂಡ್' ಕೃತಿಯು ಲಾಹಿರಿ ಅವರ ಎರಡನೇ ಕಾದಂಬರಿ ಹಾಗೂ ನಾಲ್ಕನೇ ಕೃತಿಯಾಗಿದೆ. ಲೇಖಕರಾದ ಐರ್ಲೆಂಡ್‌ನ ಕೋಮ್ ಟಾಯ್‌ಬಿನ್, ಇಂಗ್ಲೆಂಡ್‌ನ ಜಿಮ್ ಕ್ರೇಸ್, ಜಿಂಬಾಬ್ವೆಯ ನೊವಯಲೆಟ್ ಬುಲವಾಯೊ, ನ್ಯೂಜಿಲೆಂಡ್‌ನ ಎಲಿಯನಾರ್ ಕಾಯಟನ್ ಮತ್ತು ಕೆನಡಾದ ರುಥ್ ಒಜೆಕಿ ಅವರ ಕೃತಿಗಳು ಅಂತಿಮ ಸುತ್ತಿನಲ್ಲಿರುವ ಇತರ ಐದು ಪುಸ್ತಕಗಳಾಗಿವೆ. ಅ.15 ರಂದು ಪುರಸ್ಕಾರದ ವಿಜೇತರ ಹೆಸರು ಪ್ರಕಟಿಸಲಾಗುವುದು. ಬಹುಮಾನ ಮೊತ್ತವು 50,000 ಪೌಂಡ್ (ರೂ.42.5 ಲಕ್ಷ) ಆಗಿದೆ. ಅಂತಿಮ ಸುತ್ತಿಗೆ ಆಯ್ಕೆಯಾದವರಿಗೆ 2500 ಪೌಂಡ್ (ರೂ.2.12 ಲಕ್ಷ) ನೀಡಲಾಗುವುದು.

**ವಿಶ್ವ ಆರೋಗ್ಯ ಸಂಸ್ಥೆಯ ಉನ್ನತ ಹುದ್ದೆಗೆ ಭಾರತದ ಪೂನಮ್ ಖೇತ್ರಲ್ ಸಿಂಗ್ ನೇಮಕ**

ಸರಿಸುಮಾರು 44 ವರ್ಷಗಳ ಬಳಿಕ ವಿಶ್ವ ಆರೋಗ್ಯ ಸಂಸ್ಥೆಯ ಉನ್ನತ ಹುದ್ದೆಯೊಂದು ಭಾರತಕ್ಕೆ ಒಲಿದಿದೆ. ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಪ್ರಾದೇಶಿಕ ಸಂಸ್ಥೆಯ (South East Asian Regional Organisation) ವಲಯ ನಿರ್ದೇಶಕರಾಗಿ ನಿವೃತ ಐಎಎಸ್ ಅಧಿಕಾರಿಯಾದ ಡಾ.ಪೂನಮ್ ಖೇತ್ರಲ್ ಸಿಂಗ್ ಅವರನ್ನು ಸದಸ್ಯ ರಾಷ್ಟ್ರಗಳ ಆಯ್ಕೆ ಮಾಡಿವೆ.

- ಪೂನಮ್ ಅವರು ಈ ಹುದ್ದೆಯಲ್ಲಿ ಮುಂದಿನ ಐದು ವರ್ಷಗಳ ಕಾಲ ಮುಂದುವರೆಯಲ್ಲಿದ್ದಾರೆ.
- ಈ ಹಿಂದೆ 1948 ರಿಂದ 1968 ರವರೆಗೆ ಭಾರತ ಈ ಹುದ್ದೆಯನ್ನು ಅಲಂಕರಿಸಿತ್ತು. 1968 ರಿಂದ ಈ ಹುದ್ದೆಯನ್ನು ಭಾರತದ ಯಾರೊಬ್ಬರು ಪಡೆಯುವಲ್ಲಿ ವಿಫಲವಾಗಿದ್ದರು.
- ಪೂನಮ್ ಅವರ ನೇಮಕದಿಂದ ಜಾಗತಿಕ ಆರೋಗ್ಯ ವಿಷಯದಲ್ಲಿ ಭಾರತ ಉತ್ಸಾಹದಿಂದ ಪಾಲ್ಗೊಳ್ಳಲು ಸಹಾಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಅಜಾದ್ ತಿಳಿಸಿದ್ದಾರೆ.

<u>ಪೂನಮ್ ಖೇತ್ರಲ್ ಸಿಂಗ್</u>:

- ಸಾರ್ವಜನಿಕ ಆರೋಗ್ಯ ಮತ್ತು ಆಡಳಿತ ವಿಷಯದಲ್ಲಿ ಸಾಕಷ್ಟು ಪರಿಣಿತಿ ಹೊಂದಿರುವ ಪೂನಮ್ ಈ ಹಿಂದೆ ವಿಶ್ವ ಆರೋಗ್ಯ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಮತ್ತು ಆರೋಗ್ಯಕರ ಪರಿಸರ ವಿಭಾಗದ ಕಾರ್ಯಕಾರಿ ನಿರ್ದೇಶಕರಾಗಿ 1998 ರಿಂದ 2000 ರ ವರೆಗೆ ಸೇವೆ ಸಲ್ಲಿಸಿದ್ದರು.
- 2000 ದಿಂದ 2013 ರ ವರೆಗೆ ಆಗ್ನೇಯ ಏಷ್ಯಾ ಪ್ರಾದೇಶಿಕ ಸಂಸ್ಥೆಯ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

## <u>ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ನ್ಯಾಯಮೂರ್ತಿ ವಿ.ಈಶ್ವರಯ್ಯ ನೇಮಕ</u>

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ಆಂಧ್ರಪ್ರದೇಶ ಹೈಕೋರ್ಟ್ ನ ಮಾಜಿ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳಾದ ವಿ.ಈಶ್ವರಯ್ಯ ಅವರನ್ನು ನೇಮಕ ಮಾಡಲಾಗಿದೆ. ಈಶ್ವರಯ್ಯ ಅವರು ಸೆಪ್ಟೆಂಬರ್ 19, 2013 ರಂದು ಆಯೋಗದ ಅಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡರು.

- ಆಯೋಗದ ಹಿಂದಿನ ಅಧ್ಯಕ್ಷರಾದ ನ್ಯಾಯಮೂರ್ತಿ ಎಂ,ಎನ್.ರಾಯ್ ಅವರ ಅಧಿಕಾರ ಅವಧಿ ಇತ್ತೀಚೆಗೆ ಮುಗಿದ ಕಾರಣ ಈ ಸ್ಥಾನ ತೆರವಾಗಿತ್ತು. ಎಂ.ಎನ್.ರಾಯ್ ಅವರು ಹಿಮಾಚಲ ಪ್ರದೇಶ ಹೈಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದರು.

<u>ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ</u>

- ರಾಷ್ಟ್ರೀಯ ಹಿಂದುಳಿದ ವರ್ಗಗಳ ಕಾಯಿದೆ 1993 ರ ಅಡಿಯಲ್ಲಿ ಈ ಆಯೋಗವನ್ನು 1993 ರಲ್ಲಿ ಸ್ಥಾಪಿಸಲಾಗಿದೆ.
- ಮಂಡಲ್ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ನೀಡಿದ ಆದೇಶದ ಮೇರೆಗೆ ಈ ಆಯೋಗವನ್ನು ಸ್ಥಾಪಿಸಲಾಗಿದೆ,

## ನ್ಯಾಯಮೂರ್ತಿ ವಿ, ಈಶ್ವರಯ್ಯ

- ವಿ.ಈಶರಯ್ಯ ಅವರು ಆಂಧ್ರಪ್ರದೇಶದ ನಲಗೊಂಡ ಜಿಲ್ಲೆಯವರು. ಉಸ್ಮಾನಿಯಾ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪಡೆದಿದ್ದಾರೆ.
- ಹೈದ್ರಾಬಾದ್ ಕೋರ್ಟ್ ನಲ್ಲಿ ವೃತ್ತಿಯನ್ನು ಆರಂಭಿಸಿ, ವಿವಿಧ ಮಜಲುಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ,
- ಆಂಧ್ರಪ್ರದೇಶ ಹೈಕೋರ್ಟ್ ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದ ಇವರು 2013 ರಲ್ಲಿ ನಿವೃತ್ತಿ ಹೊಂದಿದರು.

## ದೇಶದ ಉದ್ಯಮಿಗಳ ವೇತನ: ಸನ್ ಟವಿಯ ಮಾರನ್ ದಂಪತಿಗೆ ನಂ.1 ಸ್ಥಾನ

ಸನ್ ಟವಿ ಪ್ರವರ್ತಕರಾದ ಕಲಾನಿಧಿ ಮಾರನ್ ಮತ್ತು ಅವರ ಪತ್ನಿ ಕಾವೇರಿ ಮಾರನ್ ಅವರು ಷೇರುಪೇಟೆಯ ನೋಂದಾಯಿತ ಕಂಪನಿಗಳ ಪೈಕಿ, ಕಳೆದ ಸಾಲಿನಲ್ಲಿ ಗರಿಷ್ಠ ವೇತನ ಪಡೆದುಕೊಂಡ ದೇಶದ ನಂ.1 ಉದ್ಯಮ ಪ್ರಮುಖರು ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅದಕ್ಕೂ ಹಿಂದಿನ ವರ್ಷ ನಂ.1 ಸ್ಥಾನದಲ್ಲಿದ್ದ ನವೀನ್ ಜಿಂದಾಲ್ ಕಳೆದ ವರ್ಷ 3ನೇ ಸ್ಥಾನಕ್ಕೆ ಕುಸಿದಿದ್ದಾರೆ. 2012-13ನೇ ಸಾಲಿನಲ್ಲಿ ಕಲಾನಿಧಿ ಮಾರನ್ ಮತ್ತು ಅವರ ಪತ್ನಿ ಕಾವೇರಿ ತಲಾ 56.25 ಕೋಟಿ ರೂ.ಗಳಷ್ಟು ವೇತನವನ್ನು ಪಡೆದುಕೊಳ್ಳುವ ಮೂಲಕ ನಂ.1 ಸ್ಥಾನ ಪಡೆದುಕೊಂಡಿದ್ದಾರೆ.

**ಇತರೆ ಉದ್ಯಮಿಗಳು:**

- ಆರ್ಥಿಕ ಕುಸಿತ ಹಿನ್ನೆಲೆಯಲ್ಲಿ 2011-12ನೇ ಸಾಲಿಗಿಂತ ಮಾರನ್ ಶೇ.1ರಷ್ಟು ಕಡಿಮೆ ವೇತನ ಪಡೆದುಕೊಂಡಿದ್ದಾರೆ.
- ಆರ್ಥಿಕ ಕುಸಿತದ ಪರಿಣಾಮಗಳ ಹೊರತಾಗಿಯೂ ಈ ಟಾಪ್ 10 ಉದ್ಯಮಪತಿಗಳ ಒಟ್ಟು ವೇತನ 402 ಕೋಟಿ ರೂ. ನಷ್ಟಿದೆ. 1 ರಿಂದ 10 ರವರೆಗಿನ ಸ್ಥಾನ ಪಡೆದುಕೊಂಡ ಟಾಪ್ 10 ಪಟ್ಟಿ ಹೀಗಿದೆ:

1) ಕಲಾನಿಧಿ ಮಾರನ್: 56.25 ಕೋಟಿ ರೂ. 2) ಕಾವೇರಿ ಮಾರನ್ : 56.25 ಕೋಟಿ ರೂ. 3) ನವೀನ್ ಜಿಂದಾಲ್: 54.98 ಕೋಟಿ ರೂ. 4) ಕುಮಾರ ಮಂಗಳಂ ಬಿರ್ಲಾ: 46.92 ಕೋಟಿ ರೂ. 5) ಬೃಜ್‌ಲಾಲ್ ಮುಂಜಾಲ್: 32.72 ಕೋಟಿ ರೂ. 6) ಪವನ್ ಮುಂಜಾಲ್: 32.80 ಕೋಟಿ ರೂ. 7) ಸುನಿಲ್ ಕಾಂತ್ ಮುಂಜಾಲ್: 31.51 ಕೋಟಿ ರೂ. 8) ಪಿಆರ್‌ಆರ್‌ಆರ್ ರಾಜಾ: 30.96 ಕೋಟಿ ರೂ. 9)ಶಿನೊನಾಕಾನಿಶಿ: 30.0 ಕೋಟಿ ರೂ. 10) ಮುರಳಿ ಕೆ. ದಿವಿ: 26.46 ಕೋಟಿ ರೂ.

## ಪಶ್ಚಿಮ ಬಂಗಾಳದ ಪರ್ವೀನ್ ಸಿದ್ದಿಕ್ ವಿಶ್ವದ ಅತಿ ಎತ್ತರದ ಮಹಿಳೆ

ಪಶ್ಚಿಮ ಬಂಗಾಳದ ದಕ್ಷಿಣ ದಿಜಜ್ ಪುರ್ ಜಿಲ್ಲೆಯ ಪರ್ವೀನ್ ಸಿದ್ದಿಕ್ ಅವರು ವಿಶ್ವದ ಅತ್ಯಂತ ಎತ್ತರದ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವೈದ್ಯರ ಪ್ರಕಾರ ಸಿದ್ದಿಕಿ ಅವರು 7 ಅಡಿ 8 ಇಂಚು ಎತ್ತರವಿದ್ದಾರೆ. ಈ ಮೂಲಕ ವಿಶ್ವದ ಅತ್ಯಂತ ಎತ್ತರದ ಮಹಿಳೆಯಾಗಿದ್ದು, ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿದ್ದಾರೆ.

- ಹಾರ್ಮೋನ್ ಗಳ ಅಸಮತೋಲನೆಯಿಂದ ಸಿದ್ದಿಕಿ ಎತ್ತರ ಬೆಳೆದಿದ್ದಾರೆ ಎನ್ನಲಾಗಿದೆ. ಸದ್ಯ ಅವರ ಎತ್ತರ ಬಗ್ಗೆ ಮತ್ತಷ್ಟು ಪರೀಕ್ಷೆ ನಡೆಯಬೇಕಿದೆ ಎಂದು ಹೇಳಲಾಗಿದೆ.
- ಪ್ರಸ್ತುತ ವಿಶ್ವದ ಅತ್ಯಂತ ಕುಬ್ಜ ಮಹಿಳೆ ಎನಿಸಿರುವ ಜ್ಯೋತಿ ಆಮ್ಗೆ ಸಹ ಭಾರತದವರೇ ಆಗಿದ್ದಾರೆ.

**ಫಿಲಿಪ್ಪೀನ್ಸ್‌ನ ಮೆಗಾನ್ ಯಂಗ್ ಗೆ 2013 ನೇ ಸಾಲಿನ ವಿಶ್ವಸುಂದರಿ ಪಟ್ಟ**

ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ 63ನೇ ಮಿಸ್ ವರ್ಲ್ಡ್ ಸ್ಪರ್ಧೆಯ ಗ್ರ್ಯಾಂಡ್ ಫಿನಾಲೆಯಲ್ಲಿ ಫಿಲಿಫೈನ್ಸ್ ನ ಮೆಗಾನ್ ಯಂಗ್ 2013 ನೇ ಸಾಲಿನ ವಿಶ್ವಸುಂದರಿ ಎಂದು ಘೋಷಿಸಲಾಗಿದೆ. ಇಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಪ್ರಸಕ್ತ ಸಾಲಿನ ಭುವನ ಸುಂದರಿ ವಿಜೇತರನ್ನು ಆಯ್ಕೆ ಮಾಡಲಾಯಿತು. ಫ್ರಾನ್ಸ್‌ನ ಮರೀನ್ ಲಾಪೆಲೀನ್ ಮತ್ತು ಘಾನದ ಕರಾನಾರ್ ನಾ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದುಕೊಂಡರು. ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ನವನೀತ್ ಕೌರ್ ಕಡೆಯ 20 ಸ್ಪರ್ಧಾಗಳುಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವಲ್ಲೂ ವಿಫಲರಾದರು. ಈ ಹಿನ್ನೆಲೆಯಲ್ಲಿ ವಿಶ್ವಸುಂದರಿ ಸ್ಪರ್ಧೆಯ ಕುರಿತು ಒಂದಿಷ್ಟು ಮಾಹಿತಿ.

**ಏನಿದು ಮಿಸ್‌ವರ್ಲ್ಡ್?**

ಇದೊಂದು ಅಂತಾರಾಷ್ಟ್ರೀಯ ಸೌಂದರ್ಯ ಸ್ಪರ್ಧೆ. ವಿಶ್ವಸುಂದರಿ ಸೌಂದರ್ಯ ಸ್ಪರ್ಧೆಯನ್ನು 1951ರಲ್ಲಿ ಎರಿಕ್ ಮೋರ್ಲೆ ಎಂಬುವರು ಆರಂಭಿಸಿದರು. 'ಕಂ ಡಾನ್ಸಿಂಗ್' ಎಂಬ ಷೋವನ್ನು ಟಿವಿಯಲ್ಲಿ ಪ್ರಸಾರ ಮಾಡಲಾಯಿತು. ಇದು ನಿಜವಾಗಿ ಫೆಸ್ಟಿವಲ್ ಬಿಕಿನಿ ಸ್ಪರ್ಧೆಯಾಗಿತ್ತು. ಆದರೆ ಮಾಧ್ಯಮಗಳು ಇದನ್ನು 'ಮಿಸ್ ವರ್ಲ್ಡ್' ಎಂದು ಬಿಂಬಿಸಿದವು. ಯಾವಾಗ ಅಮೆರಿಕನ್ನರೂ 'ಮಿಸ್ ಯುನಿವರ್ಸ್' (ಭುವನಸುಂದರಿ) ಎಂಬ ಸ್ಪರ್ಧೆ ಆರಂಭಿಸಿದರೋ, ಮೋರ್ಲೆ ಅವರು ತಮ್ಮ ವಿಶ್ವಸುಂದರಿ ಸ್ಪರ್ಧೆಯನ್ನು ವಾರ್ಷಿಕ ಸ್ಪರ್ಧೆಯನ್ನಾಗಿ ಆಯೋಜಿಸುವ ನಿರ್ಧಾರಕ್ಕೆ ಬಂದರು.

**ಕೆಲ ಸತ್ಯಗಳು:**

- ವಿಶ್ವದ 4 ಪ್ರಮುಖ ಸೌಂದರ್ಯ ಸ್ಪರ್ಧೆಗಳೆಂದರೆ, ಮಿಸ್ ವರ್ಲ್ಡ್, ಮಿಸ್ ಯುನಿವರ್ಸ್, ಮಿಸ್ ಇಂಟರ್‌ನ್ಯಾಷನಲ್, ಮಿಸ್ ಅರ್ಥ್.
- ಮಿಸ್ ಇಂಡಿಯಾ ರೀಟಾ ಫರಿಯಾ 1966ರಲ್ಲಿ ಕಿರೀಟ ಗೆದ್ದ ಮೊದಲ ಭಾರತೀಯೆ.
- 1974ರಲ್ಲಿ ಹೆಲೆನ್ ಮೋರ್ಗನ್‌ಗೆ ವಿಶ್ವಸುಂದರಿ ವಿಜೇತೆ ಎಂಬ ಪಟ್ಟ ಸಿಕ್ಕಿತು. ಆದರೆ, ಆಕೆ ಸ್ಪರ್ಧೆಯಿಂದ ಹೊರಬರಬೇಕಾಯಿತು. ಏಕೆಂದರೆ, ಸ್ಪರ್ಧೆಯಲ್ಲಿ ಪಾಲ್ಗೊಂಡವರೆಲ್ಲ ಅವಿವಾಹಿತರಾಗಿರಬೇಕು. ಆದರೆ ಮೋರ್ಗನ್‌ಗೆ ಒಂದೂವರೆ ವರ್ಷದ ಮಗುವಿತ್ತು ಎಂಬುದು ಆಕೆ ಗೆಲುವು ಸಾಧಿಸಿದ ಕೆಲವೇ ದಿನಗಳಲ್ಲಿ ಬಹಿರಂಗವಾಗಿತ್ತು. ಆ ವರ್ಷ ಯಾರಿಗೂ ವಿಶ್ವಸುಂದರಿ ಕಿರೀಟ ಲಭ್ಯವಾಗಲಿಲ್ಲ.
- ಅತ್ಯಂತ ಹೆಚ್ಚು ಅಂದರೆ 6 ಮಿಸ್ ವರ್ಲ್ಡ್ ಕಿರೀಟ ಸಂದಿದ್ದು ವೆನಿಜ್ಯುವೆಲಾ ದೇಶದವರಿಗೆ.
- ಮೊತ್ತಮೊದಲ ಬಾರಿಗೆ 2001ರಲ್ಲಿ ಬ್ಲ್ಯಾಕ್ ಆಫ್ರಿಕನ್‌ವೊಬ್ಬರಿಗೆ ಕಿರೀಟ ದೊರೆತಿತು. ನೈಜೀರಿಯಾದ ಅಗ್ಬಾನಿ ದರೇಗೋ ಅವರಿಗೆ ಭಾರತೀಯಳಾದ ಪ್ರಿಯಾಂಕಾ ಛೋಪ್ರಾ ಅವರೇ ಕಿರೀಟ ತೊಡಿಸಿದರು.
- ಪಟಿಯಾಲಾದ ನವನೀತ್ ಕೌರ್ (20) ಪ್ರಸಕ್ತ ವರ್ಷ ವಿಶ್ವಸುಂದರಿ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಭಾರತೀಯಳು.

## ಡಾ.ರಾಜ್ ಕುಮಾರ್ ಕುರಿತ ಇಂಗ್ಲೀಷ್ ಪುಸ್ತಕ ಬ್ರಿಟಿಷ್ ಲೈಬ್ರರಿಗೆ

- ದಂತಕತೆಯಾದ ಕನ್ನಡದ ಜನಪ್ರಿಯ ನಟ ಡಾ. ರಾಜ್ ಕುಮಾರ್ ಅವರ ಕುರಿತ ಪುಸ್ತಕದ ಇಂಗ್ಲಿಷ್ ಆವೃತ್ತಿಯನ್ನು ಅಧಿಕೃತವಾಗಿ ಲಂಡನ್ ನ ಖ್ಯಾತ ಬ್ರಿಟಿಷ್ ಲೈಬ್ರರಿಗೆ ಹಸ್ತಾಂತರಿಸಲಾಗಿದೆ. ಪತ್ರಕರ್ತ ಆರ್. ಮಂಜುನಾಥ್ ಹಾಗೂ ಅವರ ಪತ್ನಿ ಕಲಾವಿದೆ ಡಾ. ಸೌಮ್ಯ ಮಂಜುನಾಥ್ ಚವಾಣ್ ಅವರು ಪುಸ್ತಕವನ್ನು ಲಂಡನ್ ನ ಬ್ರಿಟಿಷ್ ಲೈಬ್ರೆರಿಯ ಏಷ್ಯಾ ಆಫ್ರಿಕಾ ಸ್ಟಡೀಸ್ ನ ಮುಖ್ಯಸ್ಥರಾದ ಡಾ. ಕ್ಯಾಥರೀನ್ ಈಗಲ್ಟನ್ ಅವರಿಗೆ ನೀಡಿದರು.

**ಯಾವ ಪುಸ್ತಕ?**

- 'ಡಾ. ರಾಜ್ ಕುಮಾರ್, ದಿ ಪರ್ಸನ್ ಬಿಹೈಂಡ್ ದಿ ಪರ್ಸನಾಲಿಟಿ' ಶೀರ್ಷಿಕೆಯ ಪುಸ್ತಕವನ್ನು ಅವರ ಪುತ್ರ ಪುನೀತ್ ರಾಜ್ ಕುಮಾರ್ ಮತ್ತು ಪ್ರಕೃತಿ ಎನ್ ಬನವಾಸಿ ಅವರು ರಚಿಸಿದ್ದು ಕಳೆದ ವರ್ಷ ರಾಜ್ ಕುಮಾರ್ ಅವರ ಜನ್ಮದಿನ ಆಚರಣೆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಔಪಚಾರಿಕವಾಗಿ ಬಿಡುಗಡೆ ಮಾಡಲಾಗಿತ್ತು.

**ಕನ್ನಡಕ್ಕೊಬ್ಬರೇ ಡಾ.ರಾಜ್:**

- ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಗ್ರ ಪ್ರತಿಪಾದಕರಾದ ಡಾ. ರಾಜ್ ಕುಮಾರ್ 1954ರಲ್ಲಿ ರಜತಪರದೆಯಲ್ಲಿ ಚೊಚ್ಚಲ ನಟನೆ ಮಾಡಿದ್ದರು. ಐದು ದಶಕಗಳ ವೃತ್ತಿ ಜೀವನದಲ್ಲಿ 208 ಕನ್ನಡ ಚಿತ್ರಗಳಲ್ಲಿ ನಟಿಸಿದ್ದರು. ಕನ್ನಡ ಸಿನಿಮಾ ಪ್ರೇಮಿಗಳು ಮಾತ್ರವೇ ಅಲ್ಲ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲೂ ಜನಪ್ರಿಯರಾಗಿದ್ದರು. ಈ ಜನಪ್ರಿಯತೆ ಅವರಿಗೆ 1985ರಲ್ಲಿ ಪ್ರತಿಷ್ಠಿತ 'ಕೆಂಟುಕಿ' ಪ್ರಶಸ್ತಿಯನ್ನೂ ತಂದು ಕೊಟ್ಟಿತ್ತು. ಬಾಲಿವುಡ್ ಮಹಾನ್ ನಟ ಅಮಿತಾಭ್ ಬಚ್ಚನ್ ಕೂಡಾ ಡಾ. ರಾಜ್ ಕುಮಾರ್ ತಮ್ಮ ಬದುಕಿನಲ್ಲೂ ಪ್ರಭಾವ ಬೀರಿದ್ದುದಾಗಿ ಒಪ್ಪಿಕೊಂಡಿದ್ದರು

## ವಿಶ್ವದ ಅತ್ಯಂತ ಹಿರಿಯ ಪುರುಷ ಸ್ಯಾಂಚೇಜ್ ನಿಧನ

ವಿಶ್ವದ ಅತ್ಯಂತ ವಯೋವೃದ್ಧ ಪುರುಷ ಎಂದು ಗಿನ್ನೆಸ್ ದಾಖಲೆಗೆ ಪಾತ್ರನಾಗಿದ್ದ ಸಲುಸ್ಟಿಯಾನೋ ಅಲಿಯಾಸ್ ಸ್ಯಾಂಚೇಜ್ (112), ಶುಕ್ರವಾರ ಸಾವನ್ನಪ್ಪಿದ್ದಾನೆ. ಇದರೊಂದಿಗೆ ವಿಶ್ವದ ಅತ್ಯಂತ ಹಿರಿಯ ಎಂಬ ಹಿರಿಮೆ ಇದೀಗ ಇಟಲಿ ಮೂಲದ ಆರ್ಟುರೋ ಲಿಕಾಟಾ (111) ಪಾಲಾಗಿದೆ.

**ಸ್ಯಾಂಚೇಜ್ ಬಗ್ಗೆ:**

ಸ್ಯಾಂಚೇಜ್‌ಗೆ ಇಬ್ಬರು ಮಕ್ಕಳು, 7 ಮೊಮ್ಮಕ್ಕಳು, 15 ಮರಿಮಕ್ಕಳು ಮತ್ತು 5 ಗಿರಿ ಮಕ್ಕಳು ಇದ್ದಾರೆ. ಕೆಲವು ದಿನಗಳ ಹಿಂದೆ ಈತನನ್ನು ಸಂದರ್ಶಿಸಿದ ವೇಳೆ ದಿನಕ್ಕೊಂದು ಬಾಳೆಹಣ್ಣು ಮತ್ತು ಒಂದು ಅನಾಸಿನ್ ಮಾತ್ರೆ ನನ್ನ ಸುದೀರ್ಘ ಆಯುಷ್ಯದ ಗುಟ್ಟು ಎಂದು ಹೇಳುವ ಮೂಲಕ ಸ್ಯಾಂಚೇಜ್ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ಸ್ಯಾಂಚೇಜ್ 1901ರಲ್ಲಿ ಸ್ಪೇನ್‌ನಲ್ಲಿ ಜನಿಸಿದ್ದರು. 10ನೇ

ವಯಸ್ಸಿನಲ್ಲಿಯೇ ಶಾಲೆಗೆ ಗುಡ್‌ಬೈ ಹೇಳಿದ್ದ ಸ್ಯಾಂಚೇಜ್, ಹಲವು ವರ್ಷಗಳ ಕಾಲ ಕ್ಯೂಬಾದ ಕಬ್ಬಿನ ಗದ್ದೆಯಲ್ಲಿ ಕೆಲಸ ಮಾಡಿದ್ದರು, ಬಳಿಕ ಅಮೆರಿಕಕ್ಕೆ ವಲಸೆ ಬಂದು ಇಲ್ಲಿನ ಕೆಂಟುಕಿ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡಿದ್ದರು. ಕಳೆದ ಜೂನ್ ತಿಂಗಳಲ್ಲಿ ಜಪಾನ್‌ನ ಜಿರೋಮನ್ ಕಿಮೂರಾ (116) ಸಾವನ್ನಪ್ಪಿದ ಬಳಿಕ, ಸ್ಯಾಂಚೇಜ್ ವಿಶ್ವದ ಅತ್ಯಂತ ವಯೋವೃದ್ಧ ಎಂದು ಗಿನ್ನೆಸ್ ದಾಖಲೆಗೆ ಪಾತ್ರರಾಗಿದ್ದರು. ಜಪಾನ್‌ನ ಮಿಸಾವೋ ಒಕಾವಾ (115) ವಿಶ್ವದ ಅತ್ಯಂತ ವಯೋವೃದ್ಧ ಮಹಿಳೆ ಎಂಬ ಖ್ಯಾತಿಯನ್ನು ಈಗಲೂ ಹೊಂದಿದ್ದಾರೆ.

## ಆಸ್ಕರ್ ನಲ್ಲಿ ಭಾರತವನ್ನು ಪ್ರತಿನಿಧಿಸಲಿರುವ "ದಿ ಗುಡ್ ರೋಡ್ " ಗುಜರಾತಿ ಚಿತ್ರ

ನಿರ್ದೇಶಕ ಗ್ಯಾನ್ ಕೊರೆ ಅವರ ಮೊದಲ ಚಿತ್ರ 'ದಿ ಗುಡ್ ರೋಡ್'(ಗುಜರಾತಿ ಚಿತ್ರ) ಆಸ್ಕರ್ ಪ್ರಶಸ್ತಿಗಾಗಿ ಭಾರತವನ್ನು ಪ್ರತಿನಿಧಿಸಲಿದೆ. ಈ ಮೂಲಕ ಆಸ್ಕರ್ ಪ್ರಶಸ್ತಿಗೆ ಭಾರತವನ್ನು ಪ್ರತಿನಿಧಿಸಲಿರುವ ಮೊದಲ ಗುಜರಾತಿ ಚಿತ್ರ ಎನ್ನುವ ಗೌರವಕ್ಕೆ ದಿ ಗುಡ್ ರೋಡ್ ಪಾತ್ರವಾಗಿದೆ.

**ಭಾರತೀಯ ಚಿತ್ರಗಳು:**

ಆಸ್ಕರ್ ಸ್ಪರ್ಧೆಗೆ ಲಂಚ್‌ಬಾಕ್ಸ್ ಮತ್ತು ದಿ ಗುಡ್ ರೋಡ್ ನಡುವೆ ತೀವ್ರ ಪೈಪೋಟಿ ಇತ್ತು. ಎರಡೂ ಉತ್ತಮ ಚಿತ್ರಗಳೆ. ಆದರೆ, ಅಂತಿಮವಾಗಿ ದಿ ಗುಡ್ ರೋಡ್ ಅನ್ನು ಸರ್ವ ಸಮ್ಮತದಿಂದ ಆಯ್ಕೆ ಮಾಡಲಾಯಿತು ಎಂದು ಆಯ್ಕೆ ಸಮಿತಿ ಅಧ್ಯಕ್ಷ ಗೌತಮ್ ಘೋಶ್ ಮಾಹಿತಿ ನೀಡಿದ್ದಾರೆ. ಈ ಚಿತ್ರವನ್ನು ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ಕಾರ್ಪೊರೇಷನ್(ಎನ್‌ಎಫ್‌ಡಿಸಿ) ನಿರ್ಮಿಸಿದೆ. ಸೊನಾಲಿ ಕುಲಕರ್ಣಿ ಮತ್ತು ಅಜೆಯ್ ಗೆಹಿ ಅವರು ಮುಖ್ಯಪಾತ್ರವರ್ಗದಲ್ಲಿದ್ದಾರೆ. ಆಸ್ಕರ್ ವಿಜೇತ ರೆಸೂಲ್ ಪೂಕುಟ್ಟಿ ಅವರು ಧ್ವನಿ ವಿನ್ಯಾಸ ಮಾಡಿರುವುದು ಈ ಚಿತ್ರದ ವಿಶೇಷ.

## ಗೋರಖ್ ಪುರದಲ್ಲಿ ವಿಶ್ವದ ಅತಿ ದೊಡ್ಡ ರೈಲ್ವೇ ಪ್ಲಾಟ್ ಫಾರಂ

ಉತ್ತರ ಪ್ರದೇಶದ ಗೋರಖ್ ಪುರ ಶೀಘ್ರವೇ ವಿಶ್ವದ ನಕ್ಷೆಯಲ್ಲಿ ರಾರಾಜಿಸಲಿದೆ. "ಚಿಕಾಗೋ ಆಫ್ ದಿ ಈಸ್ಟ್" ಎಂತಲೇ ಖ್ಯಾತಿ ಹೊಂದಿರುವ ಗೋರಖ್ ಪುರದಲ್ಲಿ ವಿಶ್ವದ ಅತಿ ದೊಡ್ಡ ರೈಲ್ವೇ ಪ್ಲಾಟ್ ಫಾರಂ ಸಿದ್ಧಗೊಳ್ಳುತ್ತಿದೆ. ಸುಮಾರು 1,355 ಮೀ ಉದ್ದದ ರೈಲ್ವೇ ಪ್ಲಾಟ್ ಫಾರಂ ಇದುವರೆಗೂ ವಿಶ್ವದ ಅತಿ ದೊಡ್ಡ ರೈಲ್ವೇ ಪ್ಲಾಟ್ ಫಾರಂ ಎನಿಸಿದ್ದ ಖರಗ್ ಪುರದ ದಾಖಲೆಯನ್ನು ಅಳಿಸಲಿದೆ.

- ಪ್ರಸ್ತುತ 1,072 ಮೀ ಉದ್ದವಿರುವ ಖರಗ್ ಪುರ ವಿಶ್ವದ ಅತಿ ದೊಡ್ಡ ರೈಲ್ವೇ ಪ್ಲಾಟ್ ಫಾರಂ. ಚಿಕಾಗೋದ ಸ್ಟೇಟ್ ಸ್ಟ್ರೀಟ್ ಸೆಂಟರ್ ಸಬ್ ವೇ ಸ್ಟೇಷನ್ (1,067 ಮೀ) ವಿಶ್ವದ ಎರಡನೇ ಅತಿ ಉದ್ದದ ರೈಲ್ವೇ ಪ್ಲಾಟ್ ಫಾರಂ.
- ಗೋರಖ್ ಪುರದಲ್ಲಿ ನಿರ್ಮಾಣಗೊಳ್ಳಲಿರುವ ಪ್ಲಾಟ್ ಫಾರಂ ಮೇಲೆ 26 ಬೋಗಿಗಳನ್ನು ಒಳಗೊಂಡ ಎರಡು ರೈಲುಗಳನ್ನು ನಿಲ್ಲಿಸಬಹುದಾಗಿದೆ.

- ಅಕ್ಟೋಬರ್ 2 ರಂದು ಈ ರೈಲ್ವೆ ಪ್ಲಾಟ್ ಫಾರಂ ಕಾರ್ಯಮುಕ್ತವಾಗಲಿದೆ. ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಗೆ ಸೇರಿಸಲು ಸಿದ್ಧತೆ ನಡೆದಿದೆ.

**ಜಾಗತಿಕ ಬ್ರ್ಯಾಂಡ್ ಮತ್ತೆ ನಂ.1 ಸ್ಥಾನಕ್ಕೆ ಏರಿದ ಆಪಲ್**

ಐಫೋನ್ ಖ್ಯಾತಿಯ ಆಪಲ್ ಸಂಸ್ಥೆ ಮತ್ತೆ ವಿಶ್ವದ ಅತ್ಯುತ್ತಮ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ. ಇಂಟರ್ ಬ್ರ್ಯಾಂಡ್ ಎಂಬ ಕಾರ್ಪೋರೇಟ್ ಸಂಸ್ಥೆ ನಡೆಸಿರುವ ಸಮೀಕ್ಷೆಯಲ್ಲಿ ಆಪಲ್ ಈ ಹೆಗ್ಗಳಿಕೆಗೆ ಪಾತ್ರವಾಗಿದೆ.

- ಕಳೆದ ಬಾರಿ ಗ್ಲೋಬಲ್ ಬ್ರ್ಯಾಂಡ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದ ಕೊಕೊ ಕೋಲಾವನ್ನು ಹಿಂದಿಕ್ಕಿ ಆಪಲ್ ಈ ಖ್ಯಾತಿ ಪಡೆದಿದೆ.
- 2011 ರಲ್ಲಿ ಆಪಲ್ 8 ನೇ ಸ್ಥಾನದಲ್ಲಿತ್ತು. ಆಪಲ್ ಆಸ್ತಿ $98 ಬಿಲಿಯನ್ ಎನ್ನಲಾಗಿದೆ. ಕೊಕೊ ಕೋಲ ಕಳೆದ 13 ವರ್ಷಗಳಿಂದ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಕಾಯ್ದುಕೊಂಡು ಬಂದಿತ್ತು.
- ಇಂಟರ್ ನೆಟ್ ಸರ್ಚ್ ಎಂಜಿನ್ ಗೂಗಲ್ ಎರಡನೇ ಸ್ಥಾನದಲ್ಲಿದೆ. ಗೂಗಲ್ ಕಳೆದ ವರ್ಷ ನಾಲ್ಕನೇ ಸ್ಥಾನದಲ್ಲಿತ್ತು. ಸಮೀಕ್ಷೆಯ ಪ್ರಕಾರ ಗೂಗಲ್ ನ ಆಸ್ತಿ $93.2 ಬಿಲಿಯನ್.
- ಐಬಿಎಮ್, ಮೈಕ್ರೋಸಾಫ್ಟ್, ಸ್ಯಾಮಸಂಗ್ ಮತ್ತು ಇಂಟೆಲ್ ಟಾಪ್ 10 ನಲ್ಲಿ ಕಾಣಿಸಿಕೊಂಡಿರುವ ಇತರೆ ಪ್ರಮುಖ ಕಂಪನಿಗಳು.

**ಚೂರು-ಪಾರು ಸುದ್ದಿಗಳು**

- **ಉತ್ತರ ಪ್ರದೇಶ ಮಾಜಿ ರಾಜ್ಯಪಾಲ ಭಂಡಾರಿ ನಿಧನ**: ಉತ್ತರ ಪ್ರದೇಶ ಮಾಜಿ ರಾಜ್ಯಪಾಲ ರೊಮೆಶ್ ಭಂಡಾರಿ ನಿಧನರಾದರು. ಭಂಡಾರಿ ತ್ರಿಪುರ ಮತ್ತು ಗೋವಾ ರಾಜ್ಯಪಾಲರಾಗಿ ಹಾಗೂ ದೆಹಲಿ ಲೆಫ್ಟಿನೆಂಟ್ ಗವರ್ನರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

- **ಡಾ.ಎಚ್.ಆರ್.ವಿಶ್ವಾಸ್ ರವರಿಗೆ 2013 ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ:** `ಸಂಸ್ಕೃತ ಭಾರತಿ'ಯ ಹಿರಿಯ ಕಾರ್ಯಕರ್ತ ಡಾ.ಎಚ್. ಆರ್. ವಿಶ್ವಾಸ್ ಅವರನ್ನು 2013ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ವಿಶ್ವಾಸ್ ಅವರು ಬರೆದ `ಮಾರ್ಜಾಲಸ್ಯ ಮುಖಂ ದೃಷ್ಟಂ' ಎಂಬ ಸಣ್ಣ ನಾಟಕಗಳ ಸಂಗ್ರಹಕ್ಕೆ ಈ ಪುರಸ್ಕಾರ ಲಭಿಸಿದ್ದು, ರೂ. 50 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ನವೆಂಬರ್ 15ರಂದು ಪಣಜಿ ಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಎಸ್.ಎಲ್. ಭೈರಪ್ಪ ಅವರ `ಆವರಣ' ಕಾದಂಬರಿಯ ಸಂಸ್ಕೃತ ಅನುವಾದಕ್ಕಾಗಿ ವಿಶ್ವಾಸ್ ಅವರು 2010ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಗಳಿಸಿದ್ದರು. 15ಕ್ಕೂ ಅಧಿಕ ಸಂಸ್ಕೃತ ಕೃತಿಗಳನ್ನು ರಚಿಸಿರುವ ಅವರು, ಕನ್ನಡದಲ್ಲೂ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

- **ಮಹಾತ್ಮ ಗಾಂಧಿ ಹೆರಿಟೇಜ್ ಪೋರ್ಟಲ್ ಗೆ ಚಾಲನೆ:** ಮಹಾತ್ಮ ಗಾಂಧಿ ಅವರ ಬದುಕು, ಬರಹ ಎಲ್ಲರಿಗೂ ತಲುಪುವ ಉದ್ದೇಶವನ್ನಿಟ್ಟುಕೊಂಡು ರೂಪಿಸಲಾಗಿರುವ ಗಾಂಧಿ ಪೋರ್ಟಲ್ ಗೆ ಪ್ರಧಾನಿ ಮನಮೋಹನ್ ಸಿಂಗ್ ಚಾಲನೆ ನೀಡಿದ್ದಾರೆ. ಗುಜರಾತ್ ನ ಸಾಬರ್ ಮತಿ ಗಾಂಧಿ ಆಶ್ರಮದಲ್ಲಿ ಈ ಪೋರ್ಟಲ್ ರೂಪಿಸಲಾಗಿದೆ. ಇದೊಂದು ಹೆರಿಟೇಜ್ ಸೈಟ್ ಆಗಿದ್ದು, ಗಾಂಧಿ ಅವರ ಸಂಪೂರ್ಣ ಮಾಹಿತಿ ಇದರಲ್ಲಿ ಸಿಕ್ಕುತ್ತದೆ. ಗಾಂಧಿ ಹೆರಿಟೇಜ್ ಪೋರ್ಟಲ್ ಹೆಸರಲ್ಲಿ (gandhi heritage portal) ಇದು ರೂಪಿತವಾಗಿದೆ. ಯುವಕರನ್ನೇ ಗಮನದಲ್ಲಿರಿಸಿಕೊಂಡು ಇದನ್ನು ರೂಪಿಸಲಾಗಿದೆ ಎಂದು ಈ ಪೋರ್ಟಲ್ ರೂಪಿಸಿರುವ ಆಡಳಿತ ವರ್ಗ ಹೇಳಿದೆ. ಈ ಪೋರ್ಟಲ್ ರೂಪಿಸುವ ಸಂಬಂಧ ಕೇಂದ್ರ ಸರ್ಕಾರ ಸಾಬರ್ ಮತಿ ಆಶ್ರಮ ಸಂರಕ್ಷಣಾ ಮತ್ತು ನೆನಪಿನ ಟ್ರಸ್ಟ್ ಗೆ 8 ಕೋಟಿ ನೀಡಿತ್ತು. ಈ ಟ್ರಸ್ಟ್ ಗೆ ವರ್ಷಕ್ಕೆ 75 ಲಕ್ಷ ಹಣ ಬಡ್ಡಿ ರೂಪದಲ್ಲಿ ಸೇರಲಿದೆ. ಈ ಹಣವನ್ನು ಪೋರ್ಟಲ್ ನ ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತದೆ.

- **ಮುಧೋಳದಲ್ಲಿ ಎರಡನೇ ಬೆಲ್ಲ ಪಾರ್ಕ್ ಲೋಕಾರ್ಪಣೆ:** ಮುಧೋಳ ಪಟ್ಟಣದಲ್ಲಿ ನಿರ್ಮಿಸಿರುವ ಸಾವಯವ ಬೆಲ್ಲ ಪಾರ್ಕ್ ಲೋಕಾರ್ಪಣೆಯಾಗಿದೆ. ಎಂಟು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಪಾರ್ಕ್ ರಾಜ್ಯದ ಎರಡನೇ ಸಾವಯವ ಪಾರ್ಕ್ ಆಗಿದೆ. ಮಂಡ್ಯದಲ್ಲಿ ಈಗಾಗಲೇ ಮೊದಲ ಪಾರ್ಕ್ ಕಾರ್ಯಾರಂಭ ಮಾಡಿದೆ. ಈ ಭಾಗದಲ್ಲಿ ಕಬ್ಬು

ಬೆಳೆ ಹೆಚ್ಚಾದ ಕಾರಣ ಇಲ್ಲಿ ಎರಡನೇ ಘಟಕ ನಿರ್ಮಾಣವಾಗಿದೆ. ಕರ್ನಾಟಕ ಸರ್ಕಾರ 2010-11ರಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಾವಯವ ಬೆಲ್ಲ ತಂತ್ರಜ್ಞಾನ ಸಂಸ್ಥೆ ಸ್ಥಾಪಿಸಲು ಎಂಟು ಕೋಟಿ ರೂ. ಅನುದಾನ ನೀಡಿತ್ತು. ಮುಧೋಳದಲ್ಲಿ 1.60 ಕೋಟಿ ರೂ. ಮೌಲ್ಯದ ಕಬ್ಬು ನುರಿಸುವ, ಬೆಲ್ಲ ಕುದಿಸುವ, ಘಟಕಗಳೊಂದಿಗೆ ಜಲಬೆಲ್ಲ (ಕಾಕ್ವಿ), ಪುಡಿಬೆಲ್ಲ, ಪೆಂಡಿಬೆಲ್ಲ ಮತ್ತು ಮೌಲ್ಯವರ್ಧಿತ ಬೆಲ್ಲ ಶೇಖರಿಸಲು ಬೇರೆ ಬೇರೆ ಕೋಣೆಗಳು, ಉಗ್ರಾಣ ಮತ್ತು ಗುಣಮಟ್ಟ ನಿಯಂತ್ರಣದ ಪ್ರಯೋಗಾಲಯವನ್ನೊಳಗೊಂಡ ಕಟ್ಟಡದ ನಿರ್ಮಾಣ ಪೂರ್ಣಗೊಂಡಿದೆ.

- **ಸಿರಿಯಾದಲ್ಲಿ 'ಸರಿನ್' ವಿಷಾನಿಲ ಬಳಕೆಯಾಗಿರುವುದು ಖಚಿತ:** ಪ್ರಜಾಪ್ರಭುತ್ವ ಪರ ಹೋರಾಟಗಾರರ ಮೇಲೆ ಸಿರಿಯಾದ ಬಷರ್ ಅಲ್ ಅಸಾದ್ ಸರ್ಕಾರ ಮಾರಕ 'ಸರಿನ್' ವಿಷಾನಿಲ ಬಳಸಿರುವುದು ಧೃಡಪಟ್ಟಿದೆ, 1500ಕ್ಕೂ ಹೆಚ್ಚು ಜನ ಸಾವನ್ನಪ್ಪಿದ ವ್ಯಕ್ತಿಗಳ ತಲೆಕೂದಲು ಮತ್ತು ರಕ್ತ ಪರೀಕ್ಷೆಯಿಂದ, ಸಿರಿಯಾ ಸರ್ಕಾರ, ಹೋರಾಟ ಹತ್ತಿಕ್ಕಲು ಸರಿನ್ ಎಂಬ ವಿಷಾನಿಲ ಬಳಸಿರುವುದು ಖಚಿತಪಟ್ಟಿದೆ. ಸರಿನ್ ಮಾರಕ ಸೈನೈಡ್ ವಿಷಕ್ಕಿಂತ 500 ಪಟ್ಟು ಹೆಚ್ಚು ಮಾರಕ. ಸ್ವಲ್ಪವೇ ಸ್ವಲ್ಪ ಸರಿನ್‌ನ್ನು ಸೇವಿಸಿದರೆ ಅಥವಾ ಚರ್ಮದ ಮೂಲಕ ದೇಹದೊಳಕ್ಕೆ ಸೇರಿದರೂ, ಇದು ದೇಹದಲ್ಲಿನ ಇಡೀ ನರಮಂಡಲವನ್ನು ಅಸ್ತವ್ಯಸ್ಥಗೊಳಿಸುತ್ತದೆ. ಕೆಲವೇ ಕ್ಷಣಗಳಲ್ಲಿ ಮೆದುಳು ನಿಷ್ಕ್ರಿಯವಾಗುವಂತೆ ಮಾಡಿ ವ್ಯಕ್ತಿಯ ಸಾವಿಗೆ ಕಾರಣವಾಗುತ್ತದೆ. ಎರಡನೇ ವಿಶ್ವಯುದ್ಧದ ವೇಳೆ ಜರ್ಮನಿಯ ನಾಜಿ ವಿಜ್ಞಾನಿಗಳು ಈ ಮಾರಕ ವಿಷಾನಿಲವನ್ನು ಕಂಡುಹಿಡಿದು ಮೊದಲ ಬಾರಿಗೆ ಯುದ್ಧದಲ್ಲಿ ಬಳಸಿದ್ದರು. ಯುದ್ಧದಲ್ಲಿ ಇದರ ಬಳಕೆಯನ್ನು ವಿಶ್ವಸಂಸ್ಥೆ ನಿಷೇಧಿಸಿದ್ದರೂ, 1998ರಲ್ಲಿ ಇರಾಕ್ ಸರ್ವಾಧಿಕಾರಿ ಸದ್ದಾಂ ಹುಸೇನ್ ಇದನ್ನು ಬಳಸಿ ಖುರ್ದಿಶ್ ಜನಾಂಗದ ಸಾವಿರಾರು ಜನರನ್ನು ಬಲಿಪಡೆದಿದ್ದ.

- **ಸುನಿಲ್ ಆರ್. ಕುಲಕರ್ಣಿ ಸಾಂಟಾ ಕಾರ್ಲಾ ಕೌಂಟಿ ಕೋರ್ಟ್ ನ ನ್ಯಾಯಾಧೀಶರಾಗಿ ನೇಮಕ:** ಕ್ಯಾಲಿಫೋರ್ನಿಯಾದ ಸಾಂಟಾ ಕಾರ್ಲಾ ಕೌಂಟಿ ಕೋರ್ಟ್‌ನ ನ್ಯಾಯಾಧೀಶರನ್ನಾಗಿ ಭಾರತೀಯ ಮೂಲದ ಸುನಿಲ್ ಆರ್. ಕುಲಕರ್ಣಿ ಅವರನ್ನು ನೇಮಿಸಲಾಗಿದೆ. ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಇಂತಹ ಹುದ್ದೆಗೆ ಆಯ್ಕೆಯಾದ ಮೊದಲ ದಕ್ಷಿಣ ಏಷ್ಯಾ ಮೂಲದ ವ್ಯಕ್ತಿ ಎಂಬ ಹಿರಿಮೆಗೆ ಸುನಿಲ್ ಪಾತ್ರರಾಗಿದ್ದಾರೆ. ಕ್ಯಾಲಿಫೋರ್ನಿಯಾದ ಪಾಲೊ ಆಲ್ಟೋದಲ್ಲಿ ನೆಲೆಸಿರುವ ಸುನಿಲ್ ಕುಲಕರ್ಣಿ, 2011 ರಿಂದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ನ್ಯಾಯಿಕ ವಾದಗಳ ಬಗ್ಗೆ ಸಮಾಲೋಚನೆ ನಡೆಸುವ ಗುಂಪಿನಲ್ಲಿ ಹಿರಿಯ ಆಪ್ತ ಸಮಾಲೋಚಕರಾಗಿ ಸೇವೆ ಸಲ್ಲಿಸುತ್ತಿದ್ದರು.

- **ಹಿಂದೂಗಳಿಗೆ ಮೀಸಲಾತಿ ಕಲ್ಪಿಸಿದ ಅಫ್ಘಾನಿಸ್ತಾನ ಸರ್ಕಾರ:** ಆಫ್ಘಾನಿಸ್ತಾನ ಸಂಸತ್ತಿನ ಕೆಳಮನೆ 'ವೊಲ್ಸಿ ಜಿರ್ಗಾ'ದಲ್ಲಿ ಅಲ್ಪಸಂಖ್ಯಾತ ಹಿಂದು ಮತ್ತು ಸಿಖ್ಖರಿಗೆ ತಲಾ ಒಂದೊಂದು ಸ್ಥಾನ ಮೀಸಲಿಡುವ ಐತಿಹಾಸಿಕ ನಿರ್ಧಾರ ಕೈಗೊಳ್ಳಲಾಗಿದೆ. ಈ ಕುರಿತು ಅಧ್ಯಕ್ಷ ಹಮೀದ್ ಕರ್ಜೈ ಆಜ್ಞೆ ಹೊರಡಿಸಿದ್ದಾರೆ. ಸದ್ಯ ಸಂಸತ್ ಅಧಿವೇಶನ

ನಡೆಯುತ್ತಿಲ್ಲವಾದ್ದರಿಂದ ತಮಗಿರುವ ವಿಶೇಷ ಅಧಿಕಾರ ಬಳಸಿ ಕರ್ಜೈ ಈ ಆಜ್ಞೆ ಹೊರಡಿಸಿದ್ದಾರೆ. ಈ ವಿಷಯವನ್ನು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ ಅದಕ್ಕೆ ಅನುಮೋದನೆ ಪಡೆದುಕೊಳ್ಳುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ಈ ಕಾನೂನು ಜಾರಿಯಾದ ಬಳಿಕ ಅಂದರೆ ಮುಂದಿನ ಸಂಸತ್ ಚುನಾವಣೆಯಲ್ಲಿ ಹಿಂದೂ ಮತ್ತು ಸಿಖ್ಖರಿಗೆ ತಲಾ ಒಂದೊಂದು ಸ್ಥಾನಗಳು ಮೀಸಲಾಗಲಿವೆ.

- **ಶ್ರೀಚಂದ್ ಮತ್ತು ಗೋಪಿಚಂದ್ ಹಿಂದುಜಾ ರವರಿಗೆ ಜೀವಮಾನ ಸಾಧನೆ ಪ್ರಶಸ್ತಿ:** ಬ್ರಿಟನ್‌ನಲ್ಲಿಯ ಏಷ್ಯಾ ಸಮುದಾಯಕ್ಕೆ ಸಲ್ಲಿಸಿದ ಸೇವೆಗಾಗಿ ಕೋಟ್ಯಧಿಪತಿ ಸಹೋದರರಾದ ಭಾರತ ಮೂಲದ ಶ್ರೀಚಂದ್ ಮತ್ತು ಗೋಪಿಚಂದ್ ಹಿಂದುಜಾ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ. ವಾರ್ಷಿಕ ಏಷ್ಯಾ ಸಾಧಕರ ಪ್ರಶಸ್ತಿಯನ್ನು ಅಮೆರಿಕದ ನಾಗರಿಕ ಹಕ್ಕುಗಳ ಕಾರ್ಯಕರ್ತ ಜೆಸ್ಸೆ ಜಾಕ್ಸನ್ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿಂದುಜಾ ಸಮೂಹ ಕಂಪೆನಿಯ ಅಧ್ಯಕ್ಷ ಗೋಪಿಚಂದ್ ಹಿಂದುಜಾ, `ಇದೊಂದು ದೊಡ್ಡ ಗೌರವ, ಇದರಿಂದ ನಮ್ಮ ಜವಾಬ್ದಾರಿ ಹೆಚ್ಚಿದೆ ಹಾಗೂ ಏಷ್ಯಾ ಸಮುದಾಯದವರಿಗೆ ಸೇವೆ ಸಲ್ಲಿಸುವುದು ನಮ್ಮ ಧರ್ಮ' ಎಂದರು.

- **ನೇಪಾಳದ ಶಿಖರಗಳಿಗೆ ಹಿಲರಿ ಮತ್ತು ತೇನ್ಸಿಂಗ್ ಹೆಸರು:** ಪ್ರಪ್ರಥಮ ಬಾರಿಗೆ ಮೌಂಟ್ ಎವರೆಸ್ಟ್ ಶಿಖರವೇರಿದ ಕೀರ್ತಿಗೆ ಪಾತ್ರರಾಗಿರುವ ನ್ಯೂಜಿಲ್ಯಾಂಡ್‌ನ ಎಡ್ಮಂಡ್ ಹಿಲರಿ ಮತ್ತು ನೇಪಾಳದ ತೇನ್ಸಿಂಗ್ ನೋರ್ಗೆ ಅವರ ಹೆಸರನ್ನು ನೇಪಾಳದ ಎರಡು ಹಿಮಶಿಖರಗಳಿಗೆ ಇಡಲು ನೇಪಾಳ ಸರ್ಕಾರ ಚಿಂತನೆ ನಡೆಸಿದೆ. 25,200 ಅಡಿ ಎತ್ತರದ ಶಿಖರಕ್ಕೆ ಹಿಲರಿ ಶಿಖರ ಎಂತಲೂ, 25,917 ಅಡಿ ಎತ್ತರವಿರುವ ಶಿಖರಕ್ಕೆ ತೇನ್ಸಿಂಗ್ ಎಂತಲೂ ನಾಮಕರಣ ಮಾಡುವಂತೆ ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಪ್ರವಾಸೋದ್ಯಮ ಅಭಿವೃದ್ಧಿಯ ನಿಟ್ಟಿನಲ್ಲಿ ಸಮಿತಿ ಈ ಶಿಫಾರಸು ಮಾಡಿದೆ.

- **ಸಾಮಾಜಿಕ ಜಾಲತಾಣ ಟ್ವಿಟರ್ ನಿಂದ ಷೇರುಗಳ ಬಿಡುಗಡೆ:** ಫೇಸ್‌ಬುಕ್ ಕಳೆದ ವರ್ಷ ತನ್ನ ಷೇರುಗಳನ್ನು ಮಾಡಿದ ನಂತರ ಇದೀಗ ಮತ್ತೊಂದು ಜನಪ್ರಿಯ ಸಾಮಾಜಿಕ ಜಾಲತಾಣ ಟ್ವಿಟರ್‌ನ ಸರದಿ. ಅದು ಸದ್ಯದಲ್ಲೇ ಮಾರುಕಟ್ಟೆಗೆ ತನ್ನ ಷೇರುಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯಿದೆ. 'ನಾವು ತುಂಬಾ ವಿಶ್ವಾಸದಿಂದ ಅಮೆರಿಕದ ಭದ್ರತೆ ಮತ್ತು ವಿನಿಮಯ ಕೇಂದ್ರಕ್ಕೆ (ಎಸ್‌ಇಸಿ) ವ್ಯವಸ್ಥಿತ ಐಪಿಒಗಾಗಿ (ಸಾರ್ವಜನಿಕರಿಗೆ ಆರಂಭಿಕ ಆಹ್ವಾನ) ಅರ್ಜಿ ಸಲ್ಲಿಸಿದ್ದೇವೆ' ಎಂದು ಟ್ವಿಟರ್ ಹೇಳಿಕೊಂಡಿದ್ದು ಷೇರುಪೇಟೆ ಪ್ರವೇಶ ಕುರಿತು ಇದ್ದ ವದಂತಿಗಳನ್ನು ನಿಜವಾಗಿಸಿದೆ. ಟ್ವಿಟರ್‌ನ ಆಸ್ತಿ

650 ಕೋಟಿ ರೂ. ಎಂದು ಅಮೆರಿಕದ ವಾಲ್‌ಸ್ಟ್ರೀಟ್ ಜರ್ನಲ್ ಹೇಳಿದ್ದು, ಮಾರುಕಟ್ಟೆಯಲ್ಲಿ ಅದು ಯಶಸ್ವಿಯಾಗಬಹುದು ಎಂದು ಅಂದಾಜಿಸಲಾಗಿದೆ.

- **ಡಾಲ್ಬಿ ಲ್ಯಾಬೊರೇಟರೀಸ್ ಸ್ಥಾಪಕ ರೇ ಡಾಲ್ಬಿ ನಿಧನ:** ಅಮೆರಿಕದ ಸಂಶೋಧಕ, ಡಾಲ್ಬಿ ಲ್ಯಾಬೊರೇಟರೀಸ್ ಸ್ಥಾಪಕ ರೇ ಡಾಲ್ಬಿ (80) ಅವರು ಸ್ಯಾನ್ಫ್ರಾನ್ಸಿಸ್ಕೋದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಹಲವು ವರ್ಷಗಳಿಂದ ಮರೆಗುಳಿ ರೋಗದಿಂದ ಬಳಲುತ್ತಿದ್ದ ಡಾಲ್ಬಿ ಅವರಿಗೆ ಇತ್ತೀಚೆಗಷ್ಟೇ ಲ್ಯುಕೇಮಿಯಾ ಕಾಯಿಲೆ ಅಂಟಿಕೊಂಡಿತ್ತು ಎಂದು ಕಂಪನಿ ತಿಳಿಸಿದೆ. 1965ರಲ್ಲಿ ಡಾಲ್ಬಿ ಲ್ಯಾಬೊರೇಟರೀಸ್ ಕಂಪನಿಯನ್ನು ಸ್ಥಾಪಿಸಿದ್ದ ಡಾಲ್ಬಿ ಅವರು ನಂತರ ಆಡಿಯೋ ತಂತ್ರಜ್ಞಾನದ ನಾಯಕನಾಗಿ ಬೆಳೆದರು. ಆಡಿಯೋ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯು ಅವರನ್ನು ಹಲವಾರು ಆಧುನಿಕ ತಂತ್ರಜ್ಞಾನಗಳಿಗೆ ನಾಂದಿ ಹಾಡಿತು. ಅದರಿಂದ ಉದಯಿಸಿದ ಅನೇಕ ತಂತ್ರಜ್ಞಾನಗಳನ್ನು ಇಂದಿಗೂ ಸಂಗೀತ, ಸಿನಿಮಾ ಹಾಗೂ ಮನರಂಜನಾ ಕ್ಷೇತ್ರದಲ್ಲಿ ಬಳಸಲಾಗುತ್ತಿದೆ. ಡಾಲ್ಬಿ ಅವರು 2 ಆಸ್ಕರ್, ಗ್ರ್ಯಾಮಿ ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು.

- **ಕರ್ಣಾಟಕ ಬ್ಯಾಂಕಿಗೆ ಖಾಸಗಿ ವಲಯದ ಸರ್ವಶ್ರೇಷ್ಠ ಸಾಮಾಜಿಕ ಬ್ಯಾಂಕ್ ಪ್ರಶಸ್ತಿ:** ಕರ್ಣಾಟಕ ಬ್ಯಾಂಕಿಗೆ ಅಸೋಚಮ್‌ನ ಖಾಸಗಿ ವಲಯದ ಬ್ಯಾಂಕ್‌ಗಳ ವಿಭಾಗದ ಸರ್ವಶ್ರೇಷ್ಠ ಸಾಮಾಜಿಕ ಬ್ಯಾಂಕಿಂಗ್ ಪ್ರಶಸ್ತಿ ಲಭಿಸಿದೆ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಪಿ. ಜಯರಾಮ ಭಟ್ ದೆಹಲಿಯಲ್ಲಿ ಪ್ರಧಾನಿಯವರ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷ ಸಿ. ರಂಗರಾಜನ್‌ರಿಂದ ಪ್ರಶಸ್ತಿ ಸ್ವೀಕರಿಸಿದರು. ವ್ಯವಹಾರ ನಿಲುವುಗಳನ್ನು ಸಾಮಾಜಿಕ ಹೊಣೆಗಾರಿಕೆಯೊಂದಿಗೆ ಅಂತರ್ಗತಗೊಳಿಸುವ ಕರ್ಣಾಟಕ ಬ್ಯಾಂಕಿನ ಸಾಧನೆಗೆ ಈ ಮೂಲಕ ರಾಷ್ಟ್ರೀಯ ಮನ್ನಣೆ ದೊರೆತಂತಾಗಿದೆ ಎಂದು ಭಟ್ ಇದೇ ಸಂದರ್ಭದಲ್ಲಿ ಹೇಳಿದರು.

- **ಬೆಂಗಳೂರು ಮೂಲದ ವಿಜ್ಞಾನಿಗೆ ವಿಶ್ವಸಂಸ್ಥೆಯ ಪರಿಸರ ಪ್ರಶಸ್ತಿ:** ತಾಪಮಾನ ಏರಿಕೆ ಪರಿಣಾಮ ಕಡಿಮೆ ಮಾಡಲು ಕಪ್ಪು ಇಂಗಾಲ ಹೊರಸೂಸುವಿಕೆ ತಡೆಯುವುದು ಹೇಗೆ ಎಂದು ತೋರಿಸಿಕೊಟ್ಟ ಬೆಂಗಳೂರು ಮೂಲದ ವಿಜ್ಞಾನಿ ವೀರಭದ್ರನ್ ರಮಾನಾಥನ್ ಅವರು ವಿಶ್ವ ಸಂಸ್ಥೆಯ ಉನ್ನತ ಪರಿಸರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕ್ಯಾಲಿಫೋರ್ನಿಯಾದ ಓಷನೋಗ್ರಫಿ (ಸಾಗರ ವಿಜ್ಞಾನ) ಸಂಸ್ಥೆಯ ವಿಜ್ಞಾನಿ ವೀರಭದ್ರನ್ ರಮಾನಾಥನ್ ಅವರು ವಿಶ್ವ ಸಂಸ್ಥೆಯ ಉನ್ನತ ಪರಿಸರ ಪ್ರಶಸ್ತಿಯಾದ 2013ರ 'ಚಾಂಪಿಯನ್ಸ್ ಆಫ್ ಅರ್ಥ್ ಅವಾರ್ಡ್' ಸ್ವೀಕರಿಸಲಿದ್ದಾರೆ ಎಂದು ವಿಶ್ವ ಸಂಸ್ಥೆಯ ಪರಿಸರ ಯೋಜನೆಯ ಪ್ರಕಟಣೆ ತಿಳಿಸಿದೆ. 1997ರಲ್ಲಿ ವೀರಭದ್ರನ್ ರಮಾನಾಥನ್ ಅವರ ಸಹ ನೇತೃತ್ವದ ಅಂತಾರಾಷ್ಟ್ರೀಯ ಸಂಶೋಧನಾ ತಂಡ ತಾಪಮಾನ ಏರಿಕೆಯ ಪರಿಣಾಮವಾಗಿ ಏಷ್ಯಾದಲ್ಲಿ ವಾಯು ಮಾಲಿನ್ಯ ಜಾಸ್ತಿ ಯಾಗಿರುವುದನ್ನು ಮೊದಲ ಬಾರಿಗೆ ಪತ್ತೆಹಚ್ಚಿತ್ತು. ವೀರಭದ್ರನ್ ಜನಿಸಿದ್ದು ತಮಿಳುನಾಡಿನ ಮಧುರೈನಲ್ಲಾದರೂ, ಅವರ ಚಿಕ್ಕವರಿರುವಾಗಲೇ ಅವರ ಕುಟುಂಬ ಬೆಂಗಳೂರಿಗೆ ಬಂದು ನೆಲೆಸಿತ್ತು.

- **<u>ಜಗತ್ತಿನ ಅತಿದೊಡ್ಡ ಜ್ವಾಲಾಮುಖಿ ಜಪಾನ್ ನಲ್ಲಿ ಪತ್ತೆ :</u>** ಇದುವರೆಗೂ ಸಣ್ಣಪುಟ್ಟ ಜ್ವಾಲಾಮುಖಿಗಳಿಗೆಲ್ಲ 'ಬೃಹತ್ ಜ್ವಾಲಾಮುಖಿ' ಎಂಬ ಪಟ್ಟ ಕೊಟ್ಟು ಮೆರೆಸಿದ್ದಾಯಿತು. ಆದರೆ, ನಮ್ಮ ಆ ಎಲ್ಲ ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡುವಂಥ ಸುದ್ದಿ ಬೆಳಕಿಗೆ ಬಂದಿದೆ. ಭೂಮಿಯ ಅತ್ಯಂತ ದೊಡ್ಡ ಜ್ವಾಲಾಮುಖಿ ಎಂಬ ಕೀರ್ತಿಗೆ ಪಾತ್ರವಾಗಲಿರುವ ಎಲ್ಲ ಲಕ್ಷಣಗಳನ್ನೂ ಹೊಂದಿರುವ ಈ ಜ್ವಾಲಾಮುಖಿ, ಜಪಾನ್‌ನಿಂದ 1,609 ಕಿಲೋಮೀಟರ್ ಅಂತರದ ಪೆಸಿಫಿಕ್ ಸಮುದ್ರದಾಳದಲ್ಲಿ ಪತ್ತೆಯಾಗಿದೆ. ಸುಮಾರು 130ರಿಂದ 145 ಮಿಲಿಯನ್ ವರ್ಷಗಳ ಹಿಂದೆ ರೂಪುತಾಳಿರುವ, ಸದ್ಯ ಪೆಸಿಫಿಕ್ ಸಮುದ್ರ ತಳದಲ್ಲಿರುವ ಪರ್ವತಸಾಲಿನಲ್ಲಿ ಈ ಜ್ವಾಲಾಮುಖಿ ನೆಲೆಸಿದೆ ಎಂದು ಹ್ಯೂಸ್ಟನ್ ವಿಶ್ವವಿದ್ಯಾಲಯದ ಸಂಶೋಧಕರ ನೇತೃತ್ವದ ತಂಡ ಅಭಿಪ್ರಾಯಪಟ್ಟಿದೆ.

- **<u>ಭಾರತದಲ್ಲಿ ಹೆಚ್ಚಾದ ಶಿಶು ಮರಣ ಪ್ರಮಾಣ: ಲ್ಯಾನ್ಸೆಟ್ ವರದಿ:</u>** ನಮ್ಮ ದೇಶದಲ್ಲೇ ಶಿಶು ಮರಣ ಪ್ರಮಾಣ ಹೆಚ್ಚು ಎಂದು ಅಂತಾರಾಷ್ಟ್ರೀಯ ಪತ್ರಿಕೆ ಲ್ಯಾನ್ಸೆಟ್ ನಡೆಸಿದ ಅಧ್ಯಯನ ವರದಿ ತಿಳಿಸಿದೆ. ಅದರಲ್ಲೂ ಕರ್ನಾಟಕ, ಗುಜರಾತ್ ನಂತಹ ಅಭಿವೃದ್ಧಿ ಹೊಂದಿದ ರಾಜ್ಯಗಳಲ್ಲೂ ಅತಿ ಹೆಚ್ಚಿನ ಮಕ್ಕಳು ಸಾವಿಗೀಡಾಗುತ್ತಿದ್ದಾರೆ ಎಂದು ಹೇಳಲಾಗಿದೆ. ರಾಯಚೂರಲ್ಲಿ 2012ರಲ್ಲಿ ದೇಶದ 3 ಜಿಲ್ಲೆಗಳಲ್ಲಿ 5ಕ್ಕಿಂತ ಕೆಳಗಿನ ವಯಸ್ಸಿನ ಅತಿ ಹೆಚ್ಚು ಮಕ್ಕಳು ಮರಣ ಹೊಂದಿದ್ದಾರೆ. ಅದರಲ್ಲಿ ಎರಡು ಜಿಲ್ಲೆಗಳಿರುವುದು ಅಭಿವೃದ್ಧಿ ಹೊಂದಿದ ಗುಜರಾತ್ ಹಾಗೂ ಕರ್ನಾಟಕದಲ್ಲಿ. ಅವ್ಯಾವುವೆಂದರೆ ವಡೋದರಾ ಮತ್ತು ರಾಯಚೂರು. 3ನೇಯದ್ದು ಅಸ್ಸಾಂನ ಜೋರ್ಹಟ್. ಒಟ್ಟಾರೆಯಾಗಿ ಗುಜರಾತ್ ನ 6 ಜಿಲ್ಲೆಗಳು, ಆಂಧ್ರದ 5, ಅರುಣಾಚಲ ಪ್ರದೇಶದ 3, ಜಮ್ಮು ಮತ್ತು ಕಾಶ್ಮೀರದ 2, ಹಿಮಾಚಲ ಪ್ರದೇಶ ಮತ್ತು ಕರ್ನಾಟಕದ ತಲಾ 1 ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಕ್ಕಳು ಸಾವನ್ನಪ್ಪುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

- **<u>ಅಂಟಾರ್ಟಿಕಾದ ಸಾಗರದಡಿ ನದಿಮುಖ ಪತ್ತೆ:</u>** ದಕ್ಷಿಣ ಧ್ರುವ ದ ಅಂಟಾರ್ಟಿಕ್ ಸಾಗರದ ಮಂಜು ಗಡ್ಡೆ ಅಡಿ ಇದೇ ಮೊದಲ ಬಾರಿಗೆ ಅಳಿವೆ ಯೊಂದು (ನದಿಮುಖ) ಪತ್ತೆಯಾಗಿದೆ. ಪಶ್ಚಿಮ ಅಂಟಾರ್ಟಿಕಾ ಮಂಜು ಗಡ್ಡೆಯ ದಪ್ಪ ಪದರಿನ ಅಡಿ ಈ ಅಳಿವೆಯನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ನದಿಯ ಸಿಹಿ ನೀರು ಮತ್ತು ಸಾಗರದ ಉಪ್ಪು ನೀರು ಸೇರುವ ಈ ನದಿಮುಖಜ ಪ್ರದೇಶಲ್ಲಿಯ ಪರಿಸರದಲ್ಲಿ ಒಂದೇ ಪ್ರಭೇದಕ್ಕೆ ಸೇರಿದ ವಿಚಿತ್ರ ಜಲಚರಗಳೂ ಇರುವ ಸಾಧ್ಯತೆ ಇದೆ ಎಂದು ವಿಜ್ಞಾನಿ ಗಳು ಶಂಕಿಸಿದ್ದಾರೆ. ಒಂದು ಕಿ.ಮೀ ಅಗಲ ಮತ್ತು ಏಳು ಮೀಟರ್ ಆಳದ ಈ ನದಿ ಗಳು ಸಾಗರವನ್ನು ಸೇರುವಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ತೆರೆದುಕೊಂಡಿದ್ದು, ಗುಪ್ತ ಗಾಮಿನಿಯಂತೆ ಹರಿಯುತ್ತವೆ. ನ್ಯೂಜಿಲೆಂಡ್‌ನ ವಿಕ್ಟೋರಿಯಾ ವಿ.ವಿ ಯ ಹೌ ಹೊರ್ಗಾನ್ ನೇತೃತ್ವದ ವಿಜ್ಞಾನಿಗಳ ತಂಡ ಈ ಅಳಿವೆಯನ್ನು ಪತ್ತೆ ಹಚ್ಚಿದೆ.

- **<u>ಭಾರತೀಯ ಸಶಸ್ತ್ರ ಪಡೆಗೆ ಪ್ರತ್ಯೇಕ ವೇತನ ಆಯೋಗ:</u>** ಸಶಸ್ತ್ರ ಪಡೆಗಳ ಸಿಬ್ಬಂದಿಯ ವೇತನ, ಭತ್ಯೆ, ಪಿಂಚಣಿ ಪರಿಷ್ಕರಿಸುವ ಸಲುವಾಗಿ ಕೇಂದ್ರ ಸರ್ಕಾರ ಪ್ರತ್ಯೇಕ ವೇತನ ಆಯೋಗ ರಚಿಸಲು ಮುಂದಾಗಿದೆ. ಸೇನೆಗೆ ಪ್ರತ್ಯೇಕ ಆಯೋಗ ರಚನೆ ಆಗುತ್ತಿರುವುದು ಸ್ವತಂತ್ರ ಭಾರತದ ಇತಿಹಾಸ ದಲ್ಲಿ ಇದೇ ಮೊದಲು. ಕೇಂದ್ರ ಜಾರಿಗೊಳಿಸಿದ 6ನೇ

ವೇತನ ಆಯೋಗದಲ್ಲಿ ಹಲವು ಲೋಪಗಳಿವೆ ಎಂದು ಕಳೆದ ವರ್ಷ ಮೂರೂ ಪಡೆಗಳ ಮುಖ್ಯಸ್ಥರು ರಕ್ಷಣಾ ಸಚಿವ ಎ.ಕೆ. ಆಂಟನಿ ಅವರಿಗೆ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ನಾಗರಿಕ ಸೇವಾ ನೌಕರರ ವೇತನ ಆಯೋಗದಿಂದ ರಕ್ಷಣಾ ಪಡೆಗಳನ್ನು ಕೈಬಿಟ್ಟು, ಪ್ರತ್ಯೇಕ ವೇತನ ಆಯೋಗ ರಚಿಸಲು ಸರ್ಕಾರ ಒಪ್ಪಿದೆ ಎಂದು ಮೂಲಗಳು ತಿಳಿಸಿವೆ.

- **ಮುಂಬೈ ವಿಶ್ವದ ಎರಡನೇ ಪ್ರಾಮಾನಿಕ ನಗರ :** ಭಾರತದ ವಾಣಿಜ್ಯ ರಾಜಧಾನಿ ಎಂದೇ ಪರಿಗಣಿತವಾಗಿರುವ ಮುಂಬೈ ವಿಶ್ವದ ಎರಡನೇ ಪ್ರಾಮಾಣಿಕ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವಿಶ್ವದ 16 ನಗರಗಳಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಫಿನ್‌ಲ್ಯಾಂಡ್ ರಾಜಧಾನಿ ಹೆಲ್ಸಿಂಕಿ ವಿಶ್ವದ ಮೊದಲ ಪ್ರಾಮಾಣಿಕ ನಗರವಾಗಿ ಹೊರಹೊಮ್ಮಿದ್ದರೆ, ಪೋರ್ಚ್‌ಗಲ್‌ನ ರಾಜಧಾನಿ ಲಿಸ್ಬನ್ ಪ್ರಾಮಾಣಿಕತೆಯಲ್ಲಿ ಕೊನೆಯ ಸ್ಥಾನದಲ್ಲಿದೆ. ಯುರೋಪ್, ಉತ್ತರ ಮತ್ತು ದಕ್ಷಿಣ ಅಮೆರಿಕ ಹಾಗೂ ಏಷ್ಯಾ ಖಂಡಗಳ 16 ನಗರಗಳಲ್ಲಿ ಹಣ, ಬ್ಯುಸಿನೆಸ್ ಕಾರ್ಡ್‌ಗಳು ಒಳಗೊಂಡ ಪುಟ್ಟ ಬ್ಯಾಗೊಂದನ್ನು ಈ ನಗರಗಳಲ್ಲಿನ ಉದ್ಯಾನ, ಶಾಪಿಂಗ್ ಮಾಲ್ ಮತ್ತು ಫುಟ್‌ಪಾತ್‌ಗಳಲ್ಲಿ ಎಸೆಯಲಾಗಿತ್ತು. ಈ ಬ್ಯಾಗ್‌ಗಳನ್ನು ಮರಳಿಸಿದವರ ಸಂಖ್ಯೆಯನ್ನು ಆಧರಿಸಿ ನಗರಗಳ ಪ್ರಾಮಾಣಿಕತೆಯನ್ನು ನಿರ್ಧರಿಸಲಾಗಿದೆ. ರೀಡರ್ ಡೈಜೆಸ್ಟ್ ನಿಯತಕಾಲಿಕವು ಸಮೀಕ್ಷೆ ನಡೆಸಿದದ್ದು, ಮುಂಬೈನಲ್ಲಿ 12 ರಲ್ಲಿ 9 ಬ್ಯಾಗ್‌ಗಳು ವಿಳಾಸದಾರರ ಕೈಸೇರಿವೆ. ಮುಂಬೈದಲ್ಲಿ ಎಸೆಯಲಾಗಿದ್ದ ಬ್ಯಾಗ್‌ಗಳಲ್ಲಿ 3,000 ರೂ.ಗಳನ್ನು ಇರಿಲಾಗಿತ್ತು.

- **'ದಿ ಸ್ವೀಡಿಸ್ ರೈಟ್ ಲೈವ್ಲಿಹುಡ್' ಪ್ರಶಸ್ತಿ ಪ್ರಕಟ:** ಅಮೆರಿಕದ ಪಾಲ್ ವಾಕರ್, ಪ್ಯಾಲೆಸ್ತೈನ್‌ನ ರಾಜಿ ಸೌರಾನಿ, ಕಾಂಗೋದ ಡೆನಿಸ್ ಮುಕ್ವೆಗೆ ಹಾಗೂ ಸ್ವೀಡನ್‌ನ ಹನ್ಸ್ ರುಡಾಲ್ಫ್ ಹರೆನ್ ಅವರು ನೊಬೆಲ್‌ಗೆ ಪರ್ಯಾಯವೆಂದು ಪರಿಗಣಿಸಲಾದ ಪ್ರತಿಷ್ಠಿತ 'ದಿ ಸ್ವೀಡಿಸ್ ರೈಟ್ ಲೈವ್ಲಿ ಹುಡ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪೌಲ್ ರಾಸಾಯನಿಕ ಅಸ್ತ್ರ ವಿರೋಧಿ ಹೋರಾಟಗಾರರು, ರಜಿ ಮಾನವ ಹಕ್ಕುಗಳ ಹೋರಾಟಗಾರ್ತಿ, ಡೆನಿಸ್ ಶಸ್ತ್ರಚಿಕಿತ್ಸಕರು ಹಾಗೂ ಹನ್ಸ ಆಹಾರ ಭದ್ರತಾ ಪರಿಣಿತರು. ಈ ನಾಲ್ವರು ಪ್ರಶಸಿತಯ ಮೊತ್ತ 20 ಲಕ್ಷ ಕ್ರೊನಾರ್ ಅನ್ನು (ಅಂದಾಜು ` 1.93 ಕೋಟಿ) ಸಮಾನ ಹಂಚಿಕೊಳ್ಳಲಿದ್ದಾರೆ. ಡಿ.2ರಂದು ಸ್ವೀಡನ್ ಸಂಸತ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನ ತಿಳಿಸಿದೆ. ಸ್ವೀಡಿಸ್- ಜರ್ಮನ್ ಸ್ಟ್ಯಾಂಪ್ ಸಂಗ್ರಹಕಾರ ಜಾಕೊಬ್ ವೊನ್ ಉಕ್ಸ ಕುಲ್ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ.

- **ಭಾರತ ಮೂಲದ ಶ್ರೀನಿವಾಸನ್ ಅಮೆರಿಕಾದ ನ್ಯಾಯಾಧೀಶರಾಗಿ ಆಯ್ಕೆ:** ಚಂಡೀಗಡ ಮೂಲದ ಕಾನೂನು ತಜ್ಞ 46 ವರ್ಷದ ಶ್ರೀನಿವಾಸನ್ ಅವರು ಕೊಲಂಬಿಯಾದ ಸಂಚಾರಿ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡರು. ಇದೇ ಪ್ರಥಮ ಬಾರಿಗೆ ಭಾರತ ಮೂಲದವರು ಅಮೆರಿಕದ ಎರಡನೇ ಉನ್ನತ ನ್ಯಾಯಾಲಯದ ನ್ಯಾಯಾಧೀಶರಾಗಿ ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿ ಅಧಿಕಾರ ವಹಿಸಿಕೊಂಡರು. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಂದ್ರಾ ಡೇ ಒಕೊನೂರ್, ಶ್ರೀನಿವಾಸ್ ಅವರ ತಾಯಿ ಸರೋಜಾ ಮತ್ತು ಕುಟುಂಬದ ಸದಸ್ಯರು, ಮಿತ್ರರಾದ ಪ್ರಧಾನಿ ಮನಮೋಹನ್ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಸಮಕ್ಷಮದಲ್ಲಿ ಅವರು ಪ್ರಮಾಣವಚನ ಸ್ವೀಕರಿಸಿದರು.

- **‘ನಿರಾಕರಣೆಯ ಮತ’ ಮತ್ತು ‘ತಿರಸ್ಕರಿಸುವ ಹಕ್ಕು’ ನಡುವಿನ ವ್ಯತ್ಯಾಸ:** ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ ಯಾರಿಗೂ ಮತ ಹಾಕುವುದಿಲ್ಲ ಎನ್ನುವ ಮತದಾರರಿಗೆ 'ನಿರಾಕರಣೆಯ ಮತ' ಚಲಾಯಿಸುವ ಹಕ್ಕು ನೀಡುವ ಆಲೋಚನೆಯನ್ನು ಮೊದಲು ತೇಲಿಬಿಟ್ಟ ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಎನ್. ಗೋಪಾಲಸ್ವಾಮಿ ಅವರು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಸ್ವಾಗತಿಸಿದ್ದಾರೆ. ಪ್ರತಿಯೊಬ್ಬ ಅಭ್ಯರ್ಥಿಯನ್ನೂ ತಿರಸ್ಕರಿಸುವ ಹಕ್ಕು ಪಡೆಯುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆ ಎಂದೂ ಅವರು ಬಣ್ಣಿಸಿದ್ದಾರೆ. ಇದೇ ವೇಳೆ, ನಿರಾಕರಣೆಯ ಮತ (ನೆಗೆಟಿವ್ ವೋಟ್) ಹಾಗೂ ತಿರಸ್ಕರಿಸುವ ಹಕ್ಕು (ರೈಟ್ ಟು ರಿಜೆಕ್ಟ್) ಬೇರೆ ಬೇರೆ ಎಂದು ಅವರು ತಿಳಿಸಿದ್ದಾರೆ. ಕಣದಲ್ಲಿರುವ ಯಾರೂ ಇಷ್ಟವಿಲ್ಲ ಎಂಬ ಆಯ್ಕೆಯನ್ನು ಮತದಾರರು ಮಾಡಿಕೊಳ್ಳುವುದಕ್ಕೆ ನಿರಾಕರಣೆಯ ಮತ ಹಾಗೂ ಕಣದಲ್ಲಿರುವ ನಿರ್ದಿಷ್ಟ ವ್ಯಕ್ತಿ ವಿರುದ್ಧ ಮತ ಹಾಕುವುದಕ್ಕೆ ತಿರಸ್ಕರಿಸುವ ಹಕ್ಕು ಎನ್ನಲಾಗುತ್ತದೆ ಎಂದು ಅವರು ಹೇಳಿದ್ದಾರೆ.

- **ಬಿಸಿಸಿಐ ಅಧ್ಯಕ್ಷರಾಗಿ ಎನ್ ಶ್ರೀನಿವಾಸನ್ ಅವಿರೋಧ ಆಯ್ಕೆ:** ನಿರೀಕ್ಷೆಯಂತೆಯೇ ಎನ್ ಶ್ರೀನಿವಾಸನ್ ಅವರು ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಎಲ್ಲಾ ಕುತೂಹಲಗಳಿಗೆ ತೆರೆ ಎಳೆದಿದ್ದಾರೆ.ತೀವ್ರ ಗೊಂದಲಗಳ ನಡುವೆಯೂ ಬಿಸಿಸಿಐ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಎನ್ ಶ್ರೀನಿವಾಸನ್ ಅವರು ಸತತ ಮೂರನೇ ಬಾರಿಗೆ ಬಿಸಿಸಿಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.ದಕ್ಷಿಣ ವಲಯದ ಪ್ರತಿನಿಧಿಗಳು ಅಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸನ್ ಹೆಸರನ್ನು ಮಾತ್ರ ನಾಮನಿರ್ದೇಶನ ಮಾಡಿದ್ದು, ಅವಿರೋಧ ಆಯ್ಕೆಗೆ ಕಾರಣವಾಯಿತು. ಆದರೆ ಸುಪ್ರೀಂ ಕೋರ್ಟ್‌ನ ಮುಂದಿನ ಆದೇಶದವರೆಗೂ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವಂತಿಲ್ಲ.ಪ್ರಮುಖ ರಾಜಕೀಯ ಬೆಳವಣಿಗೆ ಎಂಬಂತೆ ಬಿಸಿಸಿಐ ಉಪಾಧ್ಯಕ್ಷ ಸ್ಥಾನದ ಬದಲಾವಣೆಯಾಗಿದೆ. ಅರುಣ್ ಜೇಟ್ಲಿ ಅವರ ಬದಲಾಗಿ ಉತ್ತರ ವಲಯದಿಂದ ಸ್ನೇಹ್ ಬನ್ಸಲ್ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.ಇನ್ನು ಬಿಸಿಸಿಐ ಖಜಾಂಚಿಯಾಗಿ ಹರಿಯಾಣ ಕ್ರಿಕೆಟ್ ಅಸೋಸಿಯೇಶನ್ ಮುಖ್ಯಸ್ಥ ಅನಿರುದ್ಧ್ ಚೌಧರಿ ಅವರು ಆಯ್ಕೆಯಾಗಿದ್ದಾರೆ.

- **ಮಲಾಲಾಗೆ ‘ಪೀಟರ್ ಜೆ.ಗೋಮ್ಸ್ ಮಾನವತಾವಾದಿ’ ಪ್ರಶಸ್ತಿ:** ತಾಲಿಬಾನಿಗಳ ಹತ್ಯೆ ಯತ್ನದಿಂದ ಪಾರಾದ ಪಾಕಿಸ್ತಾನ ಬಾಲಕಿ ಮಲಾಲಾ ಯೂಸಫ್‌ಝೈ ಅವರಿಗೆ ಹಾರ್ವರ್ಡ್ ವಿಶ್ವವಿದ್ಯಾಲಯ ವರ್ಷದ 'ಪೀಟರ್ ಜೆ.ಗೋಮ್ಸ್ ಮಾನವತಾವಾದಿ' ಪ್ರಶಸ್ತಿ ನೀಡಿ ಗೌರವಿಸಿದೆ. 'ರಾಜಕೀಯ ನಾಯಕರು ಹೆಚ್ಚು ಪ್ರಭಾವಿಗಳಾಗಿರುತ್ತಾರೆ. ತಾಯಿನಾಡಿನಲ್ಲಿ ಬದಲಾವಣೆತರಲು ರಾಜಕಾರಣಿಯಾಗುತ್ತೇನೆ' ಎಂದಿರುವ ಬಾಲಕಿ ಯರ ಶಿಕ್ಷಣ ಪ್ರತಿಪಾದಕಿ ಮಲಾಲಾ, ಶೀಘ್ರ ಪಾಕ್‌ಗೆ ಮರಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

- **ಸೆಪ್ಟೆಂಬರ್ ತಿಂಗಳ ವಿಶೇಷ ದಿನಗಳು: ಸಮಗ್ರ ನೋಟ**

**ಸೆಪ್ಟೆಂಬರ್ 5 ಶಿಕ್ಷಕರ ದಿನ:** ಡಾ.ಸರ್ವಪಲ್ಲಿ ರಾಧಕೃಷ್ಣ ಅವರ ಜನ್ಮದಿನವಾದ ಸೆಪ್ಟೆಂಬರ್ 5 ರಂದು ಭಾರತದಲ್ಲಿ ಶಿಕ್ಷಕರ ದಿನಾಚರಣೆ ಎಂದು ಆಚರಿಸಲಾಗುತ್ತಿದೆ. ರಾಧಾಕೃಷ್ಣ ಅವರು ಭಾರತ ಕಂಡ ಮಹಾ ತತ್ವಜ್ಞಾನಿ. ಅವರ ಇಚ್ಚೆಯಂತೇ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯನ್ನು 1962 ರಿಂದ ಆಚರಿಸಲಾಗುತ್ತಿದೆ.

**ಸೆಪ್ಟೆಂಬರ್ 8 ವಿಶ್ವ ಸಾಕ್ಷರತ ದಿನ**: ಅನಕ್ಷರಸ್ಥ ಸಮುದಾಯಕ್ಕೆ ಶಿಕ್ಷಣದ ಮಹತ್ವವನ್ನು ಸಾರುವ ಉದ್ದೇಶದಿಂದ ಸೆಪ್ಟೆಂಬರ್ 8 ರಂದು ವಿಶ್ವ ಸಾಕ್ಷರತ ದಿನವೆಂದು ಆಚರಿಸಲಾಗುತ್ತಿದೆ, 1965 ರಲ್ಲಿ ಯುನೆಸ್ಕೋ ಈ ದಿನವನ್ನು ವಿಶ್ವ ಸಾಕ್ಷರತ ದಿನವೆಂದು ಘೋಷಿಸಿತು.

**ಸೆಪ್ಟೆಂಬರ್ 14 ವಿಶ್ವ ಭ್ರಾತೃತ್ವ ಮತ್ತು ಕ್ಷಮೆ ದಿನ:** ಸಮಾಜದಲ್ಲಿ ನಮ್ಮೆಲ್ಲರೂ ಒಂದಾಗಿ ಬಾಳುವ ಮತ್ತು ಸಹೋದರತ್ವವನ್ನು ಎತ್ತಿಹಿಡಿಯುವ ಅಂಗವಾಗಿ ಸೆಪ್ಟೆಂಬರ್ 14 ವಿಶ್ವ ಭ್ರಾತೃತ್ವ ಮತ್ತು ಕ್ಷಮೆ ದಿನವೆಂದು ಆಚರಿಸಲಾಗುತ್ತದೆ. ಕ್ಷಮೆ ಕೇಳುವುದರಿಂದ ಶಾಂತಿ ಮೂಡುವುದಲ್ಲದೇ ದ್ವೇಷ ಭಾವವೂ ನಿವಾರಣೆಗೊಳ್ಳಲಿದೆ.

**ಸೆಪ್ಟೆಂಬರ್ 14 ಹಿಂದಿ ದಿವಸ್**: ಸೆಪ್ಟೆಂಬರ್ 14 ರಂದು ಹಿಂದಿ ದಿವಸ್ ಎಂದು ಭಾರತದಲ್ಲಿ ಆಚರಿಸಲಾಗುತ್ತದೆ. 1949 ಈ ದಿನದಂದು ಹಿಂದಿಯನ್ನು ರಾಷ್ಟ್ರದ ಆಡಳಿತ ಭಾಷೆಯನ್ನಾಗಿ ಅಳವಡಿಸಕೊಳ್ಳಲಾಯಿತು. ಆಗಾಗಿ ಈ ದಿನವನ್ನು ಹಿಂದಿ ದಿವಸ್ ಎಂದು ಆಚರಿಸಲಾಗುತ್ತದೆ.

**ಸೆಪ್ಟೆಂಬರ್ 15: ಎಂಜನಿಯರ್ಸ್ ದಿನ:** ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು ಭಾರತದಲ್ಲಿ ಎಂಜನಿಯರ್ಸ್ ದಿನವೆಂದು ಆಚರಿಸಲಾಗುತ್ತಿದೆ. ವಿಶ್ವೇಶ್ವರಯ್ಯ ಅವರು ಜಗತ್ತು ಕಂಡ ಒಬ್ಬ ಸರ್ವಶ್ರೇಷ್ಠ ಎಂಜನಿಯರ್. 1912 ರಿಂದ 1919 ರವರೆಗೆ ಅವರು ಮೈಸೂರು ದಿವಾನ್ ಆಗಿ ಸೇವೆ ಸಲ್ಲಿಸಿದ್ದಾರೆ. ಅಣೆಕಟ್ಟುಗಳು, ರಸ್ತೆಗಳು, ರೈಲ್ವೆ ಕಾಮಗಾರಿಗಳು ಅವರ ತಾಂತ್ರಿಕ ಜ್ಞಾನಕ್ಕೆ ಹಿಡಿದ ಕನ್ನಡಿ.

**ಸೆಪ್ಟೆಂಬರ್ 16 ವಿಶ್ವ ಓಝೋನ್ ದಿನ:** 1995 ರಿಂದ ಸೆಪ್ಟೆಂಬರ್ 16 ನ್ನು ವಿಶ್ವ ಓಝೋನ್ ದಿನವೆಂದು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಓಝೋನ್ ಪದರವನ್ನು ಹಾಳು ಮಾಡುವ ಹಾನಿಕಾರಕ ಅನಿಲಗಳನ್ನು ತಡೆಯುವ ಸಲುವಾಗಿ ಮಾಂಟ್ರಿಯಲ್ ಪ್ರೋಟೋಕಾಲ್ ಗೆ ಸಹಿಹಾಕಿದ ಹಿನ್ನಲೆಯಲ್ಲಿ ಸೆಪ್ಟೆಂಬರ್ 16 ರಂದು ಓಝೋನ್ ದಿನವೆಂದು ಆಚರಿಸಲಾಗುತ್ತಿದೆ.

**ಸೆಪ್ಟೆಂಬರ್ 20 ರೈಲ್ವೆ ಪೋಲಿಸ್ ಸಂಸ್ಥಾಪನಾ ದಿನ**: ಶಾಂತಿಯುತ ವಾತಾವರಣಕ್ಕಾಗಿ ಧೈರ್ಯದಿಂದ ಸೇವೆ ಸಲ್ಲಿಸಿ ನಿವೃತ್ತರಾದ ಹಾಗೂ ಕಾರ್ಯನಿರ್ವಹಿಸುತ್ತಿರುವ ರೈಲ್ವೆ ಪೋಲಿಸ್ ಸಿಬ್ಬಂದಿಗೆ ಈ ದಿನದಂದು ಕೃತಜ್ಞತೆ ಸಲ್ಲಿಸಲಾಗುವುದು.

**ಸೆಪ್ಟೆಂಬರ್ 21 ಅಲ್ಜೀಮಿರ್ ದಿನ**: ಸೆಪ್ಟೆಂಬರ್ 21 ರಂದು ವಿಶ್ವ ಅಲ್ಜೀಮಿರ್ ದಿನವೆಂದು ಆಚರಿಸಲಾಗುತ್ತದೆ. ಅಲ್ಜೀಮಿರ್ ಕಾಯಿಲೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು. ಸೆಪ್ಟೆಂಬರ್ 21 ರಂದು ಅಂತರರಾಷ್ಟ್ರೀಯ ಶಾಂತಿ ದಿನವೆಂತಲೂ ಆಚರಿಸಲಾಗುತ್ತದೆ.

**ಸೆಪ್ಟೆಂಬರ್ 24 ವಿಶ್ವ ಕಿವುಡರ ದಿನ:** ವಿಶ್ವ ಕಿವುಡರ ದಿನವನ್ನು ಸೆಪ್ಟೆಂಬರ್ 24 ರಂದು ಆಚರಿಸಲಾಗುವುದು. ವಿಶ್ವ ಕಿವುಡರ ಫೆಡರೇಶನ್ 1958 ರಲ್ಲಿ ಮೊದಲ ಬಾರಿಗೆ ಈ ದಿನವನ್ನು ಆಚರಣೆ ಮಾಡಿತು, ಬಳಿಕ ಸೆಪ್ಟೆಂಬರ್ ಕೊನೆಯ ವಾರವನ್ನು ವಿಶ್ವ ಕಿವುಡರ ವಾರವೆಂದು ಆಚರಿಸಲಾಗುತ್ತಿದೆ,

**ಸೆಪ್ಟೆಂಬರ್ 27 ವಿಶ್ವ ಪ್ರವಾಸೋದ್ಯಮ ದಿನ:** ಸೆಪ್ಟೆಂಬರ್ 27 ವಿಶ್ವ ಪ್ರವಾಸೋದ್ಯಮ ದಿನ. ಪ್ರವಾಸೋದ್ಯಮದ ಮಹತ್ವ ಮತ್ತು ಅದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮಹತ್ವದ ಬಗ್ಗೆ ಈ ದಿನದಂದು ಅರಿವು ಮೂಡಿಸಲಾಗುವುದು.

**ಸೆಪ್ಟೆಂಬರ್ 28 ವಿಶ್ವ ರೇಬಿಸ್ ದಿನ:** ಸೆಪ್ಟೆಂಬರ್ 28 ವಿಶ್ವ ರೇಬಿಸ್ ದಿನ. ಹುಚ್ಚು ನಾಯಿ ಕಡಿತದಿಂದ ಉಂಟಾಗುವ ಈ ಮಾರಕ ಕಾಯಿಲೆಗೆ ಲೂಯಿಸ್ ಪಾಶ್ವರ್ ಲಸಿಕೆ ಕಂಡುಹಿಡಿದರು. ಆಗಾಗಿ ಲೂಯಿಸ್ ಅವರ ಜನ್ಮದಿನವನ್ನು ರೇಬಿಸ್ ದಿನವೆಂದು ಆಚರಿಸಲಾಗುತ್ತಿದೆ. ರೇಬಿಸ್ ರೋಗದ ಬಗ್ಗೆ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮವನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು.

**ಸೆಪ್ಟೆಂಬರ್ 29 ವಿಶ್ವ ಹೃದಯ ದಿನ**: ವಿಶ್ವ ಹೃದಯ ದಿನವನ್ನು ಸೆಪ್ಟೆಂಬರ್ 29 ರಂದು ಆಚರಿಸಲಾಗುತ್ತಿದೆ. 2000 ಇಸವಿಯಲ್ಲಿ ಮೊದಲ ಬಾರಿಗೆ ಆಚರಿಸಲಾಗಿತ್ತು. ಹೃದಯ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಬಗ್ಗೆ ಜನರಲ್ಲಿ ಅರಿವು ತರುವುದು ಈ ದಿನದ ಉದ್ದೇಶ.

ಕರುನಾಡು ಎಗ್ಸಾಮ್ಸ್